Swabhimani Sahakari

Pages - 28, ₹12

Volume -13

Issue - 08

August - 2016


# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ
ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ವಂದೇ ಮಾತರಮ್
ಸುಜಲಾಮ್ ಸುಫಲಾಮ್
ಮಲಯಜ ಶೀತಲಾಮ್
ಸಸ್ಯಶ್ಯಾಮಲಾಮ್
ಮಾತರಮ್

ಶುಭ್ರ ಜ್ಯೋತ್ಸ್ನಾ
ಪುಲಕಿತ ಯಾಮಿನೀಮ್
ಪುಲ್ಲಕುಸುಮಿತ
ದ್ರುಮದಲ ಶೋಭಿನೀಮ್

ಸುಹಾಸಿನೀಮ್
ಸುಮಧುರ ಭಾಷಿಣೀಮ್
ಸುಖದಾಮ್ ವರದಾಮ್
ಮಾತರಮ್

ವಂದೇ ಮಾತರಮ್

–ಬಂಕಿಮ್ ಚಂದ್ರ ಚಟರ್ಜಿ

ಸಂಯುಕ್ತ ಸಹಕಾರಿಯ
15ನೇ ವಾರ್ಷಿಕ ಸಾಮಾನ್ಯ ಸಭೆ
ದಿನಾಂಕ 24 ಆಗಸ್ಟ್ 2016
ಸ್ಥಳ : ಜ್ಞಾನ ಜ್ಯೋತಿ ಸಭಾಂಗಣ,
ಬೆಂಗಳೂರು.



ಆಗಸ್ಟ್ 15




12 ವರಮಹಾಲಕ್ಷ್ಮಿ ವ್ರತ



18 ರಕ್ಷಾ ಬಂಧನ



25 ಶ್ರೀಕೃಷ್ಣ ಜನ್ಮಾಷ್ಟಮಿ


▶▶ ಸೌಹಾರ್ದ ಸಹಕಾರಿಗಳ ಸಂಖ್ಯೆ : 3757 ▶▶ 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 951



# ಸೌಹಾರ್ದ ಸಹಕಾರಿ ಕಾಯ್ದೆ ತಿದ್ದುಪಡಿ ಸಹಕಾರ ಸಚಿವರಿಗೆ ಕೃತಜ್ಞತೆ : ಸಹಕಾರಿಗಳಿಗೆ ಸ್ವಲ್ಪ ಸಮಾಧಾನ

ರಾಜ್ಯದ ಎಲ್ಲಾ ಸಹಕಾರಿ ಬಂಧುಗಳಿಗೆ ಸ್ವಾತಂತ್ರ್ಯೋತ್ಸವ, ವರಮಹಾಲಕ್ಷ್ಮಿ, ರಕ್ಷಾಬಂಧನ ಹಾಗೂ ಶ್ರೀ ಕೃಷ್ಣ ಜನ್ಮಾಷ್ಟಮಿಯ ಶುಭಾಷಯಗಳು.

ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿಗೆ ರಾಜ್ಯ ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನಲ್ಲಿ ಅನುಮೋದನೆ ದೊರಿತಿದೆ. ಗೌರವಾನ್ವಿತ ರಾಜ್ಯಪಾಲರ ಅನುಮೋದನೆ ಪಡೆದ ನಂತರ ಆದೇಶ ಹೊರಡಿಸಬೇಕಿದೆ.

ಇದು ಸೌಹಾರ್ದ ಸಹಕಾರಿ ಕಾಯ್ದೆಗೆ ರಾಜ್ಯ ಸರಕಾರ ಜಾರಿಗೆ ತರುತ್ತಿರುವ 5ನೇ ತಿದ್ದುಪಡಿ. ಈ ತಿದ್ದುಪಡಿಯಲ್ಲಿ ಒಟ್ಟು 14 ಕಲಂಗಳಿಗೆ ತಿದ್ದುಪಡಿಗಳನ್ನು ತರಲಾಗಿದೆ. ಈ ತಿದ್ದುಪಡಿಯಲ್ಲಿ ಪ್ರಮುಖವಾಗಿ ಸಹ ಸದಸ್ಯರ ಸಂಖ್ಯೆಯ ಪ್ರಮಾಣ ಶೇಕಡಾ 10 ಇದ್ದದ್ದು ಶೇಕಡಾ 15ಕ್ಕೆ ಹೆಚ್ಚಳವಾಗಿರುವುದು, ಪದಾಧಿಕಾರಿಗಳ ಮೇಲೆ ಅವಿಶ್ವಾಸ ನಿರ್ಣಯಕ್ಕೆ ಅವಕಾಶ, ಸೌಹಾರ್ದ ಸಹಕಾರಿ ಕ್ಷೇತ್ರ ಸಾರ್ವಜನಿಕ ಕ್ಷೇತ್ರವಾಗಿರುವುದಿಲ್ಲ, ಇದು ಸಮಾನ ಮನಸ್ಕರ, ಸಮಾನ ಉದ್ದೇಶ ಸಾಧನೆಗಾಗಿ ಸಮಾನತೆಯ ತಳಹದಿಯ ಮೇಲೆ ಕಟ್ಟಿಕೊಂಡಿರುವ ಸಂಸ್ಥೆ. ಆದಾಗ್ಯೂ, ಕಾಯ್ದೆಯಲ್ಲಿ ಮೀಸಲಾತಿಯ ಅವಕಾಶ ಕಲ್ಪಿಸಿದೆ. ಆದ್ದರಿಂದ, ಸಹಕಾರಿಯ ಆಡಳಿತ ಮಂಡಲಿ ಸಭೆಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರಿಗೆ ಪ್ರತ್ಯೇಕ ಮೀಸಲಾತಿ ಕಲ್ಪಿಸಿರುವುದು ವಿಶೇಷವಾಗಿ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಇದು ಅನಗತ್ಯವಾಗಿತ್ತು. ಹೀಗಾಗಿ ಒಟ್ಟು ಮೀಸಲಾತಿ ಸಂಖ್ಯೆಯನ್ನು 6 ಹೆಚ್ಚಿಸಿ ಆಡಳಿತ ಮಂಡಲಿ ಸಭೆಯ ನಿರ್ದೇಶಕರ ಸಂಖ್ಯೆ ಕನಿಷ್ಠ 13ಕ್ಕೆ ಹೆಚ್ಚಿಸಲಾಗಿದೆ. ಜೊತೆಗೆ ಲೆಕ್ಕಪರಿಶೋಧನೆ, ಪರಿವೀಕ್ಷಣೆ ಹಾಗೂ ಪರಿಶೀಲನೆ ಸಂದರ್ಭಗಳಲ್ಲಿ ಸಹಕಾರಿ ಸದಸ್ಯರ ಹಿತರಕ್ಷಣೆ ದೃಷ್ಟಿಯಿಂದ ಸಹಕಾರಿಯ ಪುಸ್ತಕಗಳನ್ನು ಜಪ್ತು ಮಾಡುವ ಅಧಿಕಾರ ಹಾಗೂ ಒಂದು ಸಹಕಾರಿಯ ಸಮಾಪನೆ ಕಾರ್ಯಗಳು ಮುಗಿದ ನಂತರ ಸಹಕಾರಿಯಲ್ಲಿ ಉಳಿದ ಮೊತ್ತವನ್ನು ಸಂಯುಕ್ತ ಸಹಕಾರಿಗೆ ವರ್ಗಾಯಿಸುವುದು ಹೀಗೆ ಇನ್ನೂ ಕೆಲವು ತಿದ್ದುಪಡಿಗಳು ಅನುಮೋದನೆಯಾಗಿವೆ.

ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಸಂಯುಕ್ತ ಸಹಕಾರಿ ಸೌಹಾರ್ದ ಸಹಕಾರಿ ಕಾಯ್ದೆಯ ಅನೇಕ ತಿದ್ದುಪಡಿಗಳಿಗೆ ರಾಜ್ಯ ಸರಕಾರವನ್ನು ಒತ್ತಾಯ ಮಾಡಲಾಗಿತ್ತು. ವಿಶೇಷವಾಗಿ ಸಹಕಾರ ಸಚಿವರನ್ನು ಹಲವಾರು ಬಾರಿ ಭೇಟಿ ಮಾಡುವುದರ ಜೊತೆಗೆ ಸಹಕಾರ ಇಲಾಖೆಯ ಅಧಿಕಾರಿಗಳನ್ನು ಭೇಟಿ ಮಾಡಿ ಸೌಹಾರ್ದ ಸಹಕಾರಿ ಕಾಯ್ದೆಗೆ ತಿದ್ದುಪಡಿಗಳು ಸೌಹಾರ್ದ ಸಹಕಾರಿ ಕಾಯ್ದೆಯ ಆಶಯಕ್ಕೆ ಪೂರಕವಾಗಿರುವಂತೆ ಇರಬೇಕು, ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ಪೂರಕವಾಗಿರಬೇಕು ಎಂದು ಮನವಿಗಳನ್ನು ಸಲ್ಲಿಸಲಾಗಿತ್ತು. ನಮ್ಮ ಎಲ್ಲಾ ಮನವಿಗಳಿಗೆ ಸ್ಪಂದಿಸಿದ ಸರಕಾರ ಪ್ರಸ್ತುತ ಕೆಲವು ತಿದ್ದುಪಡಿಗಳನ್ನು ಮಾತ್ರ ಅನುಮೋದಿಸಿದೆ. ಮುಂಬರುವ ದಿನಗಳಲ್ಲಿ ಬಾಕಿ ಉಳಿದಿರುವ ತಿದ್ದುಪಡಿಗಳನ್ನು ಜಾರಿಗೆ ಕೊಡುವ ಪ್ರಯತ್ನ ಜಾರಿಯಲ್ಲಿರಲಿ ಎಂದು ಸಂಯುಕ್ತ ಸಹಕಾರಿಯು ಆಶಿಸುತ್ತದೆ.

ನಮ್ಮ ಎಲ್ಲಾ ಮನವಿಗಳಿಗೆ ಸ್ಪಂದಿಸಿದ ಸರಕಾರ ಪ್ರಸ್ತುತ ಕೆಲವು ತಿದ್ದುಪಡಿಗಳನ್ನು ಮಾತ್ರ ಅನುಮೋದಿಸಿದೆ. ಮುಂಬರುವ ದಿನಗಳಲ್ಲಿ ಬಾಕಿ ಉಳಿದಿರುವ ತಿದ್ದುಪಡಿಗಳನ್ನು ಜಾರಿಗೆ ಕೊಡುವ ಪ್ರಯತ್ನ ಜಾರಿಯಲ್ಲಿರಲಿ ಎಂದು ಸಂಯುಕ್ತ ಸಹಕಾರಿಯು ಆಶಿಸುತ್ತದೆ.

ರಾಜ್ಯದ 3750ಕ್ಕೂ ಹೆಚ್ಚು ಸೌಹಾರ್ದ ಸಹಕಾರಿಗಳಲ್ಲಿ ಒಂದೆರಡು ಸಹಕಾರಿಗಳ ಕಾರ್ಯಚಟುವಟಿಕೆಗಳು ಸದಸ್ಯರ ಹಾಗೂ ಹೂಡಿಕೆದಾರರ ಹಿತ ಕಾಪಾಡುವಲ್ಲಿ ವಿಫಲವಾಗಿವೆ. ಹಾಗೆಂದ ಮಾತ್ರಕ್ಕೆ ಸೌಹಾರ್ದ ಸಹಕಾರಿ ಆಶಯಕ್ಕೆ ಧಕ್ಕೆ ಬರುವ ಹಾಗೇ ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿಗಳ ಸ್ವಾಯತ್ತತೆಯನ್ನು ಕಡಿತಗೊಳಿಸುವ ಪ್ರಯತ್ನ ಸರಕಾರದಿಂದ ಆಗಬಾರದು ಎಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆ. ತಪ್ಪು ಮಾಡಿರುವ ಸಹಕಾರಿಗಳ ಮೇಲೆ ಕಾನೂನು ಕ್ರಮ ಜರುಗಿಸಲಾಗುತ್ತಿದೆ. ತಪ್ಪಿತಸ್ಥರು ಯಾರೇ ಆಗಲಿ ಅವರ ವಿರುದ್ಧ ಕ್ರಮವಿಡಲಾಗುವುದು ಹಾಗೂ ಸದಸ್ಯರ ಹಿತ ಕಾಪಾಡುವ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

ಪ್ರಸ್ತುತ ಜಾರಿಗೊಳಿಸುತ್ತಿರುವ ಸೌಹಾರ್ದ ಸಹಕಾರಿ ಕಾಯ್ದೆಯ ತಿದ್ದುಪಡಿಗಳಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಲಿಯು ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ರಾಜ್ಯ ಸರಕಾರ ಹಾಗೂ ಸಹಕಾರ ಸಚಿವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

▸▸ **ಗುರುನಾಥ ಜಾಂತಿಕರ,** ಅಧ್ಯಕ್ಷರು

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

**ಶ್ರೀ ಗುರುನಾಥ ಜಾಂತಿಕರ**
ಗೌರವ ಅಧ್ಯಕ್ಷರು

**ಶ್ರೀ ಹೆಚ್.ವಿ.ರಾಜೀವ**
ಗೌರವ ಉಪಾಧ್ಯಕ್ಷರು

**ಶ್ರೀ ಎಸ್.ಆರ್.ಸತೀಶಚಂದ್ರ**
ಗೌರವ ಸದಸ್ಯರು

**ಶ್ರೀ ಶರಣಗೌಡ ಜಿ. ಪಾಟೀಲ್**
ಸಂಪಾದಕರು

**ಶ್ರೀ ವಿ.ಜೆ.ಕಾರಕೂನ**
ಸಂಚಾಲಕರು

**ಶ್ರೀ ರಘುನಂದನ ಕೆ.**
ಸದಸ್ಯರು



**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
"ನಿರ್ಮಾಣ ಭವನ", ಡಾ.ರಾಜಕುಮಾರ್ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010.
ದೂರವಾಣಿ/ ಫ್ಯಾಕ್ಸ್ : 080-23378375-80, 23474408, 23573291
ಇ-ಮೇಲ್ : souharda@souharda.coop
ವೆಬ್‌ಸೈಟ್ : www.souharda.coop


## ಒಳ ಪುಟಗಳಲ್ಲಿ . . .


15ನೇ ವಾರ್ಷಿಕ ಸಾಮಾನ್ಯ ಸಭೆ ನೋಟಿಸ್ ............. 5

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ಕ್ಕೆ 2016ರಲ್ಲಿ (ಇತ್ತೀಚಿಗೆ) ಆಗಿರುವ ತಿದ್ದುಪಡಿಯ ಮುಖ್ಯಾಂಶಗಳು .................... 6

ಸೌಹಾರ್ದ ಸಹಕಾರಿ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ "ಬ್ಯಾಂಕಿಂಗ್ ಮೂಲ ಮಾಹಿತಿ ತರಬೇತಿ" ................ 8

ವಿಭಾಗೀಯ ತರಬೇತಿ ಕಾರ್ಯಕ್ರಮಗಳು ..................10-13

ಸೌಹಾರ್ದ ಸಹಕಾರಿ ಸಮಾಚಾರಗಳು ............. 14-22

ಪ್ರಶ್ನೆ - ಉತ್ತರ ..................................................... 23

ವಿವಾದಗಳನ್ನು ದಾಖಲು ಮಾಡುವಾಗ ಅನುಸರಿಸಬೇಕಾದ ಕ್ರಮಗಳು ......................................................... 24

ಕಗ್ಗ ಪದ್ಯಗಳಲ್ಲಿ ಸಹಕಾರ ಸಾರ - 4 ................... 26

Reserve Bank of India News ..................... 27


# ಸಂಪಾದಕೀಯ

## ಸೌಹಾರ್ದ ಸಹಕಾರ ಬ್ಯಾಂಕುಗಳ ಕಾರ್ಯನಿರ್ವಹಣೆಗೆ ಆರ್.ಬಿ.ಐ. ಅಧಿಕಾರಿಗಳ ಮೆಚ್ಚುಗೆ

ದಿನಾಂಕ 12.07.2016ರಂದು ಸಂಯುಕ್ತ ಸಹಕಾರಿಯು ಏರ್ಪಡಿಸಿದ್ದ ಬ್ಯಾಂಕಿಂಗ್ ಮೂಲ ಮಾಹಿತಿ ತರಬೇತಿ ಶಿಬಿರದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಆರ್.ಬಿ.ಐ.ನ ಪಟ್ಟಣ ಸಹಕಾರ ಬ್ಯಾಂಕುಗಳ ವಿಭಾಗದ ಪ್ರಧಾನ ವ್ಯವಸ್ಥಾಪಕರಾದ ಶ್ರೀ ಆರ್.ಎನ್.ಪಾಣಿಗ್ರಾಹಿ ಹಾಗೂ ದಿನಾಂಕ 18.07.2016ರಂದು ಸಮಾರೋಪ ಭಾಷಣ ಮಾಡಿದ ಸಹ ಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಅಂಬುಜಾ ಲಕ್ಷ್ಮೀನಾರಾಯಣರವರು ಸೌಹಾರ್ದ ಸಹಕಾರಿ ಕ್ಷೇತ್ರದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ 18 ಸೌಹಾರ್ದ ಸಹಕಾರಿ ಬ್ಯಾಂಕುಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಇವುಗಳ ಬಗ್ಗೆ ಆರ್.ಬಿ.ಐ. ಆಕ್ಷೇಪಗಳು ಇರುವುದಿಲ್ಲ ಎಂದು ತಿಳಿಸಿರುವುದು ಸ್ವಾಗತಾರ್ಹ ಹಾಗೂ ಸಂತೋಷದ ವಿಷಯ.

ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ 264 ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ 18 ಬ್ಯಾಂಕುಗಳು ಸೌಹಾರ್ದ ಸಹಕಾರಿ ಕಾಯ್ದೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ಪಟ್ಟಣ ಸಹಕಾರ ಬ್ಯಾಂಕುಗಳು ಆಧುನಿಕತೆಯನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸುತ್ತಿರುವ ಬಗ್ಗೆ ರಿಸರ್ವ್ ಬ್ಯಾಂಕಿನ ಅಧಿಕಾರಿಗಳು ಮೆಚ್ಚುಗೆ ವ್ಯಕ್ತಪಡಿಸಿರುವುದು ಸೌಹಾರ್ದ ಸಹಕಾರಿ ಕ್ಷೇತ್ರದ ಹಿರಿಮೆಯನ್ನು ಹಾಗೂ ಪ್ರೌಢಿಮೆಯನ್ನು ಹೆಚ್ಚಿಸಿವೆ. ಈ ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ವರ್ಗ ಹಾಗೂ ಸಿಬ್ಬಂದಿಯವರು ಅಭಿನಂದನಾರ್ಹರು.

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯನಿರ್ವಹಣೆಗೆ ಸೌಹಾರ್ದ ಸಹಕಾರಿ ಬ್ಯಾಂಕುಗಳ ಕಾರ್ಯನಿರ್ವಹಣೆ ಒಂದು ಮಾದರಿಯಂತಿದೆ. ಸಮಗ್ರ ಸೌಹಾರ್ದ ಸಹಕಾರಿ ಕ್ಷೇತ್ರ ಯುವ ಪೀಳಿಗೆಯ ನವ ಸಹಕಾರಿ ಸಂಸ್ಥೆಗಳು ಎಂದು ಈ ಕ್ಷೇತ್ರವನ್ನು ಕೆಲವರು ಹೇಳುವುದು ವಾಸ್ತವ ಎಂದು ಅನಿಸುತ್ತದೆ. ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿ ವೃತ್ತಿಪರತೆ ಹಾಗೂ ಪಾರದರ್ಶಕತೆಯ ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸುವ ಅಗತ್ಯತೆಯನ್ನು ಅರಿತು ಸಹಕಾರ ಬ್ಯಾಂಕುಗಳ ಮಾದರಿಯಲ್ಲೇ ಈ ಕ್ಷೇತ್ರದ ಸಹಕಾರಿಗಳು ಕಾರ್ಯನಿರ್ವಹಿಸಿದಲ್ಲಿ ಸಮಗ್ರ ಸೌಹಾರ್ದ ಸಹಕಾರಿ ಕ್ಷೇತ್ರ ಅಭಿವೃದ್ಧಿ ಹೊಂದಲು ಸಾಧ್ಯ ಹಾಗೆಯೇ ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಸೌಹಾರ್ದ ಸಹಕಾರಿ ಬ್ಯಾಂಕುಗಳ ಸಂಖ್ಯೆಯನ್ನು ಹೆಚ್ಚಿಸಲು ಪ್ರಯತ್ನಗಳು ನಡೆಯಬೇಕು. ಈ ನಿಟ್ಟಿನಲ್ಲಿ ಈಗಿರುವ ಬ್ಯಾಂಕುಗಳ ಸಿಬ್ಬಂದಿಗಳು ಹಾಗೂ ಆಡಳಿತ ಮಂಡಲಿಯವರ ಪಾತ್ರ ಬಹಳ ಪ್ರಮುಖ ಎಂಬುದು ನನ್ನ ಅಭಿಪ್ರಾಯ.



## ಜ್ಞಾನ ಜ್ಯೋತಿ

ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರ
ಉಪನ್ಯಾಸ ಸಂಗ್ರಹಗಳ ಆಯ್ದ ಭಾಗ

### ಪ್ರಾಮಾಣಿಕತೆ

'ಸತ್ಯಂ ವದ । ಧರ್ಮಂ ಚರ ।' ಸತ್ಯವನ್ನೇ ನುಡಿ. ಧರ್ಮದಲ್ಲೇ ನಡೆ. ಇದು ಸರ್ವಶ್ರೇಷ್ಠವಾದ ಉಪದೇಶ. ದಿವ್ಯ ಜೀವನದ ಮಾರ್ಗದರ್ಶಕ ನುಡಿ ಇದು. ಪ್ರಾಪಂಚಿಕ ಜೀವನದಲ್ಲಿ ನಾವು ಎದುರಿಸುವ ಸಮಸ್ಯೆಗಳಿಗೆಲ್ಲ ಪರಿಹಾರ ಈ ಮಹಾವಾಕ್ಯದಲ್ಲಿದೆ. ಹೆಚ್ಚೇನು ಈ ಭೂಮಿಗೆ ಸ್ವರ್ಗವನ್ನೇ ಇಳಿಸುವ ಸಾಮರ್ಥ್ಯ ಈ ಪವಿತ್ರ ಮಂತ್ರದಲ್ಲಿದೆ. ಮೊದಲನೆಯದಾಗಿ ನಾವು ಪರಮಸತ್ಯ ಪರಮಾತ್ಮನನ್ನು ಅನುಭವಿಸಿ ಆನಂದಿಸಬೇಕು. ನಾವು ಕಂಡುಂಡ ಆ ಪರಮಸತ್ಯವನ್ನೇ ನಮ್ಮ ನುಡಿಯಲ್ಲಿ ಎಡೆ ಮಾಡಬೇಕು, ಅಭಿವ್ಯಕ್ತಗೊಳಿಸಬೇಕು. ಎರಡನೆಯದಾಗಿ ನಾವು ನುಡಿದಂತೆ ನಡೆಯಬೇಕು. ಧರ್ಮಮಾರ್ಗದಲ್ಲಿ ಸಾಗಬೇಕು. ಸತ್ಯವನ್ನೇ ನುಡಿಯುವುದು, ನುಡಿದಂತೆಯೇ ನುಡಿಯುವುದು ಇವೆರಡೇ ನಮ್ಮ ಜೀವನದ ಸೌಭಾಗ್ಯ! ನಾವು ಕೇವಲ ಸಿರಿವಂತರಾಗಲು ಈ ಜಗತ್ತಿಗೆ ಬರಲಿಲ್ಲ: ಹೃದಯವಂತರಾಗಲು, ಧರ್ಮವಂತರಾಗಲು, ಸತ್ಯವಂತರಾಗಲು ಬಂದೆವು! ಆ ಪರಮಸತ್ಯದ ಸ್ವರೂಪವನ್ನು ನಾವು ತಿಳಿಯೋಣ.

'ಸತ್ಯಂ ಏಕಪದಂ ಬ್ರಹ್ಮ' ಸತ್ಯವು ಒಂದೇ ಒಂದಾಗಿದೆ. ಸತ್ಯವೇ ಸರ್ವಾಧಾರವಾಗಿದೆ. ಸತ್ಯವೇ ಸರ್ವತ್ರ ವ್ಯಾಪಿಸಿಕೊಂಡಿದೆ. ದೇವರಿಗೆ ಬ್ರಹ್ಮವೆಂದೂ ಕರೆಯುತ್ತಾರೆ. ಈ ಸತ್ಯವೇ ದೇವರೇ ಸತ್ಯ! 'ಬ್ರಹತ್ರವಾತ್ ಬೃಂಹಣಾಚ್ಚ ಬ್ರಹ್ಮ !' ಯಾವುದು ಅತ್ಯಂತ ದೊಡ್ಡದಾಗಿದೆಯೋ ಸರ್ವವ್ಯಾಪಿಯಾಗಿದೆಯೋ ಅದೇ ದೇವರು. ನಾವು, ನೀವು ಒಂದು ಊರಲ್ಲಿದ್ದರೆ ಇನ್ನೊಂದೂರಲ್ಲಿ ಇರುವುದಿಲ್ಲ. ಹೀಗೆ ಈ ಪ್ರಪಂಚದಲ್ಲಿ ಇರುವ ಎಲ್ಲ ವಸ್ತು, ವ್ಯಕ್ತಿ ಒಂದೆಡೆ ಇರುತ್ತವೆ. ಇನ್ನೊಂದೆಡೆ ಇರುವುದಿಲ್ಲ. ಅವು ಅಲ್ಪವ್ಯಾಪಿ! ಅವನಷ್ಟು ದೊಡ್ಡದಾದುದು ಈ ಜಗತ್ತಿನಲ್ಲಿ ಇನ್ನೊಂದಿಲ್ಲ! ಸಮಸ್ತ ಪ್ರಪಂಚವೆಲ್ಲವೂ ಆ ಪರಮಾತ್ಮನ ಒಡಲಲ್ಲಿ ಅಡಗಿಕೊಂಡಿದೆ.

ಈ ಜಗತ್ತಿಗೆ ನಾವು ಬರೀ ಗಳಿಸಲು, ಉಳಿಸಲು, ಹೋರಾಡಲು ಅತ್ತು-ಕರೆಯಲು ಬರಲಿಲ್ಲ! ಇಂಥ ಸುಂದರವಾದ ದೇಹ, ಕೈ, ಕಾಲು ಇರುವಾಗ ನಮ್ಮ ಕೈ ಕಾಲುಗಳಿಗೆ ಆರು ಬೆರಳುಗಳಿಲ್ಲ, ಐದೇ ಬೆರಳುಗಳಿವೆ ಎಂದು ಅಳುವುದು ಸರಿಯೇ? ಇರುವ ಐದು ಬೆರಳುಗಳನ್ನೇ ಸರಿಯಾಗಿ ಬಳಸದೇ ಆರನೆಯ ಬೆರಳನ್ನು ಬಯಸುವುದು ಯೋಗ್ಯವೇ? ನಮ್ಮಂತಹ ದೇಹ, ಮನ, ಬುದ್ಧಿ ಇನ್ನಾರಿಗಿದೆ? ನಮ್ಮಂಥ ಸಿರಿವಂತರು ದೇಹ, ಮನ, ಬುದ್ಧಿ ಇನ್ನಾರಿಗಿದೆ? ನಮ್ಮಂಥ ಸಿರಿವಂತರು ನಾವೇ!!

ನಾವು ಇನ್ನೊಬ್ಬರಿಗೆ ಮೋಸ ಮಾಡಿದರೆ, ಇನ್ನೊಬ್ಬರು ನಮಗೆ ಮೋಸ ಮಾಡುತ್ತಾರೆ. ನಾವು ಹಾಲಿಗೆ ನೀರು ಬೆರಿಸಿದರೆ ಅವರು ಕಾಳುಕಡಿಗೆ ಕಲ್ಲು ಮಣ್ಣು ಬೆರೆಸಿ ನಮಗೆ ಕೊಡುತ್ತಾರೆ. ಹೀಗೆ ಅನ್ಯರಿಗೆ ಮೋಸ-ವಂಚನೆ ಮಾಡಿ, ಆಯುಷ್ಯದ ತುಂಬಾ ಕೋರ್ಟು ಕಛೇರಿಗೆ ಅಲೆದಾಡಲು ನಾವು ಈ ಜಗತ್ತಿಗೆ ಬರಲಿಲ್ಲ. ಸತ್ಯವನ್ನೇ ನುಡಿದು ಸನ್ಮಾರ್ಗದಲ್ಲಿ, ಧರ್ಮಪಥದಲ್ಲಿ ನಡೆದು ಸದ್ಗತಿ ಪಡೆಯಲು ಬಂದೆವು.

ಎಷ್ಟು ಹಣ ತಂದರೂ ಸಾಲದೇ ಇರುವುದೇ ಸಾಲ, ಅತಿಯಾಸೆಯಿಂದ ಅಂಥ ಸಾಲ-ಶೂಲ, ಮೋಸ-ವಂಚನೆ ಮಾಡಿ ದಾರಿದ್ರ್ಯದ, ದುಃಖದ ಜೀವನ ಸಾಗಿಸಲು ನಾವು ಈ ಜಗತ್ತಿಗೆ ಬರಲಿಲ್ಲ. ಸತ್ಯವನ್ನೇ ನುಡಿದು, ನುಡಿದಂತೆ ನಡೆದು, ಧರ್ಮದಿಂದ ಬದುಕಿ, ದೇವರ ಕರುಣೆಯನ್ನು ಪಡೆದು ಜೀವನ ಪಾವನಗೊಳಿಸಲು ಬಂದೆವು. ಇದುವೇ ಪ್ರಾಮಾಣಿಕತೆ!!.

## ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯದ ವಿಳಾಸ

ಪ್ರಸ್ತುತ ಸೌಹಾರ್ದ ಸಹಕಾರಿಗಳಿಗಾಗಿ ಕರ್ನಾಟಕ ಘನ ಸರ್ಕಾರದಿಂದ ಕರ್ನಾಟಕ ನಾಗರೀಕ ಸೇವಾ ನಿಯಮ 441ರಡಿ ಮಂಜೂರಾಗಿರುವ **ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯವು ನಂ.246, 17 & 18ನೇ ಕ್ರಾಸ್ ಮಧ್ಯ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560055 ಇಲ್ಲಿ ಕಾರ್ಯಾರಂಭ ಮಾಡಿರುತ್ತದೆ. ದೂರವಾಣಿ ಸಂಖ್ಯೆ : 080-23449933/34. ಮೇಲ್ ಐಡಿ : 441court@souharda.coop.**

ರಾಜ್ಯದ ಸೌಹಾರ್ದ ಸಹಕಾರಿಗಳು ಇನ್ನು ಮುಂದೆ ತಮ್ಮ ಸೌಹಾರ್ದ ಸಹಕಾರಿಗಳಲ್ಲಿನ ವಿವಾದಗಳನ್ನು ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯದಲ್ಲಿ ದಾಖಲಿಸಬಹುದಾಗಿದ್ದು, ತಮ್ಮ ಸೌಹಾರ್ದ ಸಹಕಾರಿಗಳ ವಿವಾದಗಳನ್ನು ಈ ಮೇಲ್ಕಂಡ ವಿಳಾಸಕ್ಕೆ ಕಳುಹಿಸಿ ದಾಖಲಿಸಲು ಈ ಮೂಲಕ ಕೋರಿದೆ.

# ಸಂಯುಕ್ತ ಸಹಕಾರಿಯ 15ನೇ ವಾರ್ಷಿಕ ಸಾಮಾನ್ಯ ಸಭೆ

ಸಂಯುಕ್ತ ಸಹಕಾರಿಯ 15ನೇ ವಾರ್ಷಿಕ ಸಾಮಾನ್ಯ ಸಭೆಯನ್ನು **ದಿನಾಂಕ 24 ಆಗಸ್ಟ್ 2016ರಂದು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನ ಜ್ಯೋತಿ ಸಭಾಂಗಣ, ಪ್ಯಾಲೇಸ್ ರಸ್ತೆ, ಬೆಂಗಳೂರು–560 009 (ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿಗೆ ಹತ್ತಿರ) ಇಲ್ಲಿ ಬೆಳಿಗ್ಗೆ 11–00 ಗಂಟೆಗೆ** ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಸಭೆಯ ನೋಟೀಸನ್ನು ಸದಸ್ಯರ ಮಾಹಿತಿಗಾಗಿ ಹಾಗೂ ಅರ್ಹ ಸದಸ್ಯ ಸಹಕಾರಿಗಳ ಭಾಗವಹಿಸುವಿಕೆಗಾಗಿ ಪ್ರಕಟಿಸಲಾಗಿದೆ. ಅರ್ಹ ಸದಸ್ಯರ ಪಟ್ಟಿ ಹಾಗೂ ಹೆಚ್ಚಿನ ವಿವರಗಳಿಗಾಗಿ www.souharda.coop. ಅನ್ನು ಸಂಪರ್ಕಿಸುವುದು.

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ**

**'ನಿರ್ಮಾಣ ಭವನ', ಡಾ.ರಾಜ್‌ಕುಮಾರ್ ರಸ್ತೆ, 1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–10.**

**06 ಆಗಸ್ಟ್ 2016**

## 15ನೇ ವಾರ್ಷಿಕ ಸಾಮಾನ್ಯ ಸಭೆ

**24 ಆಗಸ್ಟ್ 2016**

ಮಾನ್ಯರೇ,

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯನ್ನು 24 ಆಗಸ್ಟ್ 2016, ಬುಧವಾರದಂದು ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು ವಿಶ್ವವಿದ್ಯಾಲಯ (ಸೆಂಟ್ರಲ್ ಕಾಲೇಜು) ಆವರಣ, ಮೈಸೂರು ಬ್ಯಾಂಕ್ ಹತ್ತಿರ, ಬೆಂಗಳೂರು ಇಲ್ಲಿ ಬೆಳಿಗ್ಗೆ 11.00 ಗಂಟೆಗೆ ಕರೆಯಲಾಗಿದೆ. ಈ ಸಭೆಗೆ ತಾವು ಆಗಮಿಸಬೇಕಾಗಿ ಕೋರಲಾಗಿದೆ.

**ಈ ಸಭೆಯಲ್ಲಿ ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಗುವುದು :**

1. 15ನೇ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಓದಿ ದಾಖಲು ಮಾಡುವುದು.
2. 14ನೇ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವುದು.
3. 2015–16ನೇ ಸಾಲಿನ ವಾರ್ಷಿಕ ವರದಿಯನ್ನು ಪರಿಗಣಿಸುವುದು.
4. 2015–16ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಹಾಗೂ ಅನುಪಾಲನಾ ವರದಿಯನ್ನು ಅನುಮೋದಿಸುವುದು.
5. 2015–16ನೇ ಸಾಲಿನಲ್ಲಿ ಆದ ಮುಂಗಡ ಪತ್ರಕ್ಕಿಂತ ಹೆಚ್ಚುವರಿ ಖರ್ಚುಗಳನ್ನು ಅನುಮೋದಿಸುವುದು.
6. 2016–17ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದಿಸುವುದು.
7. 2016–17ನೇ ಸಾಲಿನ ಪರಿಷ್ಕೃತ ಮುಂಗಡ ಪತ್ರವನ್ನು ಅನುಮೋದಿಸುವುದು.
8. 2016–17ನೇ ಸಾಲಿಗೆ ಲೆಕ್ಕ ಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು.
9. 2016–17ನೇ ಸಾಲಿಗೆ ಆಂತರಿಕ ಲೆಕ್ಕ ಪರಿಶೋಧಕರನ್ನು ನೇಮಿಸುವುದು ಮತ್ತು ಅವರ ಸಂಭಾವನೆಯನ್ನು ನಿಗದಿಪಡಿಸುವುದು.
10. 2017–18ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯನ್ನು ಹಾಗೂ ಮುಂಗಡ ಪತ್ರವನ್ನು ಅನುಮೋದಿಸುವುದು.
11. ಸಂಯುಕ್ತ ಸಹಕಾರಿಯ ಪೂರಕ ಸಂಸ್ಥೆಯ ವರದಿ ಮತ್ತು ಲೆಕ್ಕಪತ್ರಗಳ ಅನುಮೋದನೆ.
12. ಸಂಯುಕ್ತ ಸಹಕಾರಿಗೆ ಖರೀದಿಸಿರುವ ಕಟ್ಟಡ/ ನಿವೇಶನದ ಲೆಕ್ಕಪತ್ರಗಳನ್ನು ಅನುಮೋದಿಸುವ ಕುರಿತು.
13. ನ್ಯಾಷನಲ್ ಕೋಆಪರೇಟಿವ್ ಯೂನಿಯನ್ ಆಫ್ ಇಂಡಿಯಾ, ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ಹಾಗೂ ಕ.ರಾ. ಬಸವೇಶ್ವರ ಸುದ್ಧಿ ಮಾಧ್ಯಮ ಸಹಕಾರ ಮಹಮಂಡಳ ಇವುಗಳ ಸದಸ್ಯತ್ವ ಪಡೆದಿರುವುದನ್ನು ಅನುಮೋದಿಸುವ ಕುರಿತು.
14. ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ಎರವಲು ಸೇವೆ ಆಧಾರದಲ್ಲಿ ಸಹಕಾರಿಗಳ ಜಂಟಿ ನಿಬಂಧಕರು ಹಾಗೂ ಸಹಾಯಕ ನಿಬಂಧಕರ ನೇಮಕದ ಕುರಿತು.
15. ಸಂಯುಕ್ತ ಸಹಕಾರಿಯ ಮಂಡಲಿಯ ಚುನಾವಣೆಯ ಕುರಿತು.
16. ನೂತನವಾಗಿ ಸೇರ್ಪಡೆಗೊಂಡ ಸದಸ್ಯರ ಪರಿಗಣನೆ.
17. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು.

ಆಡಳಿತ ಮಂಡಲಿಯ ಅಪ್ಪಣೆಯ ಮೇರೆಗೆ

**ಸಹಿ/–**

**(ಶರಣಗೌಡ ಜಿ. ಪಾಟೀಲ)**

**ವ್ಯವಸ್ಥಾಪಕ ನಿರ್ದೇಶಕ**

# ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ಕ್ಕೆ 2016ರಲ್ಲಿ (ಇತ್ತೀಚಿಗೆ) ಆಗಿರುವ ತಿದ್ದುಪಡಿಯ ಮುಖ್ಯಾಂಶಗಳು

1. ರಿಜಿಸ್ಟ್ರಾರನ ಪೂರ್ವಾನುಮೋದನೆಯೊಡನೆ ಮಾತ್ರ ಪೂರಕ ಸಂಸ್ಥೆಗಳನ್ನು ಸ್ಥಾಪಿಸಲು ಮತ್ತು ಹೂಡಿಕೆ ಮಾಡಲು ಅವಕಾಶ ಕಲ್ಪಿಸಲಾಗಿದೆ. (ಕಲಂ 15 (1))
2. ಸರ್ಕಾರದಿಂದ ಅನುಮೋದಿತವಾದ ಯಾವುದೇ ಭದ್ರತೆಗಳಲ್ಲಿ ಹೂಡಿಕೆ ಮಾಡಲು ಅವಕಾಶ ಕಲ್ಪಿಸಲಾಗಿದೆ. (ಕಲಂ 18 (ಎ))
3. ಮಾನ್ಯತೆ ಪಡೆದ ಸ್ವ-ಸಹಾಯ ಗುಂಪುಗಳು ನಾಮಮಾತ್ರ ಸದಸ್ಯರಾಗಲು ಅವಕಾಶ ಕಲ್ಪಿಸಲಾಗಿದೆ. (ಕಲಂ 21 ಎ (1) (ಸಿ)).
4. ಸಹ ಸದಸ್ಯರ ಸಂಖ್ಯೆಯನ್ನು ಒಟ್ಟು ಸದಸ್ಯರ ಸಂಖ್ಯೆಯ ಶೇ.10 ರಿಂದ 15ಕ್ಕೆ ಏರಿಸಲಾಗಿದೆ. ನೌಕರರ ಸಹಕಾರಿ ಸಂಸ್ಥೆಗಳಿಗೆ ಯಾವುದೇ ಮಿತಿ ಇರುವುದಿಲ್ಲ. (ಕಲಂ 31 ಬಿ (1))
5. ಆಡಳಿತ ಮಂಡಲಿಯಲ್ಲಿ ಪರಿಶಿಷ್ಟ ಜಾತಿಗೆ ಒಂದು ಸ್ಥಾನ ಮತ್ತು ಪರಿಶಿಷ್ಟ ಪಂಗಡಕ್ಕೆ ಒಂದು ಸ್ಥಾನ ಮೀಸಲಾತಿ ಕಲ್ಪಿಸಲಾಗಿರುತ್ತದೆ. ಈ ಹಿಂದೆ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಒಂದು ಸ್ಥಾನ ಇತ್ತು. (ಕಲಂ 24)
6. ಸಹಕಾರಿಯ ಆಡಳಿತ ಮಂಡಲಿ ಸದಸ್ಯರ ಕನಿಷ್ಠ ಸಂಖ್ಯೆಯನ್ನು ಹನ್ನೊಂದರಿಂದ ಹದಿಮೂರಕ್ಕೆ ಹೆಚ್ಚಿಸಲಾಗಿದೆ ಮತ್ತು ಸಹಕಾರಿಯ ಕಾರ್ಯಕ್ಷೇತ್ರಕ್ಕೆ ಅನುಗುಣವಾಗಿ ಸಹಕಾರಿಯ ಆಡಳಿತ ಮಂಡಲಿ ಸದಸ್ಯರ ಗರಿಷ್ಠ ಸಂಖ್ಯೆಯನ್ನು ಈ ಕೆಳಗಿನಂತೆ ನಿರ್ದಿಷ್ಟಪಡಿಸಲಾಗಿದೆ.

- ತಾಲ್ಲೂಕಿನ ಒಂದು ಭಾಗಕ್ಕೆ ವ್ಯಾಪಿಸಿದರೆ, ಹದಿಮೂರು
- ಇಡೀ ತಾಲ್ಲೂಕಿಗೆ ವ್ಯಾಪಿಸಿದರೆ, ಹದಿನೈದು
- ತಾಲ್ಲೂಕನ್ನು ಮೀರಿ ವ್ಯಾಪಿಸಿದರೆ, ಹದಿನೇಳು
- ಒಕ್ಕೂಟ ಸಹಕಾರಿಯಾಗಿದ್ದಲ್ಲಿ, ಹತ್ತೊಂಭತ್ತು
- ಸಂಯುಕ್ತ ಸಹಕಾರಿಯೂ ಸೇರಿದಂತೆ ಅಪೆಕ್ಸ್ ಸಹಕಾರಿಯಾಗಿದ್ದಲ್ಲಿ, ಇಪ್ಪತ್ತೊಂದು. (ಕಲಂ 24)

7. ಸಂಯುಕ್ತ ಸಹಕಾರಿಯ ಆದೇಶ ಅಥವಾ ನಿರ್ದೇಶನ ಉಲ್ಲಂಘಿಸಿದರೆ ಅಥವಾ ಯಾವುದೇ ಅರೆ-ನ್ಯಾಯಿಕ ಪ್ರಾಧಿಕಾರದ ಅಥವಾ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿದರೆ ಅಂತಹ ಸಹಕಾರಿಯ ಆಡಳಿತ ಮಂಡಲಿ ಎಲ್ಲಾ ಸದಸ್ಯರು ಗರಿಷ್ಠ ಐದು ವರ್ಷಗಳ ಅವಧಿಗೆ ಅನರ್ಹತೆಗೆ ಗುರಿಯಾಗುತ್ತಾರೆ. (ಕಲಂ 25 (2) (ಡಿ))
8. ಸಂಯುಕ್ತ ಸಹಕಾರಿಯ ಪೂರ್ವಾನುಮತಿಯಿಲ್ಲದೇ ಸಹಕಾರಿಯು ಶಾಖೆಗಳನ್ನು ತೆರೆದರೆ ಅಂತಹ ಸಹಕಾರಿಯ ಆಡಳಿತ ಮಂಡಲಿ ಎಲ್ಲಾ ಸದಸ್ಯರು ಗರಿಷ್ಠ ಐದು ವರ್ಷಗಳ ಅವಧಿಗೆ ಅನರ್ಹತೆಗೆ ಗುರಿಯಾಗುತ್ತಾರೆ. (ಕಲಂ 25 (2) (ಇ))
9. ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸಹಕಾರಿಯ ಉಪವಿಧಿಯಲ್ಲಿ ನಿರ್ದಿಷ್ಟಪಡಿಸಿದ ಪದಾಧಿಕಾರಿಗಳ ವಿರುದ್ಧ ಆಡಳಿತ ಮಂಡಲಿ ಅಸ್ತಿತ್ವಕ್ಕೆ ಬಂದ ಎರಡು ವರ್ಷಗಳ ತರುವಾಯ ಅವಿಶ್ವಾಸ ನಿರ್ಣಯವನ್ನು ಮಂಡಿಸಬಹುದಾಗಿರುತ್ತದೆ. ಇಂತಹ ಅವಿಶ್ವಾಸ ನಿರ್ಣಯವನ್ನು ಮೂರನೇ ಒಂದರಷ್ಟು ಚುನಾಯಿತ ನಿರ್ದೇಶಕರ ಸದಸ್ಯರ ಕೋರಿಕೆ ಮೇರೆಗೆ ಮಂಡಿಸತಕ್ಕದ್ದು ಮತ್ತು ಒಮ್ಮೆ ಅವಿಶ್ವಾಸ ನಿರ್ಣಯಕ್ಕೆ ಸೋಲುಂಟಾದಲ್ಲಿ ಹೊಸ ಅವಿಶ್ವಾಸ ನಿರ್ಣಯವನ್ನು ಮುಂದಿನ ಒಂದು ವರ್ಷದ ಅವಧಿಯವರೆಗೆ ಮಂಡಿಸಲು ಅವಕಾಶವಿರುವುದಿಲ್ಲ ಹಾಗೂ ಅವಿಶ್ವಾಸ ನಿರ್ಣಯವು ಮೂರನೇ ಎರಡು ಬಹುಮತದೊಂದಿಗೆ ಅಂಗೀಕಾರವಾಗ ಬೇಕಿರುತ್ತದೆ. (ಕಲಂ 25 ಎ)
10. ಸಹಕಾರಿಯ ಲೆಕ್ಕಪರಿಶೋಧನೆಗೆ, ವಿಚಾರಣೆಗೆ ಹಾಗೂ ಪರಿವೀಕ್ಷಣೆಯ ಅವಧಿಯಲ್ಲಿ ಸಹಕಾರಿಯ ನ್ಯೂನತೆ ಅಥವಾ ಅಕ್ರಮಗಳನ್ನು ರುಜುವಾತು ಪಡಿಸುವುದಕ್ಕೆ ಸಂಬಂಧಿಸಿದಂತೆ ಯಾವುದೇ ಸಾಕ್ಷ್ಯವನ್ನು ನಾಶಪಡಿಸುವ ಅಥವಾ ಅಳಿಸುವ ಅಥವಾ ವ್ಯಕ್ತಿಯು ಬದಲಾಯಿಸುವ ಅಥವಾ ಕೈ ಚಳಕ ಮಾಡುವ ದೃಷ್ಟಿಯಿಂದ ಯಾವುದೇ ಪುಸ್ತಕಗಳನ್ನು ಕೆಡಿಸಲಾಗಿದೆ ಅಥವಾ ಸಹಕಾರಿಯಲ್ಲಿ ಉಳಿಯಗೊಟ್ಟರೆ ಕೆಡಿಸುವ ಸಂಭವವಿದೆಯೆಂದು ನಂಬಲು ಕಾರಣವಿದ್ದರೆ ಅಥವಾ ಭಾವಿಸಿದಲ್ಲಿ ಅಂಥ ಅಧಿಕಾರಿಯು ಅಗತ್ಯವಾದ ದಾಖಲಾತಿಗಳನ್ನು ರಿಜಿಸ್ಟ್ರಾರನ ವಿಶೇಷ ಆದೇಶದ ಮೂಲಕ (ಲೆಕ್ಕಪರಿಶೋಧಕರು ಅಥವಾ ವಿಚಾರಣಾಧಿಕಾರಿ ಅಥವಾ ಪರಿವೀಕ್ಷಣಾಧಿಕಾರಿ) ಜಪ್ತಿ ಮಾಡಬಹುದು ಮತ್ತು ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು. (ಕಲಂ 38 ಬಿ)
11. ಯಾವುದೇ ಸಹಕಾರಿಯು ಸತತ ಎರಡು ವರ್ಷಗಳವರೆಗೆ ವ್ಯವಹಾರ ನಡೆಸಿಲ್ಲದಿದ್ದರೆ ಅಥವಾ ಸಹಕಾರ ತತ್ವಗಳಿಗೆ ಮತ್ತು ಈ ಅಧಿನಿಯಮದ, ನಿಯಮಗಳ ಮತ್ತು ಸಹಕಾರಿಯ ಉಪವಿಧಿಗಳಿಗೆ ಉಪಬಂಧಗಳಿಗನುಗುಣವಾಗಿ ಕಾರ್ಯಾಚರಣೆ ಮಾಡುತ್ತಿಲ್ಲವಾದರೆ ಅಂತಹ ಸಹಕಾರಿಯನ್ನು ಸಂಯುಕ್ತ ಸಹಕಾರಿಯು ಸಮಾಪನೆಗೆ ಶಿಫಾರಸ್ಸು ಮಾಡಬಹುದು. (ಕಲಂ 48 (2))
12. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರಡಿಯಲ್ಲಿ ನೇಮಕಗೊಳ್ಳುವ ಸಮಾಪಕನು ಸಹಕಾರಿಯ ಪ್ರಭಾರ ವಹಿಸಿಕೊಂಡ ನಂತರ ಆಸ್ತಿ ಜವಾಬ್ದಾರಿಗಳನ್ನು ಪಟ್ಟಿ ಮಾಡಿ, ರಿಜಿಸ್ಟ್ರಾರನಿಂದ ಆದ್ಯತಾ ಪಟ್ಟಿಗೆ ಅನುಮೋದನೆ ಪಡೆಯತಕ್ಕದ್ದು ಮತ್ತು ಅಂಥ ಅನುಮೋದನೆಯ ನಂತರವೇ ಸಮಾಪನಾ ಪ್ರಕ್ರಿಯೆ ಆರಂಭವಾಗುತ್ತದೆ. (ಕಲಂ 49 (1))
13. ಸಹಕಾರಿಯ ಸಮಾಪನಾ ಪ್ರಕ್ರಿಯೆ ಪೂರ್ಣಗೊಂಡ ತರುವಾಯ, ಸಹಕಾರಿಯಲ್ಲಿ ಉಳಿಯುವ ಹೆಚ್ಚುವರಿ ನಿಧಿಗಳು, ಠೇವಣಿಗಳು, ಚರ ಅಥವಾ ಸ್ಥಿರಾಸ್ತಿಗಳನ್ನು ಸೌಹಾರ್ದ ಸಹಕಾರಿಗಳ ಅಭಿವೃದ್ಧಿ ನಿಧಿಗೆ ರಿಜಿಸ್ಟ್ರಾರನ ಅನುಮೋದನೆ ಪಡೆದು ವರ್ಗಾಯಿಸತಕ್ಕದ್ದು. (ಕಲಂ 52 ಎ)
14. ದುರುದ್ದೇಶ ಪೂರಿತವಾಗಿ ರಿಜಿಸ್ಟ್ರಾರನ ಅನುಮತಿಯಿಲ್ಲದೇ ಅಪರಾಧಗಳ ಕುರಿತು ದೂರನ್ನು ನೀಡುವಂತಿಲ್ಲ. ಆದರೆ, ಸಹಕಾರಿಯ ಲೆಕ್ಕಪರಿಶೋಧನೆ, ವಿಚಾರಣೆ ಅಥವಾ ಪರಿವೀಕ್ಷಣೆಯ ಅಥವಾ ಸಹಕಾರಿಯ ಸಾಮಾನ್ಯ ವ್ಯವಹಾರದಲ್ಲಿ ಪತ್ತೆಯಾದ ಸಹಕಾರಿಯ ನಿಧಿಗಳ ದುರುಪಯೋಗದ ಅಥವಾ ದುರ್ವಿನಿಯೋಗದ ಆರೋಪಗಳ ಸಂದರ್ಭದಲ್ಲಿ ರಿಜಿಸ್ಟ್ರಾರನ ಅನುಮತಿಯ ಅವಶ್ಯಕತೆಯಿರುವುದಿಲ್ಲ. (ಕಲಂ 69 ಎ)
15. ಆಡಳಿತಗಾರ, ವಿಶೇಷಾಧಿಕಾರಿಯು ತನ್ನ ಪದನಾಮದ ಬಲದಿಂದ ಸದ್ಭಾವನೆಯಿಂದ ಮಾಡಿರುವ ಯಾವುದೇ ಆದೇಶ ಅಥವಾ ಕಾರ್ಯಗಳಿಗೆ ವೈಯಕ್ತಿಕವಾಗಿ ಜವಾಬ್ದಾರನಾಗಿರುವುದಿಲ್ಲ ಮತ್ತು ಅಂತಹ ಆಡಳಿತಗಾರ, ವಿಶೇಷಾಧಿಕಾರಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರೆ ವ್ಯವಹರಣೆಗಳನ್ನು ಹೂಡಲು ಅವಕಾಶವಿರುವುದಿಲ್ಲ. ಹಿಂದಿನ ಆಡಳಿತ ಮಂಡಲಿಯು ಮಾಡಿರುವ ಕೃತ್ಯಗಳಿಗೆ ಸಹಕಾರಿಯ ಹೊಸ ಆಡಳಿತ ಮಂಡಲಿಯು ಜವಾಬ್ದಾರನಾಗಿರುವುದಿಲ್ಲ ಮತ್ತು ಅಂತಹ ಆಡಳಿತಗಾರ, ವಿಶೇಷಾಧಿಕಾರಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರೆ ವ್ಯವಹರಣೆಗಳನ್ನು ಹೂಡಲು ಅವಕಾಶವಿರುವುದಿಲ್ಲ. (ಕಲಂ 69 ಬಿ) ■

### ಸೌಹಾರ್ದ ಸಹಕಾರಿ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ "ಬ್ಯಾಂಕಿಂಗ್ ಮೂಲ ಮಾಹಿತ ತರಬೇತಿ"

# ಸೌಹಾರ್ದ ಸಹಕಾರಿ ಬ್ಯಾಂಕುಗಳ ಕಾರ್ಯನಿರ್ವಹಣೆ ತೃಪ್ತಿಕರ : ಶ್ರೀ ಆರ್.ಎನ್. ಪಾಣಿಗ್ರಾಹಿ

**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಸೌಹಾರ್ದ ಸಹಕಾರಿ ಬ್ಯಾಂಕುಗಳ ಸಿಬ್ಬಂದಿಯವರಿಗಾಗಿ 7 ದಿನಗಳ ಬ್ಯಾಂಕಿಂಗ್ ಮೂಲ ಮಾಹಿತಿ ತರಬೇತಿ ಕಾರ್ಯಕ್ರಮದ 3ನೇ ತಂಡದ ತರಬೇತಿಯನ್ನು ಬೆಂಗಳೂರಿನ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಸಭಾಂಗಣದಲ್ಲಿ ದಿನಾಂಕ 12.07.2016 ರಿಂದ 18.07.2016ರವರೆಗೆ ಏರ್ಪಡಿಸಲಾಗಿತ್ತು.

ಕಾರ್ಯಕ್ರಮವನ್ನು ರಿಸರ್ವ್ ಬ್ಯಾಂಕಿನ ಪಟ್ಟಣ ಸಹಕಾರ ಬ್ಯಾಂಕುಗಳ ವಿಭಾಗದ ಜನರಲ್ ಮ್ಯಾನೇಜರ್ ಶ್ರೀ ಆರ್.ಎನ್. ಪಾಣಿಗ್ರಾಹಿ ಯವರು ಉದ್ಘಾಟಿಸಿ, ಮಾತನಾಡುತ್ತಾ ರಾಜ್ಯದಲ್ಲಿ ಒಟ್ಟು 264 ಪಟ್ಟಣ ಸಹಕಾರ ಬ್ಯಾಂಕುಗಳಿವೆ. ಅವುಗಳಲ್ಲಿ 18 ಸೌಹಾರ್ದ ಸಹಕಾರಿ ಕಾಯ್ದೆಯ ವ್ಯಾಪ್ತಿಗೆ ಬರುತ್ತವೆ. ಈ ಎಲ್ಲಾ ಬ್ಯಾಂಕುಗಳ ಕಾರ್ಯನಿರ್ವಹಣೆ ತೃಪ್ತಿಕರ ಎಂದು ತಿಳಿಸಿದರು. ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಸಾರ್ವಜನಿಕರ ಹಣ ತೊಡಗಿರುವುದರಿಂದ ಬ್ಯಾಂಕುಗಳು ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯನಿರ್ವಹಿಸುವುದು ಅಗತ್ಯ. ಅದಕ್ಕಾಗಿ ಉತ್ತಮ ಆಡಳಿತ ವ್ಯವಸ್ಥೆಗಳು, ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸುವುದು, ಕೆವೈಸಿ ನಾರ್ಮ್‌ಗಳನ್ನು ಕಡ್ಡಾಯವಾಗಿ ಪಾಲಿಸುವುದು ಸೇರಿದಂತೆ ಉತ್ತಮ



ಉದ್ಘಾಟನಾ ಕಾರ್ಯಕ್ರಮ

ಗ್ರಾಹಕ ಸೇವಾ ವ್ಯವಸ್ಥೆಗಳನ್ನು ಅಳವಡಿಸಿ, ಕಾರ್ಯನಿರ್ವಹಿಸುವಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಜವಾಬ್ದಾರಿ ಮಹತ್ವದ್ದಾಗಿದೆ. ಬ್ಯಾಂಕುಗಳ ಉತ್ತಮ ಕಾರ್ಯಾಚರಣೆಗೆ ತರಬೇತಿ ಕಾರ್ಯಕ್ರಮಗಳು ಅಗತ್ಯ. ರಿಸರ್ವ್ ಬ್ಯಾಂಕ್ ಅಧಿಕಾರಿಗಳು ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ಬ್ಯಾಂಕುಗಳ ಕಾರ್ಯನಿರ್ವಹಣೆಯಲ್ಲಿ ಎಲ್ಲ ಸ್ತರಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಲು ತಿಳಿಸಿದರು.

## ಸಿಬ್ಬಂದಿಗಳು ಬ್ಯಾಂಕುಗಳ ಆಧಾರ ಸ್ತಂಭಗಳು - ಶ್ರೀ ಎಸ್.ಆರ್.ಲಕ್ಷ್ಮೀಕಾಂತರೆಡ್ಡಿ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ಮಾತನಾಡಿದ ಸಂಯುಕ್ತ ಸಹಕಾರಿಯ ನಿರ್ದೇಶಕರು ಹಾಗೂ ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎಸ್.ಆರ್. ಲಕ್ಷ್ಮೀಕಾಂತ ರೆಡ್ಡಿಯವರು ತರಬೇತಿ ಶಿಬಿರದಲ್ಲಿ ಭಾಗವಹಿಸಿರುವ ಸಿಬ್ಬಂದಿಗಳು ಸಹಕಾರ ಬ್ಯಾಂಕುಗಳ ಆಧಾರ ಸ್ತಂಭಗಳಿದ್ದಂತೆ. ತರಬೇತಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ, ಉತ್ತಮ ಜ್ಞಾನ ಪಡೆದು, ಬ್ಯಾಂಕುಗಳ ಪ್ರಗತಿಗೆ ಕಾರಣಕರ್ತರಾಗಬೇಕು ಎಂದು ತಿಳಿಸಿದರು.

ನೌಕರ ವರ್ಗದವರು ಯಾರ ಹಿಡಿತಕ್ಕೆ ಯಾವ ಸೆಳೆತಕ್ಕೆ ಒಳಗಾಗದೇ ದಕ್ಷತೆ ಹಾಗೂ ಬ್ಯಾಂಕಿಗೆ ನಿಷ್ಠೆಯಿಂದ ಕಾರ್ಯನಿರ್ವಹಿಸಬೇಕು. ರಿಸರ್ವ್ ಬ್ಯಾಂಕಿನವರು ವಿಧಿಸುವ ಸಂಕೋಲೆಗಳು ನಮಗೆ ಮಾರ್ಗದರ್ಶನಗಳು, ಅವುಗಳಿಂದಾಗಿಯೇ ನಮ್ಮ ಬ್ಯಾಂಕುಗಳು ಪ್ರಗತಿಯತ್ತ ಸಾಗಲಿಕ್ಕೆ ಸಾಧ್ಯವಾಗುತ್ತದೆ. ಈ ಏಳು ದಿನಗಳ ತರಬೇತಿ ಕಾರ್ಯಕ್ರಮದಲ್ಲಿ ನಿಮಗೆಲ್ಲ ಬ್ಯಾಂಕಿಂಗ್ ಕ್ಷೇತ್ರದ ಉತ್ತಮ ಜ್ಞಾನವನ್ನು ನೀಡುವ ಪ್ರಯತ್ನ ಸಂಯುಕ್ತ ಸಹಕಾರಿಯು ಮಾಡಿರುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ನಿರ್ದೇಶಕರಾದ ಶ್ರೀ ವಸಂತ ನಾಯಕರವರು, ಕರ್ನಾಟಕ ಇನ್ಸ್‌ಟಿಟ್ಯೂಟ್ ಆಫ್ ಕೋ-ಆಪರೇಟಿವ್ ಮ್ಯಾನೇಜ್‌ಮೆಂಟ್‌ನ ಪ್ರಾಂಶುಪಾಲರಾದ ಶ್ರೀ ಎನ್.ಎಮ್.ಶಿವಕುಮಾರ ರವರು ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ



ಯೋಗ ತರಬೇತಿಯಲ್ಲಿ ಶಿಬಿರಾರ್ಥಿಗಳು

ನಿರ್ದೇಶಕರಾದ ಶ್ರೀ ಶರಣಗೌಡ.ಜಿ.ಪಾಟೀಲರವರು ಅತಿಥಿ ಗಣ್ಯರನ್ನು ಸ್ವಾಗತ ಕೋರಿ, ಕಾರ್ಯಕ್ರಮದ ಬಗ್ಗೆ ಪ್ರಾಸ್ತಾವಿಕ ನುಡಿಗಳನ್ನು ಹೇಳಿದರು. ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ್.ಕೆ.ರವರು ವಂದಿಸಿದರು. ಕಾರ್ಯಕ್ರಮದಲ್ಲಿ 6 ಬ್ಯಾಂಕುಗಳ 40 ಪ್ರತಿನಿಧಿಗಳು ಭಾಗವಹಿಸಿದ್ದರು.

**ಅಳವಡಿಸಿದ ವಿಷಯಗಳು :**

7 ದಿನಗಳ ಅವಧಿಯಲ್ಲಿ ಸಹಕಾರ – ಸಹಕಾರ ಬ್ಯಾಂಕು – ಸಹಕಾರ ತತ್ವಗಳು – ಸೌಹಾರ್ದ ಸಹಕಾರಿ ಕಾಯ್ದೆ ಮುಖ್ಯಾಂಶಗಳು – ಬ್ಯಾಂಕಿಂಗ್ ವ್ಯವಸ್ಥೆ – ಬ್ಯಾಂಕಿಂಗ್ ಕ್ಷೇತ್ರದ ಪ್ರಚಲಿತ ವಿದ್ಯಮಾನಗಳು – ರಿಸರ್ವ್ ಬ್ಯಾಂಕಿನ ಪಾತ್ರ – ನಿರ್ದೇಶನಗಳು – ನೆಗೋಶಿಯೇಬಲ್ ಇನ್‌ಸ್ಟ್ರುಮೆಂಟ್ ಕಾಯ್ದೆ – ಬ್ಯಾಂಕಿಂಗ್ ರೆಗ್ಯುಲೇಶನ್ ಕಾಯ್ದೆ –

ವಿವಿಧ ರೀತಿಯ ಡಿಪಾಸಿಟ್ ಖಾತೆಗಳು – ವಿವಿಧ ರೀತಿಯ ಸಾಲಗಳ ಕಾಯ್ದೆಗಳು– ಕ್ರೆಡಿಟ್ ಅಪ್ರೇಸಲ್ – ಕೆವೈಸಿ ನಾರ್ಮ್ಸ್ – ಗ್ರಾಹಕ ಸೇವಾ ವಿಧಾನಗಳು – ಫ್ರಂಟ್ ಆಫೀಸ್ ಮ್ಯಾನೇಜ್‌ಮೆಂಟ್ – ಸಹಕಾರ ಬ್ಯಾಂಕುಗಳಿಗೆ ಅನ್ವಯಿಸುವ ವಿವಿಧ ತೆರಿಗೆ ಕಾಯ್ದೆಗಳ ಮುಖ್ಯಾಂಶಗಳು – ವಿವಿಧ ರೀತಿಯ ಫಾರ್ಮ್‌ಗಳನ್ನು ಭರ್ತಿ ಮಾಡುವ ಮತ್ತು ಮಾಕ್‌ಬ್ಯಾಂಕಿಂಗ್ ವಿಷಯಗಳನ್ನು ಅಳವಡಿಸಲಾಗಿತ್ತು.

**ಅನೌಪಚಾರಿಕ :** ಅನೌಪಚಾರಿಕದಲ್ಲಿ ಶ್ರೀ ಎನ್.ಎಮ್.ಶಿವಕುಮಾರ, ಪ್ರಾಂಶುಪಾಲರು, ಕರ್ನಾಟಕ ಇನ್ಸ್‌ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಶ್ರೀ ಬಿ.ಎಸ್.ಚಂದ್ರಶೇಖರವರಿಂದ ಕನ್ನಡ ರಸ ಪ್ರಶ್ನೆಗಳ ಕ್ವಿಜ್, ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ವಿಶ್ವನಾಥ ಹಿರೇಮಠ, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರುಗಳು ಭಾಗವಹಿಸಿ, ಶಿಬಿರಾರ್ಥಿಗಳ ಅನಿಸಿಕೆಗಳನ್ನು ಪಡೆದು ಮಾರ್ಗದರ್ಶನ ಮಾಡಿದರು. ಪ್ರತಿದಿನ ಬೆಳಿಗ್ಗೆ ಯೋಗ ತರಬೇತಿಯನ್ನು ನೀಡಲಾಗಿದೆ.

## ರಿಸರ್ವ್ ಬ್ಯಾಂಕು ಪೋಷಕರ ಪಾತ್ರ ನಿರ್ವಹಿಸುತ್ತದೆ : ಶ್ರೀಮತಿ ಅಂಬುಜ ಲಕ್ಷ್ಮೀನಾರಾಯಣ

ಶಿಬಿರಾರ್ಥಿಗಳಿಗೆ ಸಹಕಾರ ಕ್ಷೇತ್ರದ ಹಾಗೂ ಸಹಕಾರಿ ಬ್ಯಾಂಕುಗಳ ಕಾರ್ಯನಿರ್ವಹಣೆಯ ಬಗ್ಗೆ ಮತ್ತು ರಿಸರ್ವ್ ಬ್ಯಾಂಕಿನ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಒದಗಿಸುವುದಕ್ಕಾಗಿ ಶಿಬಿರಾರ್ಥಿಗಳ ಜೊತೆಗೆ ರಿಸರ್ವ್ ಬ್ಯಾಂಕಿನ ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಅಂಬುಜ ಲಕ್ಷ್ಮೀನಾರಾಯಣ, ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್, ಆರ್.ಐ.ಸಿ.ಎಮ್.ನ ನಿರ್ದೇಶಕರಾದ ಶ್ರೀ ವಸಂತ ನಾಯಕ, ಶ್ರೀ ವೈ.ವಿ. ಗುಂಡೂರಾವ್, ಶ್ರೀ ವಿಠ್ಠಲಶೆಟ್ಟಿ, ಶುಶ್ರೂತಿ ಸೌಹಾರ್ದ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಶ್ರೀನಿವಾಸ ಮೂರ್ತಿ, ಶ್ರೀನಿಧಿ ಸಹಕಾರ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಬಾಬುರೆಡ್ಡಿ, ಶ್ರೀ ಚರಣ ಸೌಹಾರ್ದ ಸಹಕಾರ ಬ್ಯಾಂಕಿನ ಶ್ರೀ ರಾಘವೇಂದ್ರ, ನ್ಯಾಷನಲ್ ಸಹಕಾರ ಬ್ಯಾಂಕಿನ ಶ್ರೀ ವಿಶ್ವೇಶ್ವರಯ್ಯ ಇವರುಗಳೊಡನೆ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.



ಸಂವಾದ ಕಾರ್ಯಕ್ರಮದಲ್ಲಿ ಉಪಸ್ಥಿತ ಗಣ್ಯರು

## ಸಹಕಾರ ಬ್ಯಾಂಕುಗಳಿಗೆ ರಿಸರ್ವ್ ಬ್ಯಾಂಕಿನ ವಿಶೇಷ ರಿಯಾಯಿತಿ ಸೌಲಭ್ಯಗಳು ಅಗತ್ಯ - ಶ್ರೀ ಗುರುನಾಥ ಜಾಂತಿಕರ

ಕಾರ್ಯಕ್ರಮದಲ್ಲಿ ಭಾಗವಹಿಸಿದ ಅತಿಥಿ ಗಣ್ಯರೆಲ್ಲರು ಸಹಕಾರಿ ಬ್ಯಾಂಕುಗಳ ಕಾರ್ಯಾಚರಣೆಯಲ್ಲಿ ರಿಸರ್ವ್ ಬ್ಯಾಂಕಿನವರು ಸರಳ ವ್ಯವಸ್ಥೆಗಳನ್ನು ಹಾಗೂ ಸಹಕಾರ ಬ್ಯಾಂಕುಗಳು ಗಾತ್ರದಲ್ಲಿ ಸಣ್ಣದ್ದಾಗಿರುವುದರಿಂದ ರಾಷ್ಟ್ರೀಕೃತ ಬ್ಯಾಂಕುಗಳಿಗೆ ಅನ್ವಯಿಸುವ ನೀತಿ ನಿಯಮಗಳನ್ನು, ಕೆಲವು ರಿಯಾಯಿತಿಗಳನ್ನು ಅನುಸರಿಸುವುದು ಉತ್ತಮ ಎಂದು ಸಲಹೆ ನೀಡಿದರು.

ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಮಾತನಾಡಿ ತಪ್ಪಿತಸ್ಥರಿಗೆ ಶಿಕ್ಷಿಸುವುದಕ್ಕೆ ಕಾನೂನು ಇದೆ. ಆದರೆ, ತಪ್ಪಿತಸ್ಥರಲ್ಲದವರಿಗೆ, ಉತ್ತಮವಾಗಿ ಕಾರ್ಯನಿರ್ವಹಿಸುವವರಿಗೆ ಈ ನಿಬಂಧನೆಗಳು ಅಡ್ಡಗಾಲಿನಂತಿರಬಾರದು. ಸಹಕಾರ ಬ್ಯಾಂಕುಗಳು ಗ್ರಾಮೀಣ ಹಾಗೂ ಅರೆ ಗ್ರಾಮೀಣ ವ್ಯವಸ್ಥೆಯಲ್ಲಿ ಹಾಗೂ ಬಡವರಿಗಾಗಿ ಕಾರ್ಯನಿರ್ವಹಿಸುತ್ತಿವೆಯಾದ್ದರಿಂದ ಕೆಲವು ವಿಶೇಷ ಮಾರ್ಗದರ್ಶನ ಹಾಗೂ ಕೆಲವು ಸಡಿಲತೆಗಳು ಅವಶ್ಯಕ ಹಾಗೂ ಮುಂಬರುವ ದಿನಗಳಲ್ಲಿ ಈ ಅರ್ಬನ್ ಎಂಬುವ ಹೆಸರನ್ನು ತೆಗೆದು ಸಹಕಾರಿ ಬ್ಯಾಂಕುಗಳು ಎಂದು ಹೆಸರು ಬಳಸಿದರೆ ಸಾಕಾಗಬಹುದು ಎಂದು ತಿಳಿಸಿದರು.

ಅತಿಥಿ ಗಣ್ಯರೆಲ್ಲರ ಸಲಹೆ ಹಾಗೂ ಪ್ರಶ್ನೆಗಳಿಗೆ ಉತ್ತರಿಸಿ ಮಾತನಾಡಿದ ರಿಸರ್ವ್ ಬ್ಯಾಂಕಿನ ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಅಂಬುಜ ಲಕ್ಷ್ಮೀನಾರಾಯಣರವರು ಸೌಹಾರ್ದ ಸಹಕಾರಿ ಬ್ಯಾಂಕುಗಳ ಅಭಿವೃದ್ಧಿಯಲ್ಲಿ ಆರ್.ಬಿ.ಐ. ಪೋಷಕರ ಪಾತ್ರ ನಿರ್ವಹಿಸುತ್ತಾ ಬಂದಿದೆ. ಒಬ್ಬರಿಗೊಂದು ಮತ್ತೊಬ್ಬರಿಗೊಂದು ಕಾನೂನು ಹಾಗೂ ನಿಯಮಗಳನ್ನು ಮಾಡಲಿಕ್ಕಾಗುವುದಿಲ್ಲ.

ಇದು ತಂತ್ರಜ್ಞಾನಗಳ ಬಳಕೆಯ ಯುಗ. ಅವುಗಳನ್ನು ಅಳವಡಿಸದಿದ್ದರೆ ಬ್ಯಾಂಕುಗಳು ಬದುಕುಳಿಯುವುದು ಅಸಾಧ್ಯ. ಅದಕ್ಕಾಗಿ ಸಹಕಾರ ಬ್ಯಾಂಕುಗಳ ಅಭಿವೃದ್ಧಿಗಾಗಿ ಕೆಲವು ವಿಶೇಷ ಸೌಲಭ್ಯಗಳನ್ನು ನೀಡುತ್ತಾ ಬಂದಿದೆ. ನಿಯಮಗಳಲ್ಲಿ ಕೆಲವು ರಿಯಾಯಿತಿಗಳನ್ನು ನೀಡುತ್ತಾ ಬಂದಿದೆ. ರಿಸರ್ವ್ ಬ್ಯಾಂಕು ಸಹ ಸಹಕಾರ ಬ್ಯಾಂಕುಗಳು ಉತ್ತಮವಾಗಿ ಕಾರ್ಯನಿರ್ವಹಿಸಬೇಕೆಂದು ಅಪೇಕ್ಷಿಸುತ್ತದೆ ಎಂದು ತಿಳಿಸಿದರು.

**ತರಬೇತಿಯ ಮೌಲ್ಯಮಾಪನ :** ಏಳು ದಿನಗಳ ತರಬೇತಿಯ ಕೊನೆಯಲ್ಲಿ ಮೌಲ್ಯಮಾಪನವನ್ನು ಏರ್ಪಡಿಸಲಾಗಿತ್ತು. ಒಂದು ಗಂಟೆ–ಯ ಅವಧಿಯ ಪರೀಕ್ಷೆಯಲ್ಲಿ 100 ಪ್ರಶ್ನೆಗಳಿಗೆ ಉತ್ತರಿಸುವ ಪರೀಕ್ಷೆಯ ವ್ಯವಸ್ಥೆಯನ್ನು ಮಾಡಲಾಗಿತ್ತು.

ಈ ಪರೀಕ್ಷೆಯಲ್ಲಿ ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕಿನ ಶ್ರೀಮತಿ ಲಕ್ಷ್ಮೀಯವರು ಪ್ರಥಮ ಬಹುಮಾನ ಹಾಗೂ ಅದೇ ಬ್ಯಾಂಕಿನ ಕುಮಾರಿ ಆಯೇಷಾ ಸಿದ್ಧಿಕೆ ಹಾಗೂ ಶ್ರೀ ಗುರುಸಿದ್ಧಯ್ಯ ಹಿರೇಮಠರವರು ದ್ವಿತಿಯ ಬಹುಮಾನ ಮತ್ತು ಮಾನ್ವಿ ಪಟ್ಟಣ ಸಹಕಾರ ಬ್ಯಾಂಕಿನ ಶ್ರೀ ವಿನೋದರಾಜ ಹಾಗೂ ಶ್ರೀನಿಧಿ ಸೌಹಾರ್ದ ಸಹಕಾರ ಬ್ಯಾಂಕಿನ ಶ್ರೀ ನವೀನಕುಮಾರ ಇವರುಗಳು ತೃತೀಯ ಬಹುಮಾನವನ್ನು ಪಡೆದು–ಕೊಂಡರು.

# ಸಮಾರೋಪ ಕಾರ್ಯಕ್ರಮ

7 ದಿನಗಳ ತರಬೇತಿ ಕಾರ್ಯಕ್ರಮದ ಸಮಾರೋಪ ಕಾರ್ಯಕ್ರಮವನ್ನು ದಿನಾಂಕ 18.07.2016ರಂದು ಸಂಜೆ 5.00 ಗಂಟೆಗೆ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ವಹಿಸಿದ್ದರು. ಪ್ರಾರಂಭದಲ್ಲಿ ಶಿಬಿರಾರ್ಥಿಗಳಿಂದ ನಾಡಗೀತೆಯಾದ ನಂತರ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್‌ರವರು ಅತಿಥಿಗಣ್ಯರನ್ನು ಸ್ವಾಗತಿಸಿದರು.

ಸಂಯುಕ್ತ ಸಹಕಾರಿಯ ಕಿರಿಯ ಅಧಿಕಾರಿ ಶ್ರೀ ಪ್ರಭಯ್ಯ ಹಿರೇಮಠ್‌ರವರು ಶಿಬಿರದ ವರದಿಯನ್ನು ಓದಿದರು. ನಂತರ ಶಿಬಿರಾರ್ಥಿಗಳಾದ ಶ್ರೀಮತಿ ಲಕ್ಷ್ಮೀ, ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕ್, ಹೊಸಪೇಟೆ, ಶ್ರೀಮತಿ ಅನುಷ, ಮಾನ್ವಿ ಸೌಹಾರ್ದ ಸಹಕಾರಿ ಬ್ಯಾಂಕ್, ಕುಮಾರಿ ಆಶಾ.ಟಿ., ಶುಶ್ರುತಿ ಸೌಹಾರ್ದ ಸಹಕಾರ ಬ್ಯಾಂಕ್, ಶ್ರೀ ಎ.ಟಿ.ಮುನವಳ್ಳಿ, ಬೆಲ್ಲದ ಬಾಗೇವಾಡಿ ಸೌಹಾರ್ದ ಸಹಕಾರಿ ಬ್ಯಾಂಕ್ ಇವರುಗಳು ಮಾತನಾಡಿ, ಇದೊಂದು ಅತ್ಯಂತ ಸುವ್ಯವಸ್ಥಿತ ಹಾಗೂ ಜ್ಞಾನ



ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ



ಸಮಾರೋಪ ಕಾರ್ಯಕ್ರಮದಲ್ಲಿ ಉಪಸ್ಥಿತ ಗಣ್ಯರು

ಪ್ರಧಾನ ಮಾಡಿರುವ ತರಬೇತಿಯಾಗಿತ್ತೆಂದು, ವಿಷಯಗಳು, ಸಂಪನ್ಮೂಲ ವ್ಯಕ್ತಿಗಳು ಹಾಗೂ ವ್ಯವಸ್ಥೆಗಳು ಮತ್ತು ನಮ್ಮೆಲ್ಲರ ಭಾಗವಹಿಸುವಿಕೆ ಮೇಲ್ಮಟ್ಟದ್ದಾಗಿತ್ತೆಂದು ತಮ್ಮ ಅನಿಸಿಕೆಗಳನ್ನು ತಿಳಿಸಿದರು.

**ಬಹುಮಾನಗಳು :** ಪ್ರತಿದಿನ ಶಿಬಿರಾರ್ಥಿಗಳ ತಂಡಗಳು ಸಲ್ಲಿಸುತ್ತಿದ್ದ ವರದಿಗಳಲ್ಲಿ ಉತ್ತಮವಾಗಿರುವ ಕಾವೇರಿ ತಂಡಕ್ಕೆ ಬಹುಮಾನ ನೀಡಲಾಯಿತು. ಪ್ರತಿದಿನ ಸುವಿಚಾರವನ್ನು ಹೇಳಿದವರಲ್ಲಿ ಉತ್ತಮವಾಗಿ ಸುವಿಚಾರವನ್ನು ಪ್ರಸ್ತುತ ಪಡಿಸಿದ ಶ್ರೀಮತಿ ಅನುಷ. ಇ., ಮಾನ್ವಿ ಪಟ್ಟಣ ಸೌಹಾರ್ದ ಸಹಕಾರ ಬ್ಯಾಂಕ್ ಇವರಿಗೆ ಬಹುಮಾನ ನೀಡಲಾಯಿತು.

ಅದೇ ನಿನ್ನೆಯ ದಿನ ಅವರು ಕಲಿತಿರುವ ಉತ್ತಮ ಪಾಠದ (ಮಿಲಿ) ಬಗ್ಗೆ ಹೇಳಿದವರಲ್ಲಿ ಶ್ರೀ ಕಲ್ಲಾಡಮ್ ನಾಗರಾಜ ಇವರಿಗೆ ಬಹುಮಾನ ನೀಡಲಾಯಿತು. ಉತ್ತಮ ಭಾಗವಹಿಸುವಿಕೆಗಾಗಿ ಪುರುಷರ ವಿಭಾಗದಲ್ಲಿ ಶ್ರೀ ಎ.ಟಿ.ಮುನವಳ್ಳಿ, ಬೆಲ್ಲದ ಬಾಗೇವಾಡಿ ಸೌಹಾರ್ದ ಸಹಕಾರಿ ಬ್ಯಾಂಕು ಹಾಗೂ ಶ್ರೀ ವಿಶ್ವನಾಥ ಶೆಟ್ಟಿ, ಮಾನ್ವಿ ಪಟ್ಟಣ ಸೌಹಾರ್ದ ಸಹಕಾರ ಬ್ಯಾಂಕ್, ಮಹಿಳಾ ವಿಭಾಗದಲ್ಲಿ ಶ್ರೀಮತಿ ಲಕ್ಷ್ಮಿ ಜೆ., ವಿಕಾಸ ಸೌಹಾರ್ದ ಸಹಕಾರಿ ಬ್ಯಾಂಕ್, ಕುಮಾರಿ ಆಶಾ ಟಿ.ಎನ್., ಶುಶ್ರುತಿ ಸೌಹಾರ್ದ ಸಹಕಾರ ಬ್ಯಾಂಕ್ ಇವರುಗಳಿಗೆ ಪ್ರಶಸ್ತಿ ನೀಡಲಾಯಿತು. ಎಲ್ಲರಿಗೂ ಭಾಗವಹಿಸಿರುವ ಬಗ್ಗೆ ಪ್ರಮಾಣ ಪತ್ರ ನೀಡಲಾಯಿತು.

# ತರಬೇತಿ ಪಡೆದ ಸಿಬ್ಬಂದಿ ಸಹಕಾರ ಬ್ಯಾಂಕಿನ ಆಸ್ತಿ : ಶ್ರೀ ಗುರುನಾಥ ಜಾಂತಿಕರ

ರಿಸರ್ವ್ ಬ್ಯಾಂಕಿನ ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀಮತಿ ಅಂಬುಜ ರವರು ಸಮಾರೋಪ ಭಾಷಣ ಮಾಡಿ ಎಲ್ಲರಿಗೂ ಶುಭ ಕೋರಿದರು. ಸಮಾರಂಭದ ಅಧ್ಯಕ್ಷತೆ ವಹಿಸಿ, ಮಾತನಾಡಿದ ಶ್ರೀ ಗುರುನಾಥ ಜಾಂತಿಕರರವರು ತರಬೇತಿ ಪಡೆದಿರುವ ಎಲ್ಲಾ ಶಿಬಿರಾರ್ಥಿಗಳಿಗೆ ಶುಭ ಕೋರಿ ನೀವುಗಳೆಲ್ಲ ನಿಮ್ಮ ಬ್ಯಾಂಕಿಗೆ ಒಂದು ಆಸ್ತಿಯಾಗಿ ಕಾರ್ಯನಿರ್ವಹಿಸಬೇಕು. ಜವಾಬ್ದಾರಿಯಾಗಬಾರದು. ಇಷ್ಟಪಟ್ಟು ಕೆಲಸಮಾಡಿ. ಕಷ್ಟಪಟ್ಟು ಕೆಲಸ ಮಾಡುವ ಅಗತ್ಯವಿಲ್ಲ ಎಂದು ತಿಳಿಸಿ ಸೌಹಾರ್ದ ಸಹಕಾರಿ ಕ್ಷೇತ್ರದ ಪಟ್ಟಣ ಸಹಕಾರ ಬ್ಯಾಂಕುಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಸಿರುವ ರಿಸರ್ವ್ ಬ್ಯಾಂಕಿನ ಅಧಿಕಾರಿಗಳಿಗೆ ಅಭಿನಂದಿಸುತ್ತಾ ಸಹಕಾರಿ ಬ್ಯಾಂಕುಗಳ ಅಭಿವೃದ್ಧಿಗೆ ಪ್ರಥಮ ಪ್ರಾಶಸ್ತ್ಯ ನೀಡಲು ರಿಸರ್ವ್ ಬ್ಯಾಂಕಿನವರನ್ನು ವಿನಂತಿಸಿದರು. ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಸೌಹಾರ್ದ ಸಹಕಾರಿ ಸಿಬ್ಬಂದಿಯವರು ಸೌಹಾರ್ದ ಸಹಕಾರಿ ಸೈನ್ಯದ ಶಿಸ್ತಿನ ಅಧಿಕಾರಿಗಳಂತೆ



ಗಣ್ಯರ ಜೊತೆಯಲ್ಲಿ ಶಿಬಿರಾರ್ಥಿಗಳು

ಜವಾಬ್ದಾರಿಯುತವಾಗಿ ಎಲ್ಲಿಯೂ ಲೋಪವಾಗದಂತೆ ಎಚ್ಚರ ವಹಿಸಿ ಕಾರ್ಯನಿರ್ವಹಿಸುವುದು ಅಗತ್ಯ ಎಂದು ಕರೆ ನೀಡಿದರು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಹೆಚ್.ಸಿ.ನಾಗರತ್ನರವರು ಅತಿಥಿ ಗಣ್ಯರಿಗೆ ಹಾಗೂ ಎಲ್ಲ ಶಿಬಿರಾರ್ಥಿಗಳಿಗೆ ವಂದಿಸಿದರು.

# ಶಾಖೆಗಳ ನಿರ್ವಹಣೆ ಹಾಗೂ ಗ್ರಾಹಕ ಸೇವೆಗಳು ತರಬೇತಿ



**ಬೆಳಗಾವಿ :** ಬೆಳಗಾವಿ ಜಿಲ್ಲೆಯ ಬೆಳಗಾವಿ, ಖಾನಾಪೂರ ಹಾಗೂ ಬೈಲಹೊಂಗಲ ತಾಲ್ಲೂಕುಗಳಲ್ಲಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ "ಶಾಖೆಗಳ ನಿರ್ವಹಣೆ ಹಾಗೂ ಗ್ರಾಹಕರ ಸೇವೆಗಳು" ತರಬೇತಿ ಕಾರ್ಯಕ್ರಮವನ್ನು ದಿನಾಂಕ 28.06.2016 ರಂದು ಕನ್ನಡ ಸಾಹಿತ್ಯ ಭವನ, ಚನ್ನಮ್ಮ ವೃತ್ತ, ಬೆಳಗಾವಿಯ ಸಭಾ ಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಬೆಳಗಾವಿ ಜಿಲ್ಲೆಯ ಸಹಕಾರಿಗಳ ಉಪ ನಿಬಂಧಕರಾದ ಶ್ರೀ ಕಲ್ಲಪ್ಪ ಓಬಣ್ಣಗೋಳ ಇವರು ಉದ್ಘಾಟಿಸಿದರು. ಬೆಳಗಾವಿ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿಯ ನಿರ್ದೇಶಕರಾದ ಶ್ರೀ ಆರ್.ಎಸ್.ಮುತಾಲಿಕ ಇವರು ಅತಿಥಿಗಳಾಗಿ ಆಗಮಿಸಿದ್ದರು. ಶಿವ ಕ್ರೆಡಿಟ್ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಎಸ್. ಸುಲ್ತಾನಪೂರೆರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಈ ತರಬೇತಿಯಲ್ಲಿ 82 ಸಹಕಾರಿಗಳಿಂದ 102 ಪ್ರತಿನಿಧಿಗಳು ಭಾಗವಹಿಸಿದ್ದರು.

---



**ಹುಬ್ಬಳ್ಳಿ :** ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿಯ ಎಲ್ಲಾ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ "ಶಾಖೆಗಳ ನಿರ್ವಹಣೆ ಹಾಗೂ ಗ್ರಾಹಕರ ಸೇವೆಗಳು" ತರಬೇತಿ ಕಾರ್ಯಕ್ರಮವನ್ನು ದಿನಾಂಕ 30.06.2016ರಂದು ಹುಬ್ಬಳ್ಳಿಯ ಕರ್ನಾಟಕ ಚೇಂಬರ್ ಆಫ್ ಕಾಮರ್ಸ್ ಸಭಾ ಭವನದಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಎಂ.ಬಿ. ಕಲಾಲರವರು ಉದ್ಘಾಟಿಸಿದರು.

ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಆರ್.ಎನ್. ದೇಶಪಾಂಡೆಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಸದ್ಯಸರು ಹಾಗೂ ಕೆ.ಸಿ.ಸಿ ಬ್ಯಾಂಕಿನ ನಿರ್ದೇಶಕರಾದ ಶ್ರೀ ಮಲ್ಲಿಕಾರ್ಜುನ ಅಜ್ಜಪ್ಪ ಹೊರಕೇರಿರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಈ ತರಬೇತಿಯಲ್ಲಿ 87 ಸಹಕಾರಿಗಳಿಂದ 114 ಪ್ರತಿನಿಧಿಗಳು ಭಾಗವಹಿಸಿದ್ದರು.

---



**ಬಾಗಲಕೋಟೆ :** ಬಾಗಲಕೋಟೆ ಜಿಲ್ಲೆಯ ಬಾದಾಮಿ, ಬಾಗಲಕೋಟೆ, ಬೀಳಗಿ, ಜಮಖಂಡಿ ಹಾಗೂ ಮುಧೋಳ ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯ ನಿರ್ವಾಹಕರಿಗಾಗಿ "ಶಾಖೆಗಳ ನಿರ್ವಹಣೆ ಹಾಗೂ ಗ್ರಾಹಕ ಸೇವೆಗಳು" ತರಬೇತಿಯ ಕಾರ್ಯಕ್ರಮವನ್ನು ದಿನಾಂಕ 20.07.2016ರಂದು ಬಾಗಲಕೋಟೆ ಡಿ.ಸಿ.ಸಿ. ಬ್ಯಾಂಕಿನ ಸಭಾ ಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು.

ತರಬೇತಿ ಕಾರ್ಯಕ್ರಮವನ್ನು ಬಾಗಲಕೋಟೆ ಡಿ.ಸಿ.ಸಿ. ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಹೆಚ್.ವೈ. ಗದ್ದಕೇರಿರವರು ಉದ್ಘಾಟಿಸಿದರು. ಕ್ರಾರ್ಯಕ್ರಮಕ್ಕೆ ಅಥಿತಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಭಾಸ್ಕರ ಹೆಗಡೆ ಕಾಗೇರಿ, ಸಹಕಾರಿಗಳ ಉಪ ನಿಬಂಧಕರುಗಳಾದ ಶ್ರೀ ಎಂ.ಪಿ. ಶೆಲ್ಲಿಕೇರಿ ಇವರುಗಳು ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಜಿ.ಎನ್.ಪಾಟೀಲರವರು ವಹಿಸಿದ್ದರು. ಈ ತರಬೇತಿಯಲ್ಲಿ 62 ಸಹಕಾರಿಗಳಿಂದ 80 ಪ್ರತಿನಿಧಿಗಳು ಭಾಗವಹಿಸಿದ್ದರು.

ಕಲಬುರಗಿ ವಿಭಾಗ

# ಕೊಪ್ಪಳ, ಬಳ್ಳಾರಿ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಪ್ರವೇಶ ತರಬೇತಿ ಮತ್ತು ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣೆ



**ಕೊಪ್ಪಳ :** ಕೊಪ್ಪಳ ಜಿಲ್ಲೆಯಲ್ಲಿ 2014-15 ಹಾಗೂ 2015-16ನೇ ಸಾಲಿನಲ್ಲಿ ನೋಂದಣಿಗೊಂಡಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ ಉಪಾಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ "ಪ್ರವೇಶ ತರಬೇತಿ"ಯನ್ನು ಮತ್ತು 1959ರ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳ ಪತ್ತಿನ ಸಹಕಾರ ಸಂಘಗಳ ಅಧ್ಯಕ್ಷರು/ ಮುಖ್ಯಕಾರ್ಯನಿರ್ವಾಹಕರುಗಳಿಗೆ "ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣೆ" ತರಬೇತಿಯನ್ನು ದಿನಾಂಕ 14.07.2016ರಂದು ಶ್ರೀ ಸಾಯಿಲಕ್ಷ್ಮೀ ರೆಸಿಡೆನ್ಸಿ, ಶಿವಟಾಕೀಸ್ ಹತ್ತಿರ, ಗಂಗಾವತಿ, ಕೊಪ್ಪಳ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯನ್ನು ಶ್ರೀ ಗುರುನಾಥ ಜಾಂತಿಕರ, ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಉದ್ಘಾಟಿಸಿದರು.

ಶ್ರೀ ಕೆ.ಸಣ್ಣಸೂಗಪ್ಪ, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಈ ತರಬೇತಿಯಲ್ಲಿ ಕೊಪ್ಪಳ ಜಿಲ್ಲೆಯ 35 ಸೌಹಾರ್ದ ಸಹಕಾರಿಗಳಿಂದ 44 ಸಹಕಾರಿ ಪ್ರತಿನಿಧಿಗಳು ಭಾಗವಹಿಸಿದ್ದರು ಹಾಗೂ 14 ಪತ್ತಿನ ಸಹಕಾರಿ ಸಂಘಗಳಿಂದ 18 ಸಹಕಾರಿ ಪ್ರತಿನಿಧಿಗಳು ಭಾಗವಹಿಸಿ, ಕಾರ್ಯಾಗಾರದ ಪ್ರಯೋಜನವನ್ನು ಪಡೆದುಕೊಂಡರು.



**ಬಳ್ಳಾರಿ :** ಬಳ್ಳಾರಿ ಜಿಲ್ಲೆಯಲ್ಲಿ 2014-15 ಹಾಗೂ 2015-16ನೇ ಸಾಲಿನಲ್ಲಿ ನೋಂದಣಿಗೊಂಡಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ ಉಪಾಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ "ಪ್ರವೇಶ ತರಬೇತಿ"ಯನ್ನು ದಿನಾಂಕ 15.07.2016ರಂದು ಗ್ರೀನ್ ಚಿಲ್ಲಿ ರೆಸ್ಟೋರೆಂಟ್, ಬಸ್ ನಿಲ್ದಾಣದ ಹತ್ತಿರ, ಬಳ್ಳಾರಿ ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯನ್ನು ಶ್ರೀ ಗುರುನಾಥ ಜಾಂತಿಕರ, ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಉದ್ಘಾಟಿಸಿದರು. ಶ್ರೀ ಆನಂದ.ಎಲ್.ಎಸ್., ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ತರಬೇತಿಯಲ್ಲಿ ಬಳ್ಳಾರಿ ಜಿಲ್ಲೆಯ 25 ಸೌಹಾರ್ದ ಸಹಕಾರಿಗಳಿಂದ 48 ಸಹಕಾರಿ ಪ್ರತಿನಿಧಿಗಳು ಭಾಗವಹಿಸಿ, ಪ್ರಯೋಜನವನ್ನು ಪಡೆದುಕೊಂಡರು.

**ರಾಯಚೂರು :** ರಾಯಚೂರು ಜಿಲ್ಲೆಯಲ್ಲಿ 2014-15 ಹಾಗೂ 2015-16ನೇ ಸಾಲಿನಲ್ಲಿ ನೋಂದಣಿಗೊಂಡಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು/ ಉಪಾಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ "ಪ್ರವೇಶ ತರಬೇತಿ"ಯನ್ನು ದಿನಾಂಕ 16.07.2016ರಂದು ಧ್ಯಾನ ಮಂದಿರ ಹಾಗೂ ಯಾತ್ರಿ ನಿವಾಸ, ಮಾನ್ವಿ, ರಾಯಚೂರು ಇಲ್ಲಿ ಆಯೋಜಿಸಲಾಗಿತ್ತು. ತರಬೇತಿಯನ್ನು ಶ್ರೀ ಗುರುನಾಥ ಜಾಂತಿಕರ, ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಉದ್ಘಾಟಿಸಿದರು. ಶ್ರೀ ತಿಮ್ಮಯ್ಯ ಶೆಟ್ಟಿ, ಅಧ್ಯಕ್ಷರು, ಮಾನ್ವಿ ಪಟ್ಟಣ ಸೌಹಾರ್ದ ಸಹಕಾರಿ ಬ್ಯಾಂಕ್ ನಿ., ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ತರಬೇತಿಯಲ್ಲಿ ರಾಯಚೂರು ಜಿಲ್ಲೆಯ 46 ಸೌಹಾರ್ದ ಸಹಕಾರಿಗಳಿಂದ 66 ಸಹಕಾರಿ ಪ್ರತಿನಿಧಿಗಳು ಭಾಗವಹಿಸಿ, ಪ್ರಯೋಜನವನ್ನು ಪಡೆದುಕೊಂಡರು.



ನಂತರ ನಡೆದ ಸಮಾರೋಪ ಕಾರ್ಯಕ್ರಮದಲ್ಲಿ ಶ್ರೀಮತಿ ಮಂಜುಳಾ ಪಾಟೀಲ, ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಉಪಸ್ಥಿತರಿದ್ದು, ಸಹಕಾರಿ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡಿದರು.

# ಗುಣಮಟ್ಟ ನಿರ್ವಹಣೆ ಹಾಗೂ ಅಧಿಪ್ರೇರಣೆ ತರಬೇತಿ

**ದಾವಣಗೆರೆ :** ದಾವಣಗೆರೆ ಜಿಲ್ಲೆಯ ಸಹಕಾರ ಸಂಘಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗಾಗಿ ಒಂದು ದಿನದ "ಗುಣಮಟ್ಟ ನಿರ್ವಹಣೆ ಹಾಗೂ ಅಧಿಪ್ರೇರಣೆ ತರಬೇತಿ"ಯನ್ನು ದಿನಾಂಕ 19.07.2016ರಂದು ದಾವಣಗೆರೆಯ ಜನತಾ ಬಜಾರ್ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ತರಬೇತಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರವರು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ನಂಜನಗೌಡ.ಜಿ.ರವರು ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ದಾವಣಗೆರೆ-ಹರಿಹರ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎನ್.ಎಮ್.ಜೆ.ಬಿ.ಆರಾಧ್ಯ ಹಾಗೂ ದಾವಣಗೆರೆ ಜಿಲ್ಲೆಯ ಸಹಕಾರಿಗಳ ಉಪನಿಬಂಧಕರಾದ ಶ್ರೀ ಎನ್.ಸುರೇಶರವರು ಆಗಮಿಸಿದ್ದರು. ಈ ಸಂದರ್ಭದಲ್ಲಿ ನಿವೃತ ಅಪರ ನಿಬಂಧಕರಾದ



ಶ್ರೀ ಬಿ.ಎ.ಮಹದೇವಪ್ಪ, ಸಹಕಾರ ಸಂಘಗಳ ನಿವೃತ ಅಧಿಕಾರಿ ಶ್ರೀ ಮಹಾರುದ್ರಪ್ಪ, ಹಿರಿಯ ಸಹಕಾರಿಗಳಾದ ಶ್ರೀ ಉಮೇಶ ಶೆಟ್ಟಿ ಮತ್ತು ಶ್ರೀ ಬಿ.ಟಿ.ಸಿದ್ದಪ್ಪ ಇವರುಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಈ ತರಬೇತಿಯಲ್ಲಿ ದಾವಣಗೆರೆ ಜಿಲ್ಲೆಯಿಂದ 56 ಸಹಕಾರಿ ಪ್ರತಿನಿಧಿಗಳು ಭಾಗವಹಿಸಿ, ತರಬೇತಿಯ ಲಾಭ ಪಡೆದುಕೊಂಡರು.

# ಸಹಕಾರ ಸಂಘಗಳ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗಾಗಿ ಒಂದು ದಿನದ "ಗುಣಮಟ್ಟ ನಿರ್ವಹಣೆ ಹಾಗೂ ಅಧಿಪ್ರೇರಣೆ" ತರಬೇತಿ ಕಾರ್ಯಕ್ರಮ



**ತುಮಕೂರು :** ತುಮಕೂರು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳ ಅಧ್ಯಕ್ಷರು ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗಾಗಿ ಒಂದು ದಿನದ "ಗುಣಮಟ್ಟ ನಿರ್ವಹಣೆ ಹಾಗೂ ಅಧಿಪ್ರೇರಣೆ" ತರಬೇತಿ ದಿನಾಂಕ 26.07.2016ರಂದು ತುಮಕೂರಿನ ಶ್ರೀ ಶಿವಾಜಿ ಸೌಹಾರ್ದ ಪತ್ತಿನ ಸಹಕಾರಿಯ ಶ್ರೀ ಶಿವಾಜಿ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಉದ್ಘಾಟಿಸಿದರು.

ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಬಿ.ಗಂಗಾಧರಯ್ಯರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ತುಮಕೂರು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರಾದ ಶ್ರೀ ಬಿ.ಜಿ.ವೆಂಕಟೇಗೌಡ, ತುಮಕೂರು ಬಸವೇಶ್ವರ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀ ಟಿ.ಸಿ.ಓಹಿಲೇಶ್ವರ, ಸಹಕಾರ ಇಲಾಖೆಯ ಉಪನಿಬಂಧಕರಾದ ಶ್ರೀ ಪ್ರಕಾಶ್ ಜಿ, ಸಹಾಯಕ ನಿಬಂಧಕರಾದ ಶ್ರೀಮತಿ ಸತ್ಯಕುಮಾರಿ, ಶ್ರೀ ಶಿವಾಜಿ ಪತ್ತಿನ ಸೌಹಾರ್ದ ಸಹಕಾರಿ ನಿ.,ದ ಅಧ್ಯಕ್ಷರಾದ ಶ್ರೀ ಟಿ.ಎಲ್.ಸುರೇಶರಾವ್ ಆಗಮಿಸಿದ್ದರು.

ತರಬೇತಿಯ ಸಮಾರೋಪ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರವರು ತರಬೇತಿ ಪಡೆದ ಸಹಕಾರ ಸಂಘಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳು ತಮ್ಮ ತಮ್ಮ ಸಹಕಾರ ಸಂಘಗಳ ಕಾರ್ಯಚಟುವಟಿಕೆಗಳ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಬೇಕು ಮತ್ತು ಸಂಘಗಳ ಸದಸ್ಯರಿಗೆ ಉತ್ತಮವಾದ ಸೇವೆಗಳನ್ನು ನೀಡಿ ಸಂಘಗಳ ವ್ಯವಹಾರಗಳೊಂದಿಗೆ ಭಾಗವಹಿಸುವಂತೆ ಪ್ರೇರೇಪಿಸಬೇಕೆಂದು ತಿಳಿಸಿದರು. ಈ ತರಬೇತಿಯಲ್ಲಿ ತುಮಕೂರು ಜಿಲ್ಲೆಯ ಸಹಕಾರ ಸಂಘಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಸೇರಿದಂತೆ ಒಟ್ಟು 62 ಪ್ರತಿನಿಧಿಗಳು ಭಾಗವಹಿಸಿದ್ದರು.

**ಮೈಸೂರು ವಿಭಾಗ**

## ದೈನಂದಿನ ಆರ್ಥಿಕ ವ್ಯವಹಾರಗಳ ನಿರ್ವಹಣೆ ತರಬೇತಿ



**ಮಂಗಳೂರು :** ಮಂಗಳೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ "ದೈನಂದಿನ ಆರ್ಥಿಕ ವ್ಯವಹಾರಗಳ ನಿರ್ವಹಣೆ ತರಬೇತಿ" ಕಾರ್ಯಕ್ರಮವನ್ನು ದಿನಾಂಕ 26.07.2016ರಂದು ಕ್ಯಾಂಪ್ಕೋ ಲಿಮಿಟೆಡ್ ಸಭಾಭವನ, ಮಂಗಳೂರು ಇಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮವನ್ನು ಶ್ರೀ ಬಿ.ಕೆ. ಸಲೀಂ, ಸಹಕಾರಿಗಳ ಉಪ ನಿಬಂಧಕರು, ಮಂಗಳೂರು ಇವರು ಉದ್ಘಾಟಿಸಿದರು.

ಅಧ್ಯಕ್ಷತೆಯನ್ನು ಶ್ರೀ ಎಸ್.ಆರ್.ಸತೀಶ್ಚಂದ್ರ, ಅಧ್ಯಕ್ಷರು, ಕ್ಯಾಂಪ್ಕೋ ಲಿ., ಹಾಗೂ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಹರೀಶ್ ಆಚಾರ್ಯ, ಅಧ್ಯಕ್ಷರು, ಮಂಗಳೂರು ಜಿಲ್ಲಾ ಸಹಕಾರ ಯೂನಿಯನ್, ಶ್ರೀ ವಿಠ್ಠಲ್ ಶೇರೇಗಾರ್, ಉಪ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ, ಶ್ರೀ ಮಹಾಬಲಗಿರಿ, ನಿವೃತ್ತ ಸಿ.ಜಿ.ಎಂ., ಡಿಸಿಸಿ ಬ್ಯಾಂಕ್, ಶಿವಮೊಗ್ಗ ಹಾಗೂ ಶ್ರೀ ವಸಂತ.ಎ, ಮುಖ್ಯಕಾರ್ಯನಿರ್ವಾಹಕರು, ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಪುತ್ತೂರು ಇವರುಗಳು ಆಗಮಿಸಿದ್ದರು. ಈ ತರಬೇತಿಗೆ 52 ಸೌಹಾರ್ದ ಸಹಕಾರಿಗಳಿಂದ 56 ಪ್ರತಿನಿಧಿಗಳು ಭಾಗವಹಿಸಿದ್ದರು.

## ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣೆ ತರಬೇತಿ

**ಮೈಸೂರು :** ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಗಳ ಪತ್ತಿನ ಸಹಕಾರ ಸಂಘಗಳಿಗೆ "ಅಧಿಪ್ರೇರಣೆ ಹಾಗೂ ಗುಣಮಟ್ಟ ನಿರ್ವಹಣೆ ತರಬೇತಿ" ಕಾರ್ಯಕ್ರಮವನ್ನು ದಿನಾಂಕ 21.07.2016ರಂದು ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಸಭಾಭವನ, ಚಾಮರಾಜ ಜೋಡಿ ರಸ್ತೆ, ಮೈಸೂರು ಇಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ನಿವೃತ್ತ ಸಹಕಾರ ಸಂಘಗಳ ಅಪರ ನಿಬಂಧಕರಾದ ಶ್ರೀ ಬಿ.ಎ.ಮಹದೇವಪ್ಪರವರು ಉದ್ಘಾಟಿಸಿದರು.

ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ್‌ರವರು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಸಹಕಾರಿಗಳ ಉಪ ನಿಬಂಧಕರಾದ ಶ್ರೀ ಪಿ.ಶಶಿಧರ್ ಮತ್ತು ಸಹಕಾರಿಗಳ ಜಂಟಿ ನಿಬಂಧಕರು




ಹಾಗೂ ಎಂ.ಸಿ.ಡಿ.ಸಿ.ಸಿ ಬ್ಯಾಂಕ್‌ನ ಮುಖ್ಯಕಾರ್ಯನಿರ್ವಹಣಾಧಿಕಾರಿಯಾದ ಶ್ರೀ ಗುರುಸ್ವಾಮಿ ಇವರುಗಳು ಆಗಮಿಸಿದ್ದರು. ಈ ತರಬೇತಿಗೆ ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಗಳಿಂದ 66 ಸಹಕಾರ ಸಂಘಗಳಿಂದ 78 ಪ್ರತಿನಿಧಿಗಳು ಭಾಗವಹಿಸಿದ್ದರು.

## ಮಾವುಲಿ ಕಾಮಗಾರ ಕ್ರೆಡಿಟ್ ಸೌಹಾರ್ದ ಸಹಕಾರಿಯ ಉದ್ಘಾಟನೆ




**ಮುಚ್ಚಂಡಿ :** ಮಾವುಲಿ ಕಾಮಗಾರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಮುಚಂಡಿ ಸಹಕಾರಿಯನ್ನು ಜಿಲ್ಲೆಯ ಉಸ್ತುವಾರಿ ಮತ್ತು ಸಣ್ಣ ಕೈಗಾರಿಕಾ ಸಚಿವರಾದ ಶ್ರೀ ಸತೀಶ ಜಾರಕಿಹೊಳಿರವರು ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀಮತಿ ಆಶಾ ಐಹೊಳಿ, ಉಪಾಧ್ಯಕ್ಷರಾದ ಶ್ರೀ ಅರುಣ ಕಟಾಂಬಳೆ, ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಾಗಿರುವ ಶ್ರೀ ಶಂಕರಗೌಡ ಪಾಟೀಲ, ಪ್ರತಿನಿಧಿಗಳಾದ ಶ್ರೀ ಸಿದ್ದು ಸುಣಗಾರ, ಶ್ರೀ ರಾಜು ಬಾಬುಗಾವಢೆ, ಶ್ರೀ ಅಜ್ಜಪ್ಪ ಮಳಗಲಿ, ಶ್ರೀಮತಿ ಮಲ್ಲವ್ವಾ ಬುಡ್ರಿ, ಲಗಮವ್ವಾ ಗುಜನಾಳ, ಮುಚಂಡಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀ ವಿನೋದ ಕೊಳಜಿಗೌಡ ಇವರನ್ನು ಗ್ರಾಮಸ್ಥರ ಮತ್ತು ಸಹಕಾರಿಯ ವತಿಯಿಂದ ಸನ್ಮಾನಿಸಲಾಯಿತು.

# ಶ್ರೀ ಹೆಚ್.ವಿ.ರಾಜೀವ ಬಳಗ, ಮೈಸೂರು ಇವರಿಂದ ಸತತ 100ನೇ ಸ್ವಚ್ಛತಾ ಅಭಿಯಾನ

## ಸ್ವಚ್ಛತಾ ಜಾಗೃತಿ ನಡಿಗೆಗೆ ಮಾಜಿ ಮುಖ್ಯಮಂತ್ರಿ ಶ್ರೀ ಯಡಿಯೂರಪ್ಪ ಚಾಲನೆ : 100 ಪೌರಕಾರ್ಮಿಕರಿಗೆ ಸನ್ಮಾನ

## ಪ್ರಧಾನಿ ಮೋದಿಯವರ ಸ್ವಚ್ಛತಾ ಅಭಿಯಾನ ಸಾಮಾಜಿಕ ಕ್ರಾಂತಿಯಾಗಬೇಕು - ಡಾ. ಸುಬ್ರಮಣ್ಯ

**ಮೈಸೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರು, ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರೂ ಆಗಿರುವ ಶ್ರೀ ಹೆಚ್.ವಿ.ರಾಜೀವರವರ ಬಳಗ ಮೈಸೂರಿನಲ್ಲಿ ಸತತವಾಗಿ 100ನೇ ಸ್ವಚ್ಛತಾ ಕಾರ್ಯಕ್ರಮವನ್ನು ದಿನಾಂಕ 24 ಜುಲೈ 2016ರಂದು ಏರ್ಪಡಿಸಲಾಗಿತ್ತು. ಸ್ವಚ್ಚತಾ ಕಾರ್ಯಕ್ರಮದ ಅಂಗವಾಗಿ 100 ಪೌರ ಕಾರ್ಮಿಕರನ್ನು ಸನ್ಮಾನಿಸಲಾಯಿತು.

ಸಾರ್ವಜನಿಕರಲ್ಲಿ ಸ್ವಚ್ಛತಾ ಜಾಗೃತಿ ಮೂಡಿಸುವುದಕ್ಕಾಗಿ ಸ್ವಚ್ಛತಾ ಜಾಗೃತಿ ನಡಿಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮವನ್ನು ಮಾಜಿ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪನವರು ಉದ್ಘಾಟಿಸಿದರು.

### "ಸ್ವಚ್ಛತಾ ಪ್ರತಿಜ್ಞೆ"

ನಾನು, ನನ್ನ ಕುಟುಂಬದ ಸದಸ್ಯರು ಮತ್ತು ಗೆಳೆಯರು ಮೈಸೂರು ನಗರವನ್ನು ಸ್ವಚ್ಛವಾಗಿಡಲು ಈ ಕೆಳಕಂಡ ನಿಯಮಗಳನ್ನು ಚಾಚು ತಪ್ಪದೇ ಪಾಲಿಸುತ್ತೇವೆ ಎಂದು ಪ್ರಮಾಣೀಕರಿಸುತ್ತೇನೆ.

1. ಆರೋಗ್ಯದ ಮೇಲೆ ದುಷ್ಪರಿಣಾಮವನ್ನುಂಟು ಮಾಡುವ ಪ್ಲಾಸ್ಟಿಕ್, ಥರ್ಮೋಕೋಲ್, ಮೇಣ ಲೇಪಿತ ಪೇಪರ್ ತಟ್ಟೆ ಲೋಟಗಳನ್ನು ಬಿಸಿ ಮತ್ತು ಸಿದ್ಧಪಡಿಸಿದ ಆಹಾರ ಪದಾರ್ಥಗಳಿಗಾಗಿ ಬಳಸುವುದಿಲ್ಲ. ನಾಗರೀಕರ ಆರೋಗ್ಯವನ್ನು ಕಾಪಾಡುತ್ತೇನೆ.
2. ನೀರನ್ನು ಹಿತವಾಗಿ ಬಳಸುತ್ತೇನೆ. ನದಿ, ಕೆರೆಗಳನ್ನು ಕಲುಷಿತ ಗೊಳಿಸುವುದಿಲ್ಲ. ಜಲಚರಗಳನ್ನು ನಾಶಪಡಿಸುವುದಿಲ್ಲ.
3. ಹಸಿ ಮತ್ತು ಒಣ ಕಸವನ್ನು ಬೇರ್ಪಡಿಸುತ್ತೇನೆ. ಕಸವನ್ನು ಎಲ್ಲೆಂದರಲ್ಲಿ ಎಸೆಯದೇ, ಮನೆಗೆ ಕಸ ಸಂಗ್ರಹಿಸಲು ಬರುವ ಪೌರಕಾರ್ಮಿಕ (ಸ್ವಚ್ಛತಾ ಸೇನಾನಿ) ಮಿತ್ರನಿಗೆ ಮಾತ್ರ ಕೊಡುತ್ತೇನೆ.
4. ರಸ್ತೆ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಕಸ ಹಾಕುವುದಾಗಲಿ, ಮೂತ್ರ ವಿಸರ್ಜನೆಯಾಗಲಿ, ಉಗುಳುವುದಾಗಲಿ ಮಾಡುವುದಿಲ್ಲ. ಇಂತಹ ಅಸಹ್ಯಕರ ಅಭ್ಯಾಸದಿಂದ ದೂರವಿರುತ್ತೇನೆ.

ಸೌಹಾರ್ದ ಸಹಕಾರಿಗಳು ತಮ್ಮ ಸಹಕಾರಿಗಳಲ್ಲೂ ಈ ಸ್ವಚ್ಛತಾ ಪ್ರತಿಜ್ಞೆಯನ್ನು ಸ್ವೀಕರಿಸಿ ಸ್ವಚ್ಛತಾ ಆಂದೋಲನ ಕಾರ್ಯಕ್ರಮದಲ್ಲಿ ಭಾಗಿಯಾಗುವುದಕ್ಕಾಗಿ ಮಾಹಿತಿಗಾಗಿ ಪ್ರಕಟಿಸಿದೆ.



ಪೌರ ಕಾರ್ಮಿಕರಿಗೆ ಸನ್ಮಾನ

ಮೈಸೂರು ನಗರದ ವಿದ್ಯಾರಣ್ಯಪುರದ ನಿತ್ಯಾನಂದ ಕಲ್ಯಾಣ ಮಂಟಪದಲ್ಲಿ ಶ್ರೀ ಹೆಚ್.ವಿ.ರಾಜೀವ ಬಳಗದವರು ಹಮ್ಮಿಕೊಂಡಿದ್ದ 100ನೇ ಸ್ವಚ್ಚತಾ ಅಭಿಯಾನದ ಅಂಗವಾಗಿ ಹಮ್ಮಿಕೊಂಡಿದ್ದ ವಿಚಾರ ಸಂಕಿರಣ ಮತ್ತು ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಸ್ವಾಮಿ ವಿವೇಕಾನಂದ ಯೂತ್ ಮೂಮೆಂಟ್ ಅಧ್ಯಕ್ಷರಾದ ಡಾ.ಬಾಲಸುಬ್ರಮಣ್ಯಂರವರು ಮಾತನಾಡಿ ಪ್ರಧಾನಿ ಶ್ರೀ ಮೋದಿಯವರು ಪ್ರಾರಂಭಿಸಿದ ಈ ಸ್ವಚ್ಛತಾ ಅಭಿಯಾನವು ಈ ದೇಶದ ಸಾಮಾಜಿಕ ಕ್ರಾಂತಿಗೆ ಚಾಲನೆ ನೀಡಿದಂತಾಗಿದೆ.

ಸಾರ್ವಜನಿಕರು ಇದರಲ್ಲಿ ಹೆಚ್ಚಾಗಿ ಪಾಲ್ಗೊಳ್ಳುವಂತಾಗಬೇಕು. ಶ್ರೀ ಹೆಚ್.ವಿ.ರಾಜೀವ ಬಳಗದವರು ಪ್ರಾರಂಭಿಸಿದ ಈ ಸ್ವಚ್ಛತಾ ಅಭಿಯಾನ ಮೈಸೂರಿಗೆ ಒಂದು ಘನತೆಯನ್ನು ತಂದಿದೆ. ಎಲ್ಲರ ಪರವಾಗಿ ಶ್ರೀ ರಾಜೀವರವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದರು.

ನಂತರ ಶ್ರೀ ಹೆಚ್.ವಿ.ರಾಜೀವರವರು ಮಾತನಾಡಿ "ವಾರಕ್ಕೆ ಎರಡು ಗಂಟೆ ಬೀದಿಗೆ ಬನ್ನಿ, ಸ್ವಚ್ಛತಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಿ" ಎಂಬ ಘೋಷಣೆಯೊಂದಿಗೆ ಶ್ರೀ ಹೆಚ್.ವಿ. ರಾಜೀವ ಬಳಗದಿಂದ ಸ್ವಚ್ಛತಾ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದ್ದೇವೆ. ನಿಮ್ಮೆಲ್ಲರ ಸಹಕಾರದಿಂದ

**ರಾಜ್ಯದ ಸೌಹಾರ್ದ ಸಹಕಾರಿಗಳಲ್ಲಿ ಮನವಿ :** ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳು ತಮ್ಮ ತಮ್ಮ ಪರಿಸರದಲ್ಲಿ ಈ ಸ್ವಚ್ಛತಾ ಅಭಿಯಾನವನ್ನು ಪರಿಣಾಮಕಾರಿಯಾಗಿ ಹಮ್ಮಿಕೊಂಡು ಸಾಮಾಜಿಕ ಕಳಕಳಿ ಎಂಬ ಸಹಕಾರ ತತ್ವವನ್ನು ಪಾಲಿಸುವಲ್ಲಿ ಸೌಹಾರ್ದ ಸಹಕಾರಿಗಳು ಮುಂದೆ ಎಂಬುದು ಸಹಕಾರ ಚಳುವಳಿಗೆ ಮಾದರಿಯಾಗಲಿ, ಸ್ವಚ್ಛತೆಯೆಡೆಗೆ "ಸೌಹಾರ್ದ ಸಹಕಾರಿಗಳ ಒಂದು ಹೆಜ್ಜೆ" ಆಂದೋಲನವನ್ನು ಚುರುಕುಗೊಳಿಸಲು ಇದೇ ಸಂದರ್ಭದಲ್ಲಿ ಶ್ರೀ ಹೆಚ್.ವಿ.ರಾಜೀವರವರು ಮನವಿ ಮಾಡಿದರು.

ಮೈಸೂರು ದೇಶದ ಸ್ವಚ್ಛತಾ ಕಾರ್ಯಕ್ರಮದಲ್ಲಿ ಗುರುತಿಸಿಕೊಂಡಿದೆ ಎಂದು ತಿಳಿಸಿ, ಈ ನೂರನೇ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲಾ ಸಾರ್ವಜನಿಕರಿಗೆ, ಶಾಲಾ ಕಾಲೇಜುಗಳಿಗೆ, ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ, ಶಿಕ್ಷಕ ವೃಂದದವರಿಗೆ, ಅಧಿಕಾರಿಗಳಿಗೆ ಹಾಗೂ ಗಣ್ಯರಿಗೆ ಕೃತಜ್ಞತೆಗಳನ್ನು ತಿಳಿಸಿದರು.

ಶ್ರೀ ಬಿ.ಎಸ್.ಯಡಿಯೂರಪ್ಪನವರು ಮಾತನಾಡಿ ಗಾಂಧೀಜಿಯವರು ಸ್ವಚ್ಛತೆಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದ್ದರು. Cleanliness is next to God ಎಂದು ನಂಬಿದ್ದವರು.

ಕಳೆದ 50–60 ವರ್ಷಗಳಲ್ಲಿ ಸರಕಾರ ಅಥವಾ ಯಾವೊಬ್ಬರು ಈ ವಿಷಯಕ್ಕೆ ಮಹತ್ವ ಕೊಟ್ಟಿರಲಿಲ್ಲ. ಪ್ರಧಾನಿ ಶ್ರೀ ಮೋದಿಯವರು ಈ ಅಭಿಯಾನವನ್ನು ಪ್ರಾರಂಭಿಸಿರುವುದು ಶ್ಲಾಘನೀಯ ಹಾಗೂ ಸ್ವಾಗತಾರ್ಹ ಎಂದರು.

ಸ್ವಚ್ಛತೆ ಮಾನವನ ಬದುಕಿಗೆ ಅವಶ್ಯವಾದದ್ದು, ದೇಶದ ಆರ್ಥಿಕ ಅಭಿವೃದ್ಧಿಗೂ ಪೂರಕ, ನಮ್ಮ ಕಾನೂನುಗಳಲ್ಲಿಯೂ ಸ್ವಚ್ಛತೆಗೆ ಆದ್ಯತೆ ನೀಡುವಂತಾಗಬೇಕು, ವಿದೇಶಿಯರನ್ನು ಆಕರ್ಷಿಸುವುದು ಮೊದಲು ಸ್ವಚ್ಛತೆ. ಪ್ರಧಾನಿ ಶ್ರೀ ಮೋದಿಯವರು ಈ ಅಭಿಯಾನವನ್ನು ಪ್ರಾರಂಭಿಸಿದ್ದರಿಂದ ನಮ್ಮ ದೇಶದ ಮೇಲೆ ಪ್ರತಿಕೂಲ ವಾತಾವರಣ ಸೃಷ್ಟಿಯಾಗಿದೆ. ವಿದೇಶಗಳಲ್ಲೂ ಭಾರತದ ಬಗ್ಗೆ ಗೌರವ ಹೆಚ್ಚಿದೆ ಎಂದು ತಿಳಿಸಿ, ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದರ ಮೂಲಕ ಜನರಲ್ಲಿ ಸ್ವಚ್ಛತೆಯ ಬಗ್ಗೆ ಜಾಗೃತಿಯನ್ನು ಮೂಡಿಸುತ್ತಿರುವ ಶ್ರೀ ಹೆಚ್.ವಿ.ರಾಜೀವರವರಿಗೆ ಅಭಿನಂದನೆಗಳು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮೈಸೂರಿನ ಮಹಾಪೌರರಾದ ಶ್ರೀ ಬಿ.ಎಲ್.ಭೈರಪ್ಪ, ಉಪಮಹಾಪೌರರಾದ ಶ್ರೀಮತಿ ವನಿತಾ ಪ್ರಸನ್ನ, ಪಾಲಿಕೆ ಸದಸ್ಯರು, ಮಹಾನಗರ ಪಾಲಿಕೆ ಆಯುಕ್ತರಾದ ಶ್ರೀ ಬೆಟ್ಟಸೂರಮಠ ಹಾಗೂ ಅನೇಕ ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಕಾರ್ಯಕ್ರಮದಲ್ಲಿ ರಾಮಕೃಷ್ಣಾಶ್ರಮದ ಸ್ವಾಮೀಜಿ ಶ್ರೀ ಮುಕ್ತಿದಾನಂದರವರು ಮಾತನಾಡಿ, ಭಾಗವಹಿಸಿದ್ದ ಎಲ್ಲರಿಗೂ ಸ್ವಚ್ಛತೆಯ ಬಗ್ಗೆ ಮೈಸೂರು ಶ್ರೀ ಹೆಚ್.ವಿ.ರಾಜೀವ ಬಳಗದವರು ಸಿದ್ಧಪಡಿಸಿದ ಸ್ವಚ್ಛತಾ ಪ್ರತಿಜ್ಞೆಯನ್ನು ಭೋದಿಸಿದರು.

## ಮಂಡ್ಯ ಜಿಲ್ಲಾ ಶ್ರೀ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ.,ಯ ವತಿಯಿಂದ ಮನೆ ಮನೆಗೆ ಸೌಹಾರ್ದ ಬಸವಜ್ಯೋತಿ ಕಾರ್ಯಕ್ರಮ

ಮಂಡ್ಯ ಜಿಲ್ಲಾ ಶ್ರೀ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಸಹಕಾರಿಯ ವತಿಯಿಂದ “ಮನೆ ಮನೆಗೆ ಸೌಹಾರ್ದ ಬಸವಜ್ಯೋತಿ” ಕಾರ್ಯಕ್ರಮವನ್ನು ದಿನಾಂಕ : 19.07.2016ರಂದು ಮಂಡ್ಯ ನಗರದಲ್ಲಿನ ವಾಸವಿ ಮಹಲ್‌ನಲ್ಲಿ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ವಹಿಸಿದ್ದ ಪರಮಪೂಜ್ಯ ಮಾತಾಜಿ ಬಸವರಾಜೇಶ್ವರಿ, ಪೀಠಾಧ್ಯಕ್ಷರು, ಬಸವಧಾಮ, ಅತ್ತಿವೇರಿ ಇವರು ತಮ್ಮ ಆಶೀರ್ವಚನ ನೀಡಿದರು.



ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರವರು ಮಂಡ್ಯ ಜಿಲ್ಲಾ ಶ್ರೀ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿಯು ಕಳೆದ 48 ತಿಂಗಳುಗಳಿಂದ ಮನೆ ಮನೆಗೆ ಸೌಹಾರ್ದ ಬಸವ ಜ್ಯೋತಿ ಎಂಬ ಧಾರ್ಮಿಕ ಕಾರ್ಯಕ್ರಮವನ್ನು ಹಮ್ಮಿಕೊಂಡು ಬರುತ್ತಿದ್ದು, ಕಾಯಕ ಯೋಗಿಯಾದ ಶ್ರೀ ಬಸವೇಶ್ವರರ ಅನೇಕ ವಿಚಾರ ಧಾರೆಗಳನ್ನು ಜನರಿಗೆ ತಿಳಿಸಿ, ಅವರ ಬದುಕಿನಲ್ಲಿಯೂ ಸಹ ಬಸವೇಶ್ವರರ ತತ್ವ ಮತ್ತು ಆದರ್ಶಗಳನ್ನು ಅಳವಡಿಸಿಕೊಳ್ಳಲು ಅನುಕೂಲ ಮಾಡಿಕೊಟ್ಟಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಎಸ್. ನಾಗರಾಜು, ಅಧ್ಯಕ್ಷರು, ಮಂಡ್ಯ ಜಿಲ್ಲಾ ಶ್ರೀ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಂಡ್ಯ ಹಾಗೂ ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಮಾತನಾಡಿ ಸಾಮಾಜಿಕ ಪಿಡುಗುಗಳನ್ನು ಸಮಾಜದಿಂದ ಕಿತ್ತೊಗೆಯಬೇಕಾದರೆ ಜನರಿಗೆ ಬಸವೇಶ್ವರರಂತಹ ಮಹಾನ್ ವ್ಯಕ್ತಿಗಳ ಜೀವನದ ಘಟನೆಗಳು ಮತ್ತು ತತ್ವ ಆದರ್ಶಗಳ ಬಗ್ಗೆ ಮಾಹಿತಿ ನೀಡಬೇಕು ಎಂದರು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಶರಣಗೌಡ ಜಿ ಪಾಟೀಲ, ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಮಾತನಾಡಿ, ಶರಣರು ತಮ್ಮ ವಚನಗಳ ಮೂಲಕ ಸಾಮಾಜಿಕ ಕ್ರಾಂತಿ ಮಾಡಿದ್ದಾರೆ. ಅದೇರೀತಿ ನಾವುಗಳು ಶರಣರ ತತ್ವ ಮತ್ತು ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸಮಾಜದ ಅಭಿವೃದ್ಧಿಗೆ ಶ್ರಮಿಸೋಣ ಹಾಗೂ ಆರ್ಥಿಕ ಶಿಸ್ತನ್ನು ಸಹ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳೋಣ ಎಂದು ಕರೆ ನೀಡಿದರು.

## ಮುಂಬರುವ ಕಾರ್ಯಕ್ರಮಗಳು

● **ಚಿನ್ನಾಭರಣ ಸಾಲ ತರಬೇತಿ (Jewel Loan Training) :** ಸೌಹಾರ್ದ ಸಹಕಾರಿ ಬ್ಯಾಂಕುಗಳಲ್ಲಿ ಹಾಗೂ ಸೌಹಾರ್ದ ಸಹಕಾರಿಗಳಲ್ಲಿ ಚಿನ್ನಾಭರಣ ಸಾಲ ನೀಡುವಾಗ ಅನುಸರಿಸಬಹುದಾದ ಕ್ರಮಗಳು ಹಾಗೂ ಚಿನ್ನದ ಪರೀಕ್ಷೆ, ಸಾಲ ಮಂಜೂರಾತಿ ಕ್ರಮಗಳು ಹಾಗೂ ಅಡವಿಟ್ಟ ಚಿನ್ನವನ್ನು ಭದ್ರವಾಗಿರಿಸುವ ಕ್ರಮಗಳು ಇತ್ಯಾದಿ ವಿಷಯಗಳ ಬಗ್ಗೆ ಒಂದು ದಿನದ ತರಬೇತಿಯನ್ನು **31 ಆಗಸ್ಟ್ 2016ರಂದು ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಪದ್ಮನಾಭನಗರ, ಬೆಂಗಳೂರು** ಇಲ್ಲಿ ನಡೆಸಲು ಉದ್ದೇಶಿಸಲಾಗಿದೆ. ಭಾಗವಹಿಸಲು ಅಪೇಕ್ಷಿಸುವ ಸೌಹಾರ್ದ ಸಹಕಾರಿ ಬ್ಯಾಂಕುಗಳು ಹಾಗೂ ಸೌಹಾರ್ದ ಸಹಕಾರಿಗಳು ತಮ್ಮ ಸಂಸ್ಥೆಯಿಂದ ಒಬ್ಬರು ಅಧಿಕಾರಿ/ ಸಿಬ್ಬಂದಿಯವರನ್ನು ಕಳುಹಿಸಬಹುದಾಗಿದೆ. ಸೌಹಾರ್ದ ಸಹಕಾರಿಗಳ ಉತ್ತಮ ಗುಣಮಟ್ಟದ ಕಾರ್ಯನಿರ್ವಹಣೆಗಾಗಿ ಬೇಡಿಕೆಗನುಗುಣವಾಗಿ (Need Based Training Programme) ಸಂಯುಕ್ತ ಸಹಕಾರಿಯು ಈ ತರಬೇತಿಯನ್ನು ಆಯೋಜಿಸಲು ಉದ್ದೇಶಿಸಿದೆ. ಪ್ರವೇಶ ಶುಲ್ಕ ತಲಾ ರೂ 100/–. ತರಬೇತಿಗೆ ಮೊದಲು ನೋಂದಾಯಿಸಿದ 60 ಪ್ರತಿನಿಧಿಗಳಿಗೆ ಒಂದು ತಂಡ ರಚಿಸಿ, ತರಬೇತಿ ನೀಡಲಾಗುವುದು. ಹೆಚ್ಚಿನ ಸಂಖ್ಯೆಯಾದಲ್ಲಿ 2ನೇ ತಂಡವನ್ನು ರಚಿಸಿ, ತರಬೇತಿ ನೀಡಲಾಗುವುದು. ಸೌಹಾರ್ದ ಸಹಕಾರಿಗಳು/ ಸಹಕಾರಿ ಬ್ಯಾಂಕಿನವರು ಭಾಗವಹಿಸುವ ಸಿಬ್ಬಂದಿಯ ಹೆಸರು ಹಾಗೂ ಸಹಕಾರಿ ಬ್ಯಾಂಕಿನ/ ಸಹಕಾರಿಯ ಹೆಸರನ್ನು **ಆಗಸ್ಟ್ 25ರ ಒಳಗೆ ಕಳುಹಿಸಿ ನೋಂದಾಯಿಸಲು ಸೂಚಿಸಿದೆ.**

● **ದಾವಾ ದಾಖಲಾತಿ ಕ್ರಮಗಳ ಅನುಸರಣೆಗಾಗಿ ವಿಶೇಷ ತರಬೇತಿ ಅಭಿಯಾನ :** ರಾಜ್ಯ ಸರಕಾರ ಸೌಹಾರ್ದ ಸಹಕಾರಿಗಳಲ್ಲಿನ ವ್ಯಾಜ್ಯಗಳ ಶೀಘ್ರ ವಿಲೇವಾರಿಗಾಗಿ ಸಂಯುಕ್ತ ಸಹಕಾರಿಗೆ ಪ್ರತ್ಯೇಕ ನ್ಯಾಯಾಲಯವನ್ನು ಮಂಜೂರು ಮಾಡಿರುತ್ತದೆ. ಸದರಿ ನ್ಯಾಯಾಲಯದ ಕಾರ್ಯನಿರ್ವಹಣೆ ಪ್ರಾರಂಭವಾಗಿರುತ್ತದೆ. ಅನೇಕ ಸಹಕಾರಿಗಳು ದಾವಾ ದಾಖಲಾತಿಗೆ ಕ್ರಮವಿಡಲು ಪ್ರಾರಂಭಿಸಿದ್ದಾರೆ.

ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ದಾವಾ ದಾಖಲಿಸಲು ಅನುಕೂಲವಾಗುವ ದೃಷ್ಟಿಯಿಂದ ದಾವಾ ದಾಖಲಾತಿ ಕ್ರಮಗಳ ಬಗ್ಗೆ ವಿಶೇಷ ತರಬೇತಿ ಕಾರ್ಯಕ್ರಮಗಳನ್ನು ರಾಜ್ಯದಾದ್ಯಂತ ಹಮ್ಮಿಕೊಳ್ಳಲಾಗುತ್ತಿದೆ. ಈ ತರಬೇತಿಯಲ್ಲಿ ದಾವಾ ದಾಖಲಾತಿ ಕ್ರಮಗಳನ್ನು ತಿಳಿಯಪಡಿಸುವ ಕ್ರಮದ ಜೊತೆಗೆ ನಮೂನೆ(ಫಾರ್ಮ್)ಗಳನ್ನು ಭರ್ತಿ ಮಾಡುವ ಪ್ರಾಯೋಗಿಕವನ್ನು ಏರ್ಪಡಿಸಲಾಗಿದೆ. ತರಬೇತಿಗಳನ್ನು ಏರ್ಪಡಿಸುವ ಕೇಂದ್ರಗಳು ಹಾಗೂ ಭಾಗವಹಿಸುವ ಜಿಲ್ಲೆಗಳು, ತರಬೇತಿ ನಡೆಸುವ ದಿನಾಂಕ ಹಾಗೂ ಸ್ಥಳಗಳ ಬಗ್ಗೆ ಸಂಯುಕ್ತ ಸಹಕಾರಿಯ ವಿಭಾಗೀಯ ಕಛೇರಿಗಳಿಂದ ಮಾಹಿತಿಗಳನ್ನು ಕಳುಹಿಸಲಾಗುತ್ತದೆ. ರಾಜ್ಯದ ಎಲ್ಲಾ ಜಿಲ್ಲೆಗಳ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಅಥವಾ ಸಹಕಾರಿಗೆ ಸಂಬಂಧಿಸಿದ ಹಿರಿಯ ಅಧಿಕಾರಿಗಳು ಕಡ್ಡಾಯವಾಗಿ ಭಾಗವಹಿಸಿ, ದಾವಾ ದಾಖಲಾತಿಯ ಕ್ರಮಗಳನ್ನು ತಿಳಿದುಕೊಂಡು ಮುಂದಿನ ಕ್ರಮವಿಡಲು ಸೂಚಿಸಿದೆ.

**ತರಬೇತಿಯ ಹೆಸರು : ವ್ಯವಹಾರಗಳಲ್ಲಿ ವೃತ್ತಿಪರತೆ ಹಾಗೂ ಸುಸ್ಥಿಸಾಲಗಳ ವಸೂಲಾತಿ ಹಾಗೂ ದಾವಾ ದಾಖಲಾತಿ ಕ್ರಮಗಳು**

| ದಿನಾಂಕ | ಸ್ಥಳ | ಭಾಗವಹಿಸಬೇಕಾದವರು |
|---|---|---|
| 09.08.2016 | ಕನ್ನಡ ಸಾಹಿತ್ಯ ಭವನ, ಚನ್ನಮ್ಮ ಸರ್ಕಲ್, ಬೆಳಗಾವಿ | ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನಲ್ಲಿರುವ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು |
| 10.08.2016 | ಕನ್ನಡ ಸಾಹಿತ್ಯ ಭವನ, ಚನ್ನಮ್ಮ ಸರ್ಕಲ್, ಬೆಳಗಾವಿ | ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಮತ್ತು ಖಾನಾಪುರ ತಾಲ್ಲೂಕಿನಲ್ಲಿರುವ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು |
| 11.08.2016 | ಹೋಟೆಲ್ ಹುಲಿಗೆಮ್ಮ ರೆಸಿಡೆನ್ಸಿ, ನಿಪ್ಪಾಣಿ–ಬಾಗಲಕೋಟ ರಸ್ತೆ, ಬಸವ ವೃತ್ತ ಹತ್ತಿರ, ಚಿಕ್ಕೋಡಿ | ಬೆಳಗಾವಿ ಜಿಲ್ಲೆಯ ಅಥಣಿ, ಚಿಕ್ಕೋಡಿ, ರಾಯಭಾಗ ತಾಲ್ಲೂಕಿನಲ್ಲಿರುವ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು |

## ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಸಹಕಾರಿಗಳಿಗಾಗಿ ನಾಯಕತ್ವ ತರಬೇತಿ

ರಾಷ್ಟ್ರೀಯ ಸಹಕಾರಿ ಶಿಕ್ಷಣ ಕೇಂದ್ರ (NCCE)ದ ವತಿಯಿಂದ ಭಾರತದ ಎಸ್‌ಸಿ/ ಎಸ್‌ಟಿ ಸಹಕಾರಿಗಳ ಅಧ್ಯಕ್ಷರು/ ನಿರ್ದೇಶಕರುಗಳಿಗೆ "ನಾಯಕತ್ವ ಅಭಿವೃದ್ಧಿ ತರಬೇತಿ"(Leadership Development Programme)ಯನ್ನು ದಿನಾಂಕ 17 ರಿಂದ 19 ಅಕ್ಟೋಬರ್ 2016 ರವರೆಗೆ ರಾಷ್ಟ್ರೀಯ ಸಹಕಾರಿ ಶಿಕ್ಷಣ ಕೇಂದ್ರ (NCCE), ನವದೆಹಲಿ ಇಲ್ಲಿ ಆಯೋಜಿಸಲಾಗಿದೆ. ತರಬೇತಿಯಲ್ಲಿ ಭಾಗವಹಿಸುವ ಪ್ರತಿನಿಧಿಗಳಿಗೆ ಸ್ಲೀಪರ್ ಕ್ಲಾಸ್/ ಸಾಮಾನ್ಯ ಬಸ್‌ನ (ಬಂದು ಹೋಗುವ) ಪ್ರಯಾಣ ವೆಚ್ಚ, ಉಳಿದು ಕೊಳ್ಳುವ ವ್ಯವಸ್ಥೆ ಮತ್ತು ತರಬೇತಿ ಹಾಗೂ ತರಬೇತಿ ಸಾಮಾಗ್ರಿಗಳ ಸೌಲಭ್ಯಗಳನ್ನು ರಾಷ್ಟ್ರೀಯ ಸಹಕಾರಿ ಶಿಕ್ಷಣ ಕೇಂದ್ರದಿಂದ ಒದಗಿಸಲಾಗುವುದು. ಪ್ರವೇಶ ಶುಲ್ಕ ಇರುವುದಿಲ್ಲ. ಮೊದಲು ನೋಂದಣಿ ಮಾಡುವ 40 ಪ್ರತಿನಿಧಿಗಳಿಗೆ ಮಾತ್ರ ಅವಕಾಶ. ಆಸಕ್ತ ಎಸ್‌ಸಿ/ ಎಸ್‌ಟಿ ಸಹಕಾರಿಗಳ ಅಧ್ಯಕ್ಷರು/ ನಿರ್ದೇಶಕರುಗಳಿಗೆ ಭಾಗವಹಿಸಲು ಈ ಮೂಲಕ ಕೋರಿದೆ. ಹೆಚ್ಚಿನ ಮಾಹಿತಿಗಾಗಿ ರಾಷ್ಟ್ರೀಯ ಸಹಕಾರಿ ಶಿಕ್ಷಣ ಕೇಂದ್ರ (NCCE), ನಂ. 3, ಸಿರಿ ಇನ್ಸಿಟ್ಯೂಷನಲ್ ಏರಿಯಾ, ಆಗಸ್ಟ್ ಕ್ರಾಂತಿ ಮಾರ್ಗ, ನವದೆಹಲಿ–110016, ದೂ : 011–26861472/ 26861007, E-Mail : nccend@yahoo.co.in ಇವರನ್ನು ಸಂಪರ್ಕಿಸುವುದು. ಭಾಗವಹಿಸಲಿಚ್ಛಿಸುವ ಸೌಹಾರ್ದ ಸಹಕಾರಿಗಳು ಸಂಯುಕ್ತ ಸಹಕಾರಿಯ ಸಹ ಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ್ ಕೆ, ತರಬೇತಿ ಅಧಿಕಾರಿಯಾದ ಶ್ರೀ ವಿ.ಜೆ. ಕಾರಕೂನ್‌ರವರನ್ನು ಸಂಪರ್ಕಿಸುವುದು.



## ಶ್ರೀ ಅರುಣ ಶಹಾಪೂರರವರಿಗೆ ಸನ್ಮಾನ

ಭಾಸ್ಕರಾಚಾರ್ಯ ಸೌಹಾರ್ದ ಸಹಕಾರಿ ನಿ., ಬಸವನಬಾಗೇವಾಡಿ ಸಹಕಾರಿಯ ವತಿಯಿಂದ ವಿಧಾನ ಪರಿಷತ್ ಸದಸ್ಯರಾದ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,ದ ನಿರ್ದೇಶಕರಾದ ಶ್ರೀ ಅರುಣ ಶಹಾಪೂರ ಅವರನ್ನು ಸನ್ಮಾನಿಸಲಾಯಿತು. ಸನ್ಮಾನ ಸ್ವೀಕರಿಸಿ ಮಾತನಾಡಿದ ಶ್ರೀ ಅರುಣ ಶಹಾಪೂರರವರು ಕುಟುಂಬಗಳಲ್ಲಿ ಉಳಿತಾಯ ಮನೋಭಾವವನ್ನು ಜಾಗೃತಿಗೊಳಿಸಿ, ಆರ್ಥಿಕ ಕ್ಷೇತ್ರವನ್ನು ಸದೃಢಗೊಳಿಸುವಲ್ಲಿ ಹಾಗೂ ರಾಷ್ಟ್ರದ ಅಭಿವೃದ್ಧಿಯಲ್ಲಿ ಸಹಕಾರಿ ಸಂಸ್ಥೆಗಳ ಪಾತ್ರ ಅಮೂಲ್ಯವಾದುದ್ದು ಎಂದರು. ಈ ಸಂದರ್ಭದಲ್ಲಿ ಸಹಕಾರಿ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ದೇವರಮನಿ, ನಿರ್ದೇಶಕರು ಸೇರಿದಂತೆ ಮತ್ತಿತರು ಉಪಸ್ಥಿತರಿದ್ದರು.

## ದೇಶದ ಅಭಿವೃದ್ಧಿಗಾಗಿ ಮಹತ್ವದ ಮೈಲುಗಲ್ಲು ಸರಕು ಮತ್ತು ಸೇವಾ ತೆರಿಗೆ (ಜಿ.ಎಸ್.ಟಿ) ಜಾರಿಗೆ ಸನ್ನಿಹಿತ



ಲೋಕಸಭೆಯಲ್ಲಿ ಅನುಮೋದನೆಯಾಗಿ ಸುದೀರ್ಘ ಚರ್ಚೆಯ ನಂತರ ರಾಜ್ಯ ಸಭೆಯಲ್ಲಿ ದಿನಾಂಕ : 03/08/2016 ರಂದು ಅನುಮೋದನೆಯಾಗಿರುವ (GST) ಸರಕು ಮತ್ತು ಸೇವಾ ತೆರಿಗೆ ಜಾರಿಗೆ ಸನ್ನಿಹಿತವಾಗಿದೆ.

ದೇಶಾದ್ಯಂತ ಏಕರೋಪ ಪರೋಕ್ಷ ತೆರಿಗೆ ಪದ್ಧತಿಯಾಗಿರುವ ಜಿ.ಎಸ್.ಟಿ ಸರಕು ಸೇವೆಗಳ ಮೇಲೆ ಹೆಚ್ಚುವರಿ ತೆರಿಗೆಯನ್ನು ತೊಡೆದುಹಾಕುವ ಉದ್ದೇಶದೊಂದಿಗೆ ಪ್ರಸ್ತುತ ಜಾರಿಯಲ್ಲಿರುವ ವ್ಯವಸ್ಥೆಯಲ್ಲಿ ಉತ್ಪನ್ನದ ಮೂಲ ಬೆಲೆಯ ಜೊತೆಗೆ ತಯಾರಿಕಾ ಹಂತದಲ್ಲಿ ಕಚ್ಚಾ ವಸ್ತು ಸೇರಿದಂತೆ ಇದಕ್ಕೂ ಮುನ್ನ ಉತ್ಪನ್ನದ ಮೇಲೆ ವಿಧಿಸಲಾಗುವ ತೆರಿಗೆಯನ್ನು ಸೇರಿಸಿ ಮುಂದಿನ ಹಂತದ ತೆರಿಗೆಯನ್ನು ಲೆಕ್ಕಹಾಕಲಾಗುತ್ತದೆ. ಜಿ.ಎಸ್.ಟಿ ಜಾರಿಯಾದರೆ ದ್ವಂದ್ವ ತೆರಿಗೆ ತಪ್ಪಲಿದೆ.

ಎರಡು ಮೂರು ಹಂತಗಳಲ್ಲಿ ತೆರಿಗೆ ಹೇರಿಕೆ ತಪ್ಪುವುದರಿಂದ ಹಲವು ವಸ್ತುಗಳ ಬೆಲೆ ಇಳಿಮುಖವಾಗಲಿದೆ. ತೆರಿಗೆ ವಂಚನೆ ತಡೆಯಲು ನೆರವಾಗಲಿದೆ. ನಮ್ಮ ದೇಶದ ಸಂವಿಧಾನದ 122 ನೇ ತಿದ್ದುಪಡಿಯಾಗಿ ಜಿ.ಎಸ್.ಟಿ ದೇಶದ ಎರಡು ಸದನಗಳಲ್ಲಿ ಅನುಮೋದನೆಯಾಗಿದೆ. ತಿದ್ದುಪಡಿಯ ಎಲ್ಲಾ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ಜಿ.ಎಸ್.ಟಿ ಮಂಡಳಿ ರಚನೆಯಾಗಲಿದೆ. ಹಣಕಾಸು ಸಚಿವರ ಅಧ್ಯಕ್ಷತೆಯಲ್ಲಿ ಜಿ.ಎಸ್.ಟಿ ಮಂಡಳಿ ಸಭೆ ಸೇರಿ ಜಿ.ಎಸ್.ಟಿ ತೆರಿಗೆ ದರ ಎಂಬುದನ್ನು ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡಲಿದೆ. ಈ ಮಂಡಳಿಯಲ್ಲಿ ಕೇಂದ್ರ ಕಂದಾಯ ಇಲಾಖೆಯ ರಾಜ್ಯ ಸಚಿವರ ಜೊತೆಗೆ ರಾಜ್ಯಗಳ ಹಣಕಾಸು ಸಚಿವರು ಸೇರಿ ತೆರಿಗೆ, ತೆರಿಗೆ ವಿನಾಯಿತಿಯ ಇತಿಮಿತಿಗಳನ್ನು ನಿರ್ಧರಿಸಲಾಗುತ್ತದೆ.

ಜಿ.ಎಸ್.ಟಿ ದರಗಳು ರಾಷ್ಟ್ರವ್ಯಾಪಿ ಏಕರೂಪದಲ್ಲಿದ್ದರೂ ಕೇಂದ್ರ ಮತ್ತು ರಾಜ್ಯಗಳಿಗೆ ಕೆಲವು ವಿತ್ತೀಯ ಸ್ವಾಯತ್ತತೆ ಇರುತ್ತದೆ. ಜಿ.ಎಸ್.ಟಿ ಮೂಲ ತೆರಿಗೆ ಜೊತೆಗೆ ಅಗತ್ಯವಿದ್ದಲ್ಲಿ ಹೆಚ್ಚುವರಿ ಸುಂಕ ಪಡೆಯಲು ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ಅವಕಾಶವಿದೆ.



## ಪರಿಶುದ್ಧ ಕುಡಿಯುವ ನೀರಿನ ಘಟಕ

ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ಪಟ್ಟಣದ ಭಾಸ್ಕರಾಚಾರ್ಯ ಸೌಹಾರ್ದ ಸಹಕಾರಿಯ ವತಿಯಿಂದ "ಭಾಸ್ಕರ" ಪರಿಶುದ್ಧ ಕುಡಿಯುವ ನೀರಿನ ಘಟಕಕ್ಕೆ ಆರ್.ಎಸ್.ಎಸ್. ಪ್ರಾಂತ ಸಹ ಶಾರೀರಿಕ ಪ್ರಮುಖರಾದ ಶ್ರೀ ನಾಗೇಶ ರೆಡ್ಡಿರವರಿಂದ ಚಾಲನೆ.

## ಕಲಬುರಗಿಯಲ್ಲಿ ಸಿದ್ಧಿವಿನಾಯಕ ಪತ್ತಿನ ಸೌಹಾರ್ದ ಸಹಕಾರಿಯ ದಶಮಾನೋತ್ಸವ "ಸಿದ್ಧಿ ಸಂಭ್ರಮ"

# ದಶಮಾನೋತ್ಸವ ಕಾರ್ಯಕ್ರಮ ಪ್ರಗತಿಯ ಸಂತಸ, ಅವಲೋಕನ : ಸದಸ್ಯರ ಆಶಯಗಳಿಗೆ ಸ್ಪಂದಿಸಿದ ಸಂತೃಪ್ತಿಯ ಅನಾವರಣ - ಶ್ರೀ ಗುರುನಾಥ ಜಾಂತಿಕರ



**ಕಲಬುರಗಿ :** ಕಲಬುರಗಿ ಜಿಲ್ಲೆಯ ಪ್ರತಿಷ್ಠಿತ ಸಿದ್ಧಿವಿನಾಯಕ ಪತ್ತಿನ ಸೌಹಾರ್ದ ಸಹಕಾರಿಯ ದಶಮಾನೋತ್ಸವ ಕಾರ್ಯಕ್ರಮವು ಕಲಬುರಗಿಯ ಎಸ್.ಎಮ್. ರಂಗಮಂದಿರದಲ್ಲಿ ನಡೆದು ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಸ್ವಾಯತ್ತತೆ ಮತ್ತು ವ್ಯಾವಹಾರಿಕ ಸ್ವಾಯತ್ತತೆಯ ಪರಿಣಾಮವಾಗಿ ಸೌಹಾರ್ದ ಸಹಕಾರಿಗಳ ಬೆಳವಣಿಗೆ ಸಾಧ್ಯ ಎಂಬುವ ದೃಷ್ಟಾಂತವನ್ನು ಸಹಕಾರ ಕ್ಷೇತ್ರಕ್ಕೆ ಸಾರುವ ಕಾರ್ಯಕ್ರಮವಾಗಿ ರೂಪುಗೊಂಡಿದ್ದು ಸಹಕಾರಿಗಳ ಮೆಚ್ಚುಗೆಗೆ ಪಾತ್ರವಾಯಿತು. ಈ ಕಾರ್ಯಕ್ರಮವನ್ನು ಉದ್ಘಾಟಿಸಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಮಾತನಾಡಿ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ಸ್ವಾಯತ್ತತೆ, ಸ್ವಯಂ ಆಡಳಿತ ಮತ್ತು ಸ್ವಯಂ ನಿಯಂತ್ರಣದ ಪರಿಣಾಮವಾಗಿ ಬೆಳವಣಿಗೆಯ ವೇಗ ದಿನೇ ದಿನೇ ಹೆಚ್ಚುತ್ತಲಿದೆ. ಈ ಕ್ಷೇತ್ರದಲ್ಲಿ ಸೌಹಾರ್ದ ಸಹಕಾರಿಗಳು ಸಂಖ್ಯಾತ್ಮಕವಾಗಿ ಬೆಳೆಯುವುದರ ಜೊತೆಗೆ ಗುಣಾತ್ಮಕವಾಗಿ ಬೆಳೆಯಲು ಸಾಧ್ಯವಾಗುತ್ತಿದೆ. ಸಿದ್ಧಿವಿನಾಯಕ ಪತ್ತಿನ ಸೌಹಾರ್ದ ಸಹಕಾರಿಯು ಕಳೆದ ಹತ್ತು ವರ್ಷಗಳಲ್ಲಿ ಸಾಧಿಸಿದ ಪ್ರಗತಿ ಅಭಿನಂದನೀಯ. ಈ ದಶಮಾನೋತ್ಸವ ಕಾರ್ಯಕ್ರಮ ಸಿದ್ಧಿವಿನಾಯಕ ಪತ್ತಿನ ಸೌಹಾರ್ದ ಸಹಕಾರಿಯ ಪ್ರಗತಿಯ ಅವಲೋಕನ ಮತ್ತು ಸಹಕಾರಿಯ ಸದಸ್ಯರುಗಳ ಆಶಯಕ್ಕೆ ಸ್ಪಂದಿಸಿದ ಸಂತೃಪ್ತಿಯ ಅನಾವರಣ ಎಂದು ತಿಳಿಸಿದರು. ಸೌಹಾರ್ದ ಸಹಕಾರಿ ಕ್ಷೇತ್ರ ವಿಶೇಷವಾಗಿ ಯುವಕರನ್ನು ಆಕರ್ಷಿಸಿದೆ. ಹೈದರಬಾದ್-ಕರ್ನಾಟಕ ವಿಶೇಷವಾಗಿ ಕಲಬುರಗಿ, ಬೀದರ್ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಸಹಕಾರ ಕ್ಷೇತ್ರದ ಪ್ರಗತಿ ಅಷ್ಟಾಗಿರಲಿಲ್ಲ. ಆದರೆ, ಸೌಹಾರ್ದ ಸಹಕಾರಿ ಕಾಯ್ದೆ ಬಂದ ನಂತರ ಈ ವಿಭಾಗದಲ್ಲಿ ಸೌಹಾರ್ದ ಸಹಕಾರಿ ಸಂಸ್ಥೆಗಳು ಪ್ರಾರಂಭವಾಗಿರುವುದು ವಿಶೇಷ ಎಂದು ತಿಳಿಸಿದರು. ಸಹಕಾರ ಕ್ಷೇತ್ರದಲ್ಲಿ ನಾಯಕತ್ವದ ಕೊರತೆ ಇದೆ. ಯುವಕರು ಸೌಹಾರ್ದ ಸಹಕಾರಿ ಕ್ಷೇತ್ರದ ಮುಂಚೂಣಿಯಲ್ಲಿ ಬಂದಿದ್ದಾರೆ. ಮುಂಬರುವ ದಿನಗಳಲ್ಲಿ ನಾಯಕತ್ವ ಕೊರತೆ ನೀಗುವ ವಿಶ್ವಾಸವಿದೆ ಎಂದು ತಿಳಿಸಿದರು.

ಸಿದ್ಧಿವಿನಾಯಕ ಸೌಹಾರ್ದ ಸಹಕಾರಿಯ ಆಡಳಿತ ಮಂಡಲಿಯ ಟೀಮ್ ವರ್ಕ್ ಮೆಚ್ಚುವಂತಹದ್ದಾಗಿದೆ. ಎಲ್ಲರೂ ನಿಸ್ವಾರ್ಥದಿಂದ ಸೇವೆ ಸಲ್ಲಿಸುತ್ತಿದ್ದಾರೆ. ಸದಸ್ಯರೂ ಅವರಿಗೆ ಬೆಂಬಲಿಸುತ್ತಿದ್ದಾರೆ. ಎಲ್ಲರೂ ಅಭಿನಂದನಾರ್ಹರು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕರಾದ ಶ್ರೀ ದತ್ತಾತ್ರೇಯ ಪಾಟೀಲ್ ರೇವೂರರವರು ಹತ್ತು ವರ್ಷಗಳಲ್ಲಿ ಸಿದ್ಧಿವಿನಾಯಕ ಪತ್ತಿನ ಸೌಹಾರ್ದ ಸಹಕಾರಿ ಸಾಧನೆ ಶ್ಲಾಘನೀಯ. ಅತ್ಯಂತ ಉತ್ಸಾಹದಿಂದ ಈ ಸಹಕಾರಿಯ ಆಡಳಿತ ಮಂಡಲಿಯವರು ಕಾರ್ಯನಿರ್ವಹಿಸುತ್ತಿರುವುದು ಅಭಿನಂದನೀಯ. ಇಂತಹ ಹತ್ತಾರು ಸೌಹಾರ್ದ ಸಹಕಾರಿ ಸಂಸ್ಥೆಗಳು ಈ ಭಾಗದಲ್ಲಿ ಬೆಳೆಯಲಿ ಸೌಹಾರ್ದ ಸಹಕಾರಿ ಕಾಯ್ದೆಗೆ ಅಗತ್ಯವಾಗುವ ಅವಶ್ಯಕ ತಿದ್ದುಪಡಿಗಳ ಬಗ್ಗೆ ಗಮನಹರಿಸಿ ಸರಕಾರದ ಹಂತದಲ್ಲಿ ಅವಶ್ಯಕ ಕ್ರಮವನ್ನು ತೆಗೆದುಕೊಳ್ಳಲು ಸಹಕರಿಸುತ್ತೇನೆ ಎಂದು ತಿಳಿಸಿದರು.

**ಸಹಕಾರಿಯ ವೆಬ್‌ಸೈಟ್ ಬಿಡುಗಡೆ :** ಸಹಕಾರಿಯ ನೂತನ ವೆಬ್‌ಸೈಟ್‌ನ್ನು ಬಿಡುಗಡೆ ಮಾಡಿ ಮಾತನಾಡಿದ ಶ್ರೀ ವಿಶ್ವನಾಥ ಹಿರೇಮಠವರು ಕೇಂದ್ರ ಸರಕಾರದ ತೆರಿಗೆ ಹಾಗೂ ವಿವಿಧ ಕಾಯ್ದೆಗಳ ಮೂಲಕ ಸಹಕಾರ ಕ್ಷೇತ್ರಕ್ಕೆ ಹಿನ್ನೆಡೆಯಾಗುವ ಕ್ರಮಗಳನ್ನು ಅನುಸರಿಸುತ್ತಿದೆ. ಈ ಬಗ್ಗೆ ಸಂಘಟಿತ ಹೋರಾಟ ಅಗತ್ಯ ಎಂದು ತಿಳಿಸಿದರು.

**ಸಹಕಾರಿಯ ಮಾಹಿತಿ ಪತ್ರ ಬಿಡುಗಡೆ :** ಸಿದ್ಧಿವಿನಾಯಕ ಪತ್ತಿನ ಸೌಹಾರ್ದ ಸಹಕಾರಿಯ ಸಮಗ್ರ ಕಾರ್ಯಚಟುವಟಿಕೆಗಳ ಮಾಹಿತಿ ಪತ್ರವನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಮಂಜುಳಾ ಪಾಟೀಲ್‌ರವರು ಬಿಡುಗಡೆ ಮಾಡಿದರು. ಪ್ರಾರಂಭದಲ್ಲಿ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರ ಪುತ್ರ ಶ್ರೀ ರಾಕೇಶ್ ಅವರ ಅಕಾಲಿಕ ನಿಧನ ಹಾಗೂ ಹುತಾತ್ಮರಾದ ದೇಶದ ಯೋಧರಾದ ಶ್ರೀ ಬಸವರಾಜ್ ಪಾಟೀಲ್ ಹಾಗೂ ಶ್ರೀ ಹಸನ್ ಸಾಬ್ ಖುದಾವಂದ್ ಇವರುಗಳ ಆತ್ಮಕ್ಕೆ ಶಾಂತಿಕೋರಿ ಎರಡು ನಿಮಿಷಗಳ ಮೌನವನ್ನು ಆಚರಿಸಲಾಯಿತು. ನಂತರ ಶ್ರೀಮತಿ ಅಪರ್ಣಾ ಮತ್ತು ತಂಡದವರಿಂದ ಪ್ರಾರ್ಥನೆ, ಸಹಕಾರ ಗೀತೆ ಹಾಗೂ ನಾಡಗೀತೆಗಳಾದ ನಂತರ ಸಹಕಾರಿಯ ಅಧ್ಯಕ್ಷರಾದ ಶ್ರೀ ಸಂಜೀವ ಮಹಾಜನರವರು ಸ್ವಾಗತ ಹಾಗೂ ಪ್ರಾಸ್ತಾವಿಕ ಮಾತುಗಳನ್ನು ಹೇಳಿ ದಶಮಾನೋತ್ಸವ ಕಾರ್ಯಕ್ರಮಗಳ ವರದಿಯನ್ನು ಪ್ರಸ್ತುತ ಪಡಿಸಿದರು.

ಕಾರ್ಯಕ್ರಮದಲ್ಲಿ ಉತ್ತಮ ಸಹಕಾರಿಗಳನ್ನು, ಸಹಕಾರಿಯ ಉತ್ತಮ ಗ್ರಾಹಕರನ್ನು, ಸಹಕಾರಿಯ ಹಿತೈಷಿಗಳನ್ನು ಸಹಕಾರಿಯ ಉತ್ತಮ ಸಿಬ್ಬಂದಿಯವರನ್ನು ಸನ್ಮಾನಿಸಲಾಯಿತು. ಪ್ರಾರಂಭದಲ್ಲಿ ಶ್ರೀ ಬಿ.ವಿ.ರವೀಂದ್ರನಾಥ ಇವರು ಕೇಂದ್ರದ ಉದ್ದೇಶಿತ ನೇರ ತೆರಿಗೆಯಿಂದ ಸಹಕಾರ ಕ್ಷೇತ್ರದ ಮೇಲೆ ಆಗುವ ಪರಿಣಾಮಗಳ ಬಗ್ಗೆ ಉಪನ್ಯಾಸ ನೀಡಿದರು. ನಂತರದಲ್ಲಿ ಶಿವಮೊಗ್ಗದ ಸನ್ಮತಿ ಪ್ರತಿಷ್ಠಾನದ ಶ್ರೀ ಬಿ.ಎ.ಮಹದೇವಪ್ಪರವರು ಸಹಕಾರ ಕ್ಷೇತ್ರದಲ್ಲಿ ಕಾರ್ಪೋರೇಟ್ ಆಡಳಿತ ಪದ್ಧತಿಯ ಅನುಷ್ಠಾನದ ಅಗತ್ಯತೆಯ ಕುರಿತು ಉಪನ್ಯಾಸ ನೀಡಿದರು.

ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ವೈ.ಟಿ.ಪಾಟೀಲ್, ಶ್ರೀ ಎಲ್.ಎಸ್.ಆನಂದ, ಶ್ರೀ ಕೆ.ಸಣ್ಣಸೂಗಪ್ಪ, ಶ್ರೀಮತಿ ಮಂಜುಳಾ ಪಾಟೀಲ, ಸಹಕಾರಿಗಳ ಉಪನಿಬಂಧಕರಾದ ಶ್ರೀ ಫೈರೋಜ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ನಿರ್ದೇಶಕರಾದ ಶ್ರೀ ಮಲ್ಲಿನಾಥ ಪಾಟೀಲ್ ಸೊಂತ, ಕೆಚ್.ಕೆ.ಸಿ.ಸಿ.ಐ ಅಧ್ಯಕ್ಷರಾದ ಶ್ರೀ ಸೋಮಶೇಖರ ಟೆಂಗಳಿ, ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, 700ಕ್ಕೂ ಅಧಿಕ ಸಂಖ್ಯೆಯಲ್ಲಿ ಸದಸ್ಯರು ಹಾಗೂ ಸಹಕಾರಿಗಳು ಭಾಗವಹಿಸಿದ್ದರು. ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎಸ್.ಎಸ್.ಪಾಟೀಲ್‌ರವರು ವಂದನಾರ್ಪಣೆ ಮಾಡಿದರು.

## ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಆಯ್ಕೆ

### ಶ್ರೀ ಶಿವಲೀಲೆ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಸಂಡೂರು



ಶ್ರೀ ಬಿ.ಜಿ. ಪ್ರಭುಗೌಡ
ಅಧ್ಯಕ್ಷರು



ಶ್ರೀಮತಿ ಎಸ್. ಗೀತಾ ಸಿರಿಗೇರಿ
ಉಪಾಧ್ಯಕ್ಷರು

### ಅಭಿವೃದ್ಧಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹಟ್ಟಿ



ಶ್ರೀ ಅಹ್ಮದ್ ಬಾಬಾ
ಅಧ್ಯಕ್ಷರು



ಶ್ರೀ ನಾಸೀರ ಹುಸೇನ್
ಉಪಾಧ್ಯಕ್ಷರು

### ಶ್ರೀ ಭುವನೇಂದ್ರ ಸ್ವಾಮೀಜಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮಂಗಳೂರು



ಶ್ರೀ ಸತೀಶ್ ನಾಯಕ್
ಅಧ್ಯಕ್ಷರು



ಶ್ರೀ ಎಂ ಜಗನ್ನಾಥ್ ಕಾಮತ್
ಉಪಾಧ್ಯಕ್ಷರು

### ಶ್ರೀ ವಿಶ್ವಗುರು ಮಲ್ಟಿಪರ್‌ಪಸ್ ಸೌಹಾರ್ದ ಸಹಕಾರಿ ನಿ., ಮಲ್ಲಾಪೂರ ಪಿ.ಜಿ ಘಟಪ್ರಭಾ



ಶ್ರೀ ಅರವಿಂದ ಗು. ಬಡಕುಂದ್ರಿ
ಅಧ್ಯಕ್ಷರು



ಶ್ರೀ ಮನೋಹರ ಮಲ್ಲಪ್ಪ ಕಾಡದವರ
ಉಪಾಧ್ಯಕ್ಷರು

### ದಿ ಮುಸ್ಲಿಂ ಸೌಹಾರ್ದ ಸಹಕಾರಿ ನಿ., ಶಹಪೂರ



ಶ್ರೀ ನಸೀರೊದ್ದೀನ ಎಸ್. ಲಲ್ಲೋಟಿ
ಅಧ್ಯಕ್ಷರು



ಶ್ರೀ ಅವದ್ ಬಿನ್ ಅಮರ್ ಚಾವೂಶ
ಉಪಾಧ್ಯಕ್ಷರು



## ಸಹಾಯ ಧನ

**ಬೆಳಗಾವಿ :** ಶ್ರೀ ಸದ್ಗುರು ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ನಿ., ದಾದಬಾನಹಟ್ಟಿ (ಯಮಕನಮರಡಿ) ಸಹಕಾರಿಯ ವತಿಯಿಂದ ಯಮಕನಮರಡಿ ಗ್ರಾಮದ ಹೆಣ್ಣುಮಕ್ಕಳ ಸರಕಾರಿ ಶಾಲಾ ಗೋಡೆ ಕುಸಿತದಿಂದ ಗಾಯಗೊಂಡ ಮೂವರು ವಿದ್ಯಾರ್ಥಿನಿಯರಿಗೆ ತಲಾ 10 ಸಾವಿರ ರೂಪಾಯಿಗಳ ಸಹಾಯ ಧನ ವಿತರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರಿ ಮಲ್ಲಪ್ಪ ಗುರುಸಿದ್ಧಪ್ಪ ಸಾರವಾಡಿ, ಉಪಾಧ್ಯಕ್ಷರಾದ ಶ್ರೀ ಮಲ್ಲಪ್ಪ ಗಿರಿಮಲ್ಲಪ್ಪ ಕುಂಬಾರ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಸಿಬ್ಬಂದಿಗಳಿಗೆ ತರಬೇತಿ




**ದಕ್ಷಿಣ ಕನ್ನಡ (ಮಂಗಳೂರು) :** ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ಸಿಬ್ಬಂದಿಗಳಿಗೆ ತರಬೇತಿ ಕಾರ್ಯಾಗಾರವು ದಿನಾಂಕ 23.07.2016ರಂದು ಸಹಕಾರಿಯ ನೂತನ ತರಬೇತು ಕೊಠಡಿಯಲ್ಲಿ ನಡೆಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಯು.ಕೆ. ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಯಲ್ಲಾಪುರ ಸಹಕಾರಿಯ ಅಧ್ಯಕ್ಷರಾದ ಶ್ರೀ ಪ್ರಮೋದ್ ಹೆಗ್ಡೆ ನೆರವೇರಿಸಿದರು. ವೇದಿಕೆಯಲ್ಲಿ ಸಹಕಾರಿಯ ಪ್ರಧಾನ ವ್ಯವಸ್ಥಾಪಕರಾದ ಶ್ರೀ ವಸಂತ್ ಎ. ಉಪಸ್ಥಿತರಿದ್ದರು. ರಾಷ್ಟ್ರ ಪ್ರಶಸ್ತಿ ಪುರಸ್ಕೃತ ತರಬೇತುದಾರರು ಶ್ರೀ ಸಿದ್ದು ಯಾಪಲಪರ್ವಿರವರು "Capacity Building And Administrative Skill" ವಿಷಯದ ಬಗ್ಗೆ ತರಬೇತಿಯನ್ನು ನೀಡಿದರು.

## ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್‌ನ ಕೋಲಾರ ಶಾಖೆಯ ಗ್ರಾಹಕರ ಸಭೆ

**ಕೋಲಾರ :** ದಿನಾಂಕ : 11.06.2016ರಂದು ಕೋಲಾರ ಶಾಖೆಯ ಗ್ರಾಹಕರ ಸಭೆಯನ್ನು ಸಹಕಾರಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಕೋಲಾರ ನಗರದ ಕಣ್ಣಿನ ತಜ್ಞರಾದ ಡಾ॥ ಶಂಕರ ನಾಯಕ್, ಡಿವೈಎಸ್‌ಪಿಯಾದ ಶ್ರೀ ಪಿ.ಶಿವಕುಮಾರ್ ಹಾಗೂ ಕೋಲಾರ ಶಾಖೆಯ ಶಾಖಾ ಸಮಿತಿಯ ಅಧ್ಯಕ್ಷರಾದ ಶ್ರೀ ಸಿ.ವಿ.ರಾಧಕೃಷ್ಣರವರು ಆಗಮಿಸಿದ್ದರು. ಗ್ರಾಹಕರ ಸಭೆಯನ್ನು ಕೋಲಾರ ಶಾಖೆಯ ಸದಸ್ಯರಿಗೆ



ಗ್ರಾಹಕರ ಸಭೆಯನ್ನು ಏರ್ಪಡಿಸಿ, ಗ್ರಾಹಕರಿಗೆ ಅಭಿನಂದನೆಯನ್ನು ಸಲ್ಲಿಸಲಾಯಿತು.

## ಮಂಗಳೂರಿನ ಬಜ್ಪೆಯಲ್ಲಿ ಸೈಂಟ್ ಮಿಲಾಗ್ರಿಸ್ ಸಹಕಾರಿಯ 41ನೇ ಶಾಖೆಯ ಉದ್ಘಾಟನೆ



**ಮಂಗಳೂರು :** ಸೈಂಟ್ ಮಿಲಾಗ್ರಿಸ್ ಕ್ರೆಡಿಟ್ ಸೌಹಾರ್ದ ಕೋ–ಆಪರೇಟಿವ್ ಲಿ., ಕಾರವಾರ ಸಹಕಾರಿಯ ನೂತನ 41ನೇ ಶಾಖೆಯನ್ನು ದಿನಾಂಕ 26.06.2016ರಂದು ಬಜ್ಪೆಯಲ್ಲು ಹೊಸಾನ್ನ ಕಾಂಪ್ಲೆಕ್ಸ್, 1ನೇ ಮಹಡಿ, ಸೈಂಟ್ ಜೋಸೆಫ್ ಚರ್ಚ್ ಆವರಣದಲ್ಲಿ ವಂದನೀಯ ಫಾ। ಲಿಯೋ ಲೋಬೊರವರ ಆಶೀರ್ವಚನ ಹಾಗೂ ಮಂಗಳೂರಿನ ವಿಧಾನಸಭಾ ಸದಸ್ಯರಾದ ಶ್ರೀ ಜೆ.ಆರ್.ಲೋಬೊ ಅಮೃತ ಹಸ್ತದಿಂದ ಉದ್ಘಾಟನೆಯು ನೆರವೇರಿತು.

## ಶ್ರೀ ಖಾಜಾ ಬಾಪುಸಾಹೇಬ ಸೌಹಾರ್ದ ಸಹಕಾರಿ ನಿ., ಅತಾಲಟ್ಟಿ ಸಹಕಾರಿಯ ಉದ್ಘಾಟನೆ.




## ಉದ್ಘಾಟನಾ ಕಾರ್ಯಕ್ರಮ



ಜೈ ಶ್ರೀ ಅಂಬೆ ದುರ್ಗಾಮಾತಾ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಸದಾಶಿವಗಡ ಸಹಕಾರಿಯ ಪ್ರಧಾನ ಕಛೇರಿಯ ಉದ್ಘಾಟನೆಯು ಶ್ರೀ ಆರ್. ಆರ್.ರಾಯ್ಕರ್ ಮತ್ತು ಶ್ರೀ ಪುತ್ತು ದತ್ತಾ ಕಲ್ಗುಟಕರ್ ಇವರ ಅಮೃತ ಹಸ್ತದಿಂದ ಜರುಗಿತು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರು, ನಿರ್ದೇಶಕರು, ವ್ಯವಸ್ಥಾಪಕ ನಿರ್ದೇಶಕರು, ಮುಖ್ಯ ಕಾರ್ಯನಿರ್ವಾಹಕರು, ಸದಸ್ಯರು, ಸಿಬ್ಬಂದಿಯವರು ಹಾಗೂ ಊರಿನ ಗಣ್ಯ ವ್ಯಕ್ತಿಗಳು ಉಪಸ್ಥಿತರಿದ್ದರು.

## ಉದ್ಘಾಟನಾ ಕಾರ್ಯಕ್ರಮ



ದಾವಣಗೆರೆಯ ಜಿಎಂ ಸೌಹಾರ್ದ ಪತ್ತಿನ ಸಹಕಾರಿಯ 4ನೇ ಶಾಖೆಯನ್ನು ದಿ : 01.07.2016ರಂದು ಚಿತ್ರದುರ್ಗ ನಗರದ ವಿ.ಪಿ.ಬಡಾವಣೆಯಲ್ಲಿ ಭಾರತ ಸರ್ಕಾರದ ಬೃಹತ್ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ರಾಜ್ಯ ಸಚಿವರಾಗಿದ್ದ ಸಂಸದರಾದ ಮಾನ್ಯ ಶ್ರೀ ಜಿ.ಎಂ.ಸಿದ್ದೇಶ್ವರವರಿಂದ ಉದ್ಘಾಟನೆ. ಈ ಸಂದರ್ಭದಲ್ಲಿ ಚಿತ್ರದುರ್ಗ ಶಾಸಕರಾದ ಮಾನ್ಯ ಶ್ರೀ ಜಿ.ಹೆಚ್.ತಿಪ್ಪಾರೆಡ್ಡಿಯವರು, ಜಿಲ್ಲಾ ಪಂಚಾಯತ್ ಅಧ್ಯಕ್ಷರು, ಸಹಕಾರಿ ಧುರೀಣರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ಶ್ರೀ ಗುರುನರಸಿಂಹ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 6ನೇ ವಾರ್ಷಿಕ ಸಾಮಾನ್ಯ ಸಭೆ

ಶ್ರೀ ಗುರುನರಸಿಂಹ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಸಾಲಿಗ್ರಾಮ ಸಹಕಾರಿಯ 6ನೇ ವಾರ್ಷಿಕ ಸಾಮಾನ್ಯ ಸಭೆಯು ಸಹಕಾರಿಯ ಆಡಳಿತ ಕಛೇರಿಯಲ್ಲಿ ಅಧ್ಯಕ್ಷರಾದ ಶ್ರೀ ಆನಂದ ಸಿ. ಕುಂದರ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು.

ಸಹಕಾರಿಯು ಕಾರ್ಯಾರಂಭಿಸಿದ ಕೇವಲ ನಾಲ್ಕೂವರೆ ವರ್ಷದ ಅವಧಿಯಲ್ಲಿ 6 ಕೋಟಿಗೂ ಮೀರಿ ಠೇವಣಿ ಸಂಗ್ರಹಿಸಿ, 5 ಕೋಟಿಗೂ ಮಿಗಿಲಾದ ವಿವಿಧ ಬಗೆಯ ಸಾಲವನ್ನು ವಿಸ್ತರಿಸಿ, ಕಳೆದ ಸಹಕಾರಿ ವರ್ಷಾಂತ್ಯಕ್ಕೆ ಶೇ.99.82ರಷ್ಟರ ವಸೂಲಿಯ ದಾಖಲೆ ನಿರ್ಮಿಸಿ, ರೂ. 9.00 ಲಕ್ಷಕ್ಕೂ ಮೀರಿ ಲಾಭ ಗಳಿಸಿದೆ. ಸಹಕಾರಿಯು ಗಳಿಸಿದ ಲಾಭಾಂಶದಲ್ಲಿ 'ಅ' ಮತ್ತು 'ಬ' ವರ್ಗದ ಸದಸ್ಯರಿಗೆ ಶೇ.25ರ ಡಿವಿಡೆಂಡ್ ಘೋಷಿಸಿದರು. ಅಧ್ಯಕ್ಷರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ



ಸಹಕಾರಿಯ ಕ್ಷಿಪ್ರ ಬೆಳವಣಿಗೆಗೆ ಸಹಕರಿಸಿದ ಎಲ್ಲಾ ಸದಸ್ಯರು ಮತ್ತು ಗ್ರಾಹಕರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ ಒಂದೇ ಸೂರಿನಡಿ ವಿಸ್ತರಿಸುತ್ತಿರುವ ವೈವಿಧ್ಯಮಯ ಸೇವೆಯ ಸದುಪಯೋಗ ಪಡಕೊಳ್ಳಲು ಕರೆ ನೀಡಿದರು.

## ನಿರ್ಮಾಣ್ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಸಾಮಾನ್ಯ ಸಭೆ



ನಿರ್ಮಾಣ್ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಉಡುಪಿ ಸಹಕಾರಿಯ 5ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 17.07.2016ರಂದು ಹೋಟೇಲ್ ನೈವೇದ್ಯದ 'ಅನುಗ್ರಹ ಸಭಾಂಗಣ'ದಲ್ಲಿ ಜರುಗಿತು. ಅಧ್ಯಕ್ಷತೆ ವಹಿಸಿ, ಮಾತನಾಡಿದ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ. ಬಿ.ಮಧುಸೂದನ ನಾಯಕ್‌ರವರು ಸಹಕಾರಿಯು ರೂ. 5 ಕೋಟಿ 25 ಲಕ್ಷಕ್ಕಿಂತಲೂ ಅಧಿಕ ವ್ಯವಹಾರ ನಡೆಸಿ, ರೂ. 18.32 ಲಕ್ಷ ಲಾಭ ಗಳಿಸಿದೆ ಎಂದು ತಿಳಿಸಿದರು. ಸಹಕಾರಿಯ ಸದಸ್ಯರಿಗೆ ಶೇ. 15 ಲಾಭಾಂಶವನ್ನು ಘೋಷಿಸಿದರು.

## ಮಯೂರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್‌ನ ಸಾಮಾನ್ಯ ಸಭೆ

ಸಹಕಾರಿಯ ಸದಸ್ಯರು ಸಹಕಾರಿಯ ಸೇವೆಗಳನ್ನು ಬಳಸಿಕೊಳ್ಳುವುದರ ಜೊತೆಯಲ್ಲಿ ಹೆಚ್ಚಿನ ಉತ್ತಮ ಸದಸ್ಯರನ್ನು ಪರಿಚಯಿಸಿಕೊಡಬೇಕು ಎಂದು ದಿನಾಂಕ 25.06.2016ರಂದು ಸಾಗರದಲ್ಲಿ ನಡೆದ ಮಯೂರ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಸಾಗರ ಸಹಕಾರಿಯ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಮ್.ಎಸ್.ವೆಂಕಟೇಶ್‌ರವರು ಕರೆ ನೀಡಿದರು. ಸಹಕಾರಿಯು 2596 ಸದಸ್ಯರನ್ನು ಹೊಂದಿದೆ. ರೂ. 2.51 ಕೋಟಿ ಶೇರು ಬಂಡವಾಳ, 4.18 ಕೋಟಿಗಳಷ್ಟು ನಿಧಿಗಳನ್ನು, ಠೇವಣಿಗಳು



ರೂ. 13.87 ಕೋಟಿ ಮೀರಿದ್ದು, ಒಟ್ಟು ದುಡಿಯುವ ಬಂಡವಾಳ ರೂ. 20.56 ಕೋಟಿ ಮೀರಿರುತ್ತದೆ. ರೂ. 14.61 ಕೋಟಿಯಷ್ಟು ವಿವಿಧ ಸಾಲಗಳನ್ನು ನೀಡಿದೆ. ಪ್ರಸಕ್ತ ಸಾಲಿನಲ್ಲಿ ರೂ. 74.96 ಲಕ್ಷ ನಿವ್ವಳ ಲಾಭ ಗಳಿಸಿರುತ್ತದೆ. ಹಾಗಾಗಿ ಈ ವರ್ಷ ಶೇ. 14 ರಷ್ಟು ಲಾಭಾಂಶವನ್ನು ವಿತರಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು.




## ಬಲಿಜ ಸೌಹಾರ್ದ ಪತ್ತಿನ ಸಹಕಾರಿಯ ಸಾಮಾನ್ಯ ಸಭೆ

ಬಲಿಜ ಸೌಹಾರ್ದ ಪತ್ತಿನ ಸಹಕಾರಿ ನಿ., ಶಿವಮೊಗ್ಗ ಸಹಕಾರಿಯ 4ನೇ ವರ್ಷದ ಸಾಮಾನ್ಯ ಸಭೆಯನ್ನು ದಿನಾಂಕ 17.07.2016ರಂದು ಅಂಬೇಡ್ಕರ್ ಭವನದಲ್ಲಿ ನಡೆಸಲಾಯಿತು. ಈ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿ ಹೆಚ್ಚಿನ ಅಂಕ ಪಡೆದ ಶೇರುದಾರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರವನ್ನು ನೀಡಿ, ಗೌರವಿಸಲಾಯಿತು.




## ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿಯ 7ನೇ ಸಾಮಾನ್ಯ ಸಭೆ

ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿ., ಯಲಹಂಕ ಉಪನಗರ ಸಹಕಾರಿಯ 7ನೇ ಸಾಮಾನ್ಯ ಸಭೆಯನ್ನು ದಿನಾಂಕ 17.07.2016ರಂದು ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಸಭಾಂಗಣ, ಯಲಹಂಕ ಉಪನಗರ ಇಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಮುನಿರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಹಕಾರಿಯು 2015-16ನೇ ಸಾಲಿನಲ್ಲಿ ರೂ.2,03,04,377/-ಗಳ ನಿವ್ವಳ ಲಾಭ ಗಳಿಸಿದ್ದು, ಶೇ.12ರಂತೆ ಡಿವಿಡೆಂಡ್‌ನ್ನು ವಿತರಿಸಲು ತೀರ್ಮಾನಿಸಲಾಯಿತು.

## ಶ್ರೀ ಮಹಾಲಕ್ಷ್ಮೀ ಸೌಹಾರ್ದ ಸಹಕಾರಿಯ ಸಾಮಾನ್ಯ ಸಭೆ



ಕಲ್ಲೋಳಿ ಶ್ರೀ ಮಹಾಲಕ್ಷ್ಮೀ ಸೌಹಾರ್ದ ಸಹಕಾರಿಯ ಸಾಮಾನ್ಯ ಸಭೆಯು ಸಹಕಾರಿಯ ಅಧ್ಯಕ್ಷರಾದ ಶ್ರೀ ಈರಣ್ಣ ಕಡಾಡಿರವರ ಅಧ್ಯಕ್ಷತೆಯಲ್ಲಿ ಜರುಗಿತು. ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಸಹಕಾರಿಯು ರೂ.20 ಲಕ್ಷ ನಿವ್ವಳ ಲಾಭ ಗಳಿಸಿದ್ದು, ಶೇ.17ರಷ್ಟು ಲಾಭಾಂಶ ವಿತರಿಸಲಾಗುವುದು. ಸಹಕಾರಿಯು 1096 ಸದಸ್ಯರು, 185 ಸಹ ಸದಸ್ಯರುಗಳನ್ನು ಹೊಂದಿದ್ದು, ರೂ.10.63 ಲಕ್ಷ ಶೇರು ಬಂಡವಾಳ, ರೂ.5.31 ಕೋಟಿ ಠೇವುಗಳು, ರೂ.5.66 ಕೋಟಿ ಸಾಲಗಳನ್ನು ವಿತರಿಸಲಾಗಿದೆ ಎಂದು ತಿಳಿಸಿದರು.

## ಸ್ವಾಭಿಮಾನಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್‌ನ 7ನೇಯ ವಾರ್ಷಿಕ ಸಾಮಾನ್ಯ ಸಭೆ

**ಬೆಂಗಳೂರು :** ಸ್ವಾಭಿಮಾನಿ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಬೆಂಗಳೂರು ಸಹಕಾರಿಯ ಏಳನೇಯ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 24.07.2016ರಂದು ಬೆಂಗಳೂರಿನ ವಿ.ವಿ.ಪುರಂನ ಬಿ.ಅರಸೋಜಿರಾವ್ ಕಲ್ಯಾಣ ಮಂಟಪದಲ್ಲಿ ನಡೆಯಿತು.

ಈ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿ/ ಪಿ.ಯು.ಸಿ. ಪರೀಕ್ಷೆಗಳಲ್ಲಿ ಉತ್ತಮ ಅಂಕಗಳಿಸಿದ ಸದಸ್ಯರ ಪ್ರತಿಭಾವಂತ ಮಕ್ಕಳಿಗೆ "ಸ್ವಾಭಿಮಾನಿ ಪ್ರತಿಭಾ ಪುರಸ್ಕಾರ" ಗಳನ್ನು ನೀಡಲಾಯಿತು. ಶ್ರೀ ಜಿ.ವಿ.ಬಲರಾಮ್, M.D., KRED Ltd., & Chairman, KSPDC Ltd., ಇವರು ಮುಖ್ಯ ಅತಿಥಿಯಾಗಿ ಆಗಮಿಸಿದ್ದರು.

ಸಹಕಾರಿಯು ಕೇವಲ ಆರು ವರ್ಷಗಳಲ್ಲಿ ರೂ.50 ಕೋಟಿಗೂ ಮೀರಿದ ದುಡಿಯುವ ಬಂಡವಾಳದೊಂದಿಗೆ, ರೂ.75 ಕೋಟಿ 42 ಲಕ್ಷ ವಹಿವಾಟನ್ನು ದಾಖಲಿಸಿರುತ್ತದೆ. ಇಷ್ಟೊಂದು ದೊಡ್ಡ ಮಟ್ಟದ ಬೆಳವಣಿಗೆ ಸೌಹಾರ್ದ ಸಹಕಾರಿಗಳ ಇತಿಹಾಸದಲ್ಲಿ ಮೆಚ್ಚುವಂಥ



ಸಾಧನೆ ಎಂದರೆ ಅತಿಶಯೋಕ್ತಿವಲ್ಲವೆಂದೇ ಹೇಳಬಹುದೆಂದು ಹಾಗೂ ಸಹಕಾರಿಯು ಸರ್ವತೋಮುಖವಾಗಿ ಬೆಳೆಯುತ್ತಿದೆ ಎಂದು ತಿಳಿಸಲು ಆಡಳಿತ ಮಂಡಲಿಯು ಹೆಮ್ಮೆ ಪಡುತ್ತಿದೆಯೆಂದು ಮತ್ತು ಪ್ರಸಕ್ತ ವರ್ಷದಲ್ಲಿ ಶೇ.20ರಂತೆ ಡಿವಿಡೆಂಡ್ ನೀಡಲು ತೀರ್ಮಾನಿಸಲಾಯಿತು ಎಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ ವಿ ಸದಾನಂದ ರೆಡ್ಡಿಯವರು ತಿಳಿಸಿದರು.

## ಶ್ರೀ ಶಾರದಾ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ 11ನೇ ಸಾಮಾನ್ಯ ಸಭೆ



**ಶಿವಮೊಗ್ಗ :** ಶ್ರೀ ಶಾರದಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ಸಹಕಾರಿಯ 11ನೇ ಸಾಮಾನ್ಯ ಸಭೆಯನ್ನು "ಹವ್ಯಕ ಭವನ", ಸಾಗರ ರಸ್ತೆ, ಶಿವಮೊಗ್ಗದಲ್ಲಿ ದಿನಾಂಕ 24.07.2016ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಶಿವಶಂಕರ ಹೆಚ್ ಎಸ್ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಹಕಾರಿಯು 2015-16ನೇ ಸಾಲಿನಲ್ಲಿ ಒಟ್ಟು ರೂ.78,28,641/-ಗಳನ್ನು ಲಾಭ ಗಳಿಸಿ, ಆದಾಯ ತೆರಿಗೆ ರೂ.9,01,627/-ಗಳನ್ನು ಪಾವತಿಸಿ, ನಿವ್ವಳ ಲಾಭ ರೂ.69,27,014/-ಗಳನ್ನು ಗಳಿಸಿರುತ್ತದೆ.

ಎಲ್ಲಾ ನಿಧಿಗಳಿಗೆ ಉಪವಿಧಿಯ ಪ್ರಕಾರ ಹಂಚಿಕೆಯಾದ ನಂತರ ಸದಸ್ಯರಿಗೆ ಶೇ.15ರಂತೆ ಲಾಭಾಂಶವನ್ನು ಹಂಚಲಾಗಿದೆ. ನೌಕರರಿಗೂ ಬೋನಸ್ (2 ತಿಂಗಳ ವೇತನ) ಘೋಷಿಸಲಾಗಿದೆ ಎಂದು ತಿಳಿಸಿದರು.

## ನಿಮ್ಮ ಪ್ರಶ್ನೆ



## ನಮ್ಮ ಉತ್ತರ

– ಶ್ರೀಕಾಂತ ಬರುವೆ
ಸಹ ಪ್ರಧಾನ ವ್ಯವಸ್ಥಾಪಕರು,
ಕ.ರಾ.ಸೌ.ಸಂ.ಸ.ನಿ.,

ನಿಮ್ಮ ಪ್ರಶ್ನೆ – ನಮ್ಮ ಉತ್ತರ ಈ ಅಂಕಣವನ್ನು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತದೆ. ಸೌಹಾರ್ದ ಸಹಕಾರಿಗಳು ತಮ್ಮ ದಿನನಿತ್ಯದ ಕಾರ್ಯಾಚರಣೆಯಲ್ಲಿ ಎದುರಿಸುವ ಸಮಸ್ಯೆಗಳ ಪರಿಹಾರಕ್ಕಾಗಿ ಅವುಗಳನ್ನು ಪ್ರಶ್ನೆಗಳ ರೂಪದಲ್ಲಿ ಸಂಯುಕ್ತ ಸಹಕಾರಿಗೆ ಲಿಖಿತವಾಗಿ ಕಳುಹಿಸಲು ಕೋರಿದೆ. ನಿಮ್ಮ ಪ್ರಶ್ನೆಗೆ ಸಂಯುಕ್ತ ಸಹಕಾರಿಯು ನೀಡಿದ ಉತ್ತರ ಬೇರೆ ಸೌಹಾರ್ದ ಸಹಕಾರಿಗಳಿಗೂ ಮಾರ್ಗದರ್ಶನವಾಗುತ್ತದೆ – ಸಂಪಾದಕರು

**1. ವಾರ್ಷಿಕ ಮಹಾಸಭೆಗೆ ಕೋರಂ ಭರ್ತಿಯಾಗಲು ಕನಿಷ್ಠ ಎಷ್ಟು ಸದಸ್ಯರು ಹಾಜರಾಗಲೇಬೇಕು?**

**ಉತ್ತರ** : ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 30 (4) ರನ್ವಯ ವಾರ್ಷಿಕ ಸಾಮಾನ್ಯ ಸಭೆಗೆ ಕೋರಂ ಮತದಾನಕ್ಕೆ ಹಕ್ಕುಳ್ಳ ಸದಸ್ಯರ ಶೇ.10 ಅಥವಾ 1000 ಇವೆರಡರಲ್ಲಿ ಯಾವುದು ಕಡಿಮೆಯೊ ಅದು ಕೋರಂ ಆಗಿರುತ್ತದೆ.

**2. ಅರ್ಹ ಮತದಾರರ/ ಸದಸ್ಯರ ಯಾದಿಗಾಗಿ ಕನಿಷ್ಠ ಸೇವೆಯು ಸಹಕಾರಿಯ ಬೈಲಾದಲ್ಲಿ ತಿದ್ದುಪಡಿ ಮಾಡಿಕೊಳ್ಳಬೇಕಾಗುತ್ತದೆ. ಆದರೆ, ತಿದ್ದುಪಡಿ ಮಾಡದೇ ಇದ್ದ ಪಕ್ಷದಲ್ಲಿ ಕಾಯ್ದೆಯಡಿಯಲ್ಲಿ ಸಹಕಾರಿಯಲ್ಲಿರಬೇಕಾದ ಕನಿಷ್ಠ ಸೇವೆಗಳು ಯಾವುದು? ತಿಳಿಸಿ.**

ಉತ್ತರ : ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 10 (2) (iiiJ) ರನ್ವಯ ಸಹಕಾರಿಯ ಉಪವಿಧಿಯಲ್ಲಿ ಸದಸ್ಯತ್ವದ ಹೊಣೆಗಾರಿಕೆಯನ್ನು ಸ್ಪಷ್ಟವಾಗಿ ನಮೂದು ಮಾಡಿಕೊಳ್ಳಬೇಕಿರುತ್ತದೆ. ಅಲ್ಲದೇ, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 20 (2) ರಲ್ಲಿ ಸಹಕಾರಿಯ ಯಾವುದೇ ಸದಸ್ಯ ಉಪವಿಧಿಯಲ್ಲಿ ನಿರ್ದಿಷ್ಟ ಪಡಿಸಿರುವ ಕನಿಷ್ಠ ಮಟ್ಟದ ಸಹಕಾರಿಯ ಸೇವೆಯನ್ನು ಸತತ ಎರಡು ಸಹಕಾರ ವರ್ಷಗಳವರೆಗೆ ಬಳಸಿಕೊಂಡಿಲ್ಲದಿದ್ದರೇ, ಅಂತಹ ಸದಸ್ಯನು ಸಹಕಾರಿಯ ಸದಸ್ಯನಾಗಿ ಮುಂದುವರೆಯಲು ಅನರ್ಹನಾಗಿರುತ್ತಾನೆ. ಸಹಕಾರಿಯ ಸದಸ್ಯನು ಕನಿಷ್ಠ ವ್ಯವಹಾರವನ್ನು ಮಾಡುವ ಅಂಶವನ್ನು 2004ರಿಂದಲೇ ಅಧಿನಿಯಮದಲ್ಲಿ ಸೇರಿಸಲಾಗಿರುತ್ತದೆ. ಆದ್ದರಿಂದ, ಸದಸ್ಯನ ಕನಿಷ್ಠ ವ್ಯವಹಾರವನ್ನು ನಮೂದಿಸದೇ ಸಹಕಾರಿಯ ಉಪವಿಧಿಯನ್ನು ನೋಂದಣಿ ಮಾಡುವಂತಿಲ್ಲ. ಆದ್ದರಿಂದ, ಉಪವಿಧಿಯಲ್ಲಿ ಸದಸ್ಯನ ಕನಿಷ್ಠ ವ್ಯವಹಾರದ ಪ್ರಾವಧಾನವನ್ನು ಸೂಕ್ತವಾಗಿ ನೋಂದಣಿಯ ಸಂದರ್ಭದಲ್ಲೇ ಹೊಂದಿರಬೇಕಾಗುತ್ತದೆ.

**3. ಸಹಕಾರಿಯು ಪ್ರಾರಂಭ ದಿನಾಂಕದಿಂದ ಎಷ್ಟು ವರ್ಷ ಹಾನಿಯಲ್ಲಿ ಇದ್ದಲ್ಲಿ ಅದರ ಸಹಕಾರಿ ಅನುಮತಿ ಪತ್ರ (ಲೈಸನ್ಸ್) ರದ್ದಾಗಬಹುದು?**

**ಉತ್ತರ** : ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರಲ್ಲಿ ಈ ಕುರಿತು ಯಾವುದೇ ಪ್ರಾವಧಾನವಿರುವುದಿಲ್ಲ. ಆದರೆ, ಸಂಯುಕ್ತ ಸಹಕಾರಿಯು ದಿನಾಂಕ 01 ಜೂನ್ 2004ರಂದು ಪತ್ತಿನ ಸಹಕಾರಿಗಳಿಗಾಗಿ ಆರ್ಥಿಕ ಸಬಲತೆಯ ಮಾನದಂಡವನ್ನು ನಿಗದಿಪಡಿಸಿದ್ದು, ಸದರಿ ಮಾನದಂಡದಲ್ಲಿನ ಎರಡನೇ ಅಂಶದನ್ವಯ ಯಾವುದೇ ಪತ್ತಿನ ಸಹಕಾರಿಯು ತನ್ನ ಚಟುವಟಿಕೆಯನ್ನು ಆರಂಭಿಸಿ ಎರಡನೆಯ ಸಹಕಾರಿ ವರ್ಷದ ಕೊನೆಗೆ ಲಾಭವನ್ನು ಗಳಿಸಲು ಆರಂಭಿಸಬೇಕು ಮತ್ತು ಈ ಕೆಳಗಿನ ಗುರಿಗಳನ್ನು ತಲುಪತಕ್ಕದ್ದು.

| ಕ್ರ. ಸಂ. | ಕಾರ್ಯಾಚರಣಾ ಪ್ರದೇಶದ ಜನಸಂಖ್ಯೆ | ಸದಸ್ಯರ ಸಂಖ್ಯೆ | ದುಡಿಯುವ ಬಂಡವಾಳ ರೂ. ಗಳಲ್ಲಿ (ಲಕ್ಷಗಳಲ್ಲಿ) |
|---|---|---|---|
| 1 | 2 ಲಕ್ಷಕ್ಕಿಂತ ಕಡಿಮೆ | 100 | 2 |
| 2 | 2 ಲಕ್ಷದಿಂದ 5 ಲಕ್ಷದವರೆಗೆ | 200 | 4 |
| 3 | 5 ಲಕ್ಷದಿಂದ 10 ಲಕ್ಷದವರೆಗೆ | 300 | 6 |
| 4 | 10 ಲಕ್ಷದಿಂದ 20 ಲಕ್ಷದವರೆಗೆ | 400 | 8 |
| 5 | 20 ಲಕ್ಷದಿಂದ 40 ಲಕ್ಷದವರೆಗೆ | 500 | 10 |
| 6 | 40 ಲಕ್ಷದ ಮೇಲ್ಪಟ್ಟು | 800 | 15 |

ಮೇಲಿನ ಮಾನದಂಡವನ್ನು ತಲುಪದ ಸಹಕಾರಿಯನ್ನು ದುರ್ಬಲ ಸಹಕಾರಿಯೆಂದು ಗುರುತಿಸಲಾಗುತ್ತದೆ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959ರಲ್ಲಿ ಚಟುವಟಿಕೆಯನ್ನು ನಡೆಸಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ, 1997ರಡಿ ಪರಿವರ್ತಿತಗೊಂಡ ಯಾವುದೇ ಸಹಕಾರಿಯು ಸತತ ಎರಡು ವರ್ಷ ನಷ್ಟವನ್ನು ಅನುಭವಿಸಿದರೆ ಅಥವಾ ಪರಿವರ್ತನೆಯಾಗಿ ಎರಡು ವರ್ಷಗಳಲ್ಲಿಯೂ ಈ ಮೇಲಿನ ಗುರಿ ತಲುಪದಿದ್ದರೆ, ಅಂತಹ ಸಹಕಾರಿಯನ್ನು ದುರ್ಬಲ ಸಹಕಾರಿ ಎಂದು ಗುರುತಿಸಲಾಗುತ್ತದೆ. ದುರ್ಬಲ ಸಹಕಾರಿಗಳು ಒಂದು ವರ್ಷ ಸಂಯುಕ್ತ ಸಹಕಾರಿಯ ನೇರವಾದ ಪರಿವೀಕ್ಷಣೆಗೆ ಒಳಪಡುತ್ತದೆ. ಇಂತಹ ಸಹಕಾರಿಗಳು ದುರ್ಬಲತೆಯಿಂದ ಹೊರ ಬರಲು ಕಾರ್ಯ ಯೋಜನೆಯೊಂದನ್ನು ಸಿದ್ಧಪಡಿಸಿ, ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು.

ಇಂತಹ ಕಾರ್ಯ ಯೋಜನೆಯ ಅನುಷ್ಠಾನ ಮತ್ತು ಪ್ರಗತಿಯನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಸಂಬಂಧಿಸಿದ ಸಹಕಾರಿಯು ಸಂಯುಕ್ತ ಸಹಕಾರಿಯ ಜೊತೆಗೆ ಪರಾಮರ್ಶಿಸಬೇಕು. ದುರ್ಬಲತೆಯಿಂದ ಹೊರಬರುವ ಕಾರ್ಯ ಯೋಜನೆಯನ್ನು ಜಾರಿಗೆ ತಂದ ಮೇಲೂ ಸಹಕಾರಿಯು ಎರಡು ವರ್ಷಗಳಲ್ಲಿ ಮೇಲಿನ ಕೋಷ್ಟಕದಲ್ಲಿ ತಿಳಿಸಿದ ಗುರಿ ತಲುಪದಿದ್ದಲ್ಲಿ ಅಂತಹ ಸಹಕಾರಿಯ ಸಮಾಪನೆಗೆ ಸಂಯುಕ್ತ ಸಹಕಾರಿಯು ನಿಬಂಧಕರಿಗೆ ಶಿಫಾರಸ್ಸು ಮಾಡುತ್ತದೆ. ಪರಂತು, ಕಾರ್ಯಯೋಜನೆಯೇ ಶೇ.70ನ್ನು ಸಾಧಿಸಿ, ಬೇರೆ ಕಾರಣಗಳಿಂದ ನಷ್ಟವಾಗಿದ್ದಲ್ಲಿ ಅಥವಾ ಪತ್ತಿನ ಸಹಕಾರಿಗಳು ಮತ್ತು ಸ್ವಸಹಾಯ ಸಹಕಾರಿಗಳು ಸದಸ್ಯರ ಸಂಖ್ಯೆಯನ್ನು ತಲುಪದೇ ದುಡಿಯುವ ಬಂಡವಾಳದ ಗುರಿ ತಲುಪಿದ್ದಲ್ಲಿ ಎರಡು ವರ್ಷದ ಅವಧಿಯನ್ನು ಇನ್ನು ಒಂದು ವರ್ಷ ವಿಸ್ತರಿಸಿ ನಂತರ ಅಂತಹ ಸಹಕಾರಿಯ ಸಮಾಪನೆಗೆ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ.

# ವಿವಾದಗಳನ್ನು ದಾಖಲು ಮಾಡುವಾಗ ಅನುಸರಿಸಬೇಕಾದ ಕ್ರಮಗಳು

ಶ್ರೀ ಎಸ್.ಜಿ.ಜೋಷಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿವೃತ್ತ)

ವಿವಾದಗಳನ್ನು ದಾಖಲು ಮಾಡಲು ರಿಜಿಸ್ಟ್ರಾರರಿಗೆ ಅರ್ಜಿ ಕಳುಹಿಸುವಾಗ ಕೆಳಕಾಣಿಸಿದ ಮುಖ್ಯಾಂಶಗಳನ್ನು ಗಮನದಲ್ಲಿಡಬೇಕು.

1. ವಿವಾದದ ಅರ್ಜಿಯೊಂದಿಗೆ ಅತ್ಯಗತ್ಯವಾದ ಅನುಬಂಧಗಳನ್ನು (Annexures) ತಪ್ಪದೇ ಲಗತ್ತಿಸಿರಬೇಕು. ಉದಾ: ಸದಸ್ಯರ ರಿಜಿಸ್ಟರ್ ಉದ್ಧೃತ ಭಾಗ, ಶೇರು ರಿಜಿಸ್ಟರಿನ ಉದ್ಧೃತ ಭಾಗ, ಸಾಲದ ಅರ್ಜಿ, ಆಡಳಿತ ಮಂಡಲಿ ಠರಾವಿನ ನಕಲು, ಸಾಲದ ರಿಜಿಸ್ಟರಿನ ಉದ್ಧೃತ ಭಾಗ, ಸಾಲ ವಿತರಿಸಿದ ಬಗೆಗಿನ ಎಲ್ಲಾ ದಾಖಲಾತಿಗಳು (ಸ್ಥಿರಾಸ್ತಿ ಆಧಾರದ ಮೇಲೆ ಸಾಲ ನೀಡಿದ್ದಲ್ಲಿ ಸದರಿ ಸ್ಥಿರಾಸ್ತಿಗೆ ಸಂಬಂಧಪಟ್ಟ ಸಂಪೂರ್ಣ ವಿವರಗಳು ಮತ್ತು ದಾಖಲಾತಿಗಳು ಇತ್ಯಾದಿ)

2. ಈ ಅನುಬಂಧಗಳಿಗೆ (Annexures) ಅನುಕ್ರಮವಾಗಿ ನಿಶಾನೆ – 1, 2, 3, 4, 5.... ಹೀಗೆ ಗುರುತಿಸಿರಬೇಕು ಮತ್ತು ಪತಾಕೆ (FLAGS) ಗಳನ್ನು ಲಗತ್ತಿಸಬೇಕು. ಇದಕ್ಕಾಗಿ ಮಾರುಕಟ್ಟೆಯಲ್ಲಿ ಲಭ್ಯವಿರುವ ವಿವಿಧ ಬಣ್ಣಗಳ ಪತಾಕೆಗಳನ್ನು ಉಪಯೋಗಿದುವುದು ಸೂಕ್ತ. ಒಂದು ವಿವಾದಕ್ಕೆ ಸಂಬಂಧಿಸಿದಂತೆ ಸದಸ್ಯನ ರಿಜಿಸ್ಟರ್‌ನ ಉದ್ಧೃತ ಭಾಗಕ್ಕೆ 'ನಿಶಾನೆ–1' ಎಂದು ಗುರುತಿಸಿ, ಇದಕ್ಕೆ ಕೆಂಪು ಬಣ್ಣದ ಪತಾಕೆ ಲಗತ್ತಿಸಿದ್ದಲ್ಲಿ ಇತರೆ ವಿವಾದಗಳಲ್ಲಿಯು ಸದಸ್ಯರ ರಿಜಿಸ್ಟರ್‌ನ ಉದ್ಧೃತ ಭಾಗಕ್ಕೆ 'ನಿಶಾನೆ–1' ಎಂದು ಗುರುತಿಸಿ ಅವುಗಳಿಗೂ ಕೆಂಪು ಬಣ್ಣದ ಪತಾಕೆಗಳನ್ನು ಲಗತ್ತಿಸಬೇಕು. ಹೀಗೆ ಒಂದೊಂದು ಅನುಬಂಧಕ್ಕೆ ಒಂದೊಂದು ನಿಶ್ಚಿತ ನಿಶಾನೆ ಸಂಖ್ಯೆ ಹಾಗೂ ನಿಶ್ಚಿತ ಬಣ್ಣದ ಪತಾಕೆ ಲಗತ್ತಿಸುವ ಕ್ರಮ ಅನುಸರಿಸಬೇಕು. ಈ ವ್ಯವಸ್ಥೆ ಅಳವಡಿಸುವುದರಿಂದ ವಿವಾದಗಳ ವಿಚಾರಣೆ ಸಮಯದಲ್ಲಿ ಕೇವಲ ಪತಾಕೆಯ ಬಣ್ಣದಿಂದಲೇ ದಾಖಲಾತಿಗಳನ್ನು ಅತ್ಯಲ್ಪ ಸಮಯದಲ್ಲಿ ಯಾವುದೇ ಗೊಂದಲಕ್ಕೆ ಅವಕಾಶವಿಲ್ಲದಂತೆ ಗುರುತಿಸಿ, ವಿವಾದಗಳನ್ನು ಇತ್ಯರ್ಥ ಪಡಿಸುವ ನ್ಯಾಯಾಲಯಕ್ಕೆ ಅಗತ್ಯ ಹೇಳಿಕೆ ನೀಡಲು ಅನುಕೂಲವಾಗುತ್ತದೆ.

3. ವಿವಾದದ ಅರ್ಜಿಯೊಂದಿಗೆ ಲಗತ್ತಿಸಲಾದ ಅನುಬಂಧ (Annexures)ಗಳನ್ನು ಅದೇ ಕ್ರಮದಲ್ಲಿ ಮುಂದೆ ವಿಚಾರಣೆ ದಿನಾಂಕದಂದು ಸಲ್ಲಿಸಲಾಗುವ ಲಿಖಿತ ಹೇಳಿಕೆಯೊಂದಿಗೂ ಸಹ ಬಣ್ಣದ ಪತಾಕೆ ಸಹಿತ ಲಗತ್ತಿಸಿ ಮುಂಚಿತವಾಗಿ ಸಿದ್ಧಪಡಿಸಿಕೊಂಡಿರಬೇಕು. ಇದರಿಂದಾಗಿ ವಿಚಾರಣೆ ದಿನದಂದು ನ್ಯಾಯಾಲಯದಲ್ಲಿ ಹೇಳಿಕೆ ನೀಡುವಾಗ ಸಂಬಂಧಪಟ್ಟ ದಾಖಲಾತಿಗಳನ್ನು ಉಲ್ಲೇಖಿಸಲು ಮತ್ತು ಅವುಗಳನ್ನು ಬೇಗ ಗುರುತಿಸಿ ಪರಿಶೀಲಿಸಲು ನ್ಯಾಯಾಲಯಕ್ಕೆ ಅನುಕೂಲವಾಗುತ್ತದೆ. ಆದಕಾರಣ ಅನುಬಂಧ (Annexures)ಗಳನ್ನು ಯಾವಾಗಲೂ ದ್ವಿಪ್ರತಿಗಳಲ್ಲಿ ತಯಾರಿಸಿ ಇಟ್ಟುಕೊಂಡಿರಬೇಕು.

4. ಲಿಖಿತ ಹೇಳಿಕೆ ಸಲ್ಲಿಸಲು ಈಗ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನ್ಯಾಯಾಲಯದಲ್ಲಿನ ಮಾದರಿಯನ್ನು ಉಪಯೋಗಿಸುವುದು ಒಳಿತು. ಈ ಮಾದರಿಯಲ್ಲಿನ ವಿಷಯವನ್ನು ವಿವಿಧ ಸೌಹಾರ್ದ ಸಹಕಾರಿ/ ಬ್ಯಾಂಕುಗಳು ತಮ್ಮ ಅಗತ್ಯಕ್ಕೆ ತಕ್ಕಂತೆ ಹೆಚ್ಚು ಅಥವಾ ಕಡಿಮೆ ಮಾಡಿಕೊಳ್ಳಬಹುದು. ಈ ಮಾದರಿಯನ್ನು ಉಪಯೋಗಿಸುವುದರಿಂದ ಎಲ್ಲಾ ವಿವಾದಗಳಲ್ಲಿ ಏಕರೂಪತೆ ತಂದಂತಾಗುತ್ತದೆ ಮತ್ತು ವಿವಾದಗಳ ಶೀಘ್ರ ಇತ್ಯರ್ಥಕ್ಕೆ ನೆರವಾದಂತಾಗುತ್ತದೆ.

5. ಯಾವುದೇ ಕಾರಣಕ್ಕೆ ವಿವಾದವನ್ನು ದಾಖಲು ಮಾಡಲು ವಿಳಂಬವಾಗಿದ್ದಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಪ್ರಕರಣ 40ರ (ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959ರಡಿಯಲ್ಲಿ ನೋಂದಾಯಿಸಲಾದ ಸಹಕಾರ ಸಂಘಗಳು/ ಬ್ಯಾಂಕುಗಳು ಸದರಿ ಕಾಯ್ದೆಯ ಕಲಂ 70 ಎ) ಮೇರೆಗೆ ವಾಜ್ಯ ಕಾರಣ ಉಂಟಾದ ದಿನಾಂಕದಿಂದ ಆರು ವರ್ಷಗಳೊಳಗೆ (ಚುನಾವಣಾ ವಿವಾದಕ್ಕೆ ಸಂಬಂಧಿಸಿದಂತೆ ಚುನಾವಣಾ ಫಲಿತಾಂಶ ದಿನಾಂಕದಿಂದ 30 ದಿನಗಳ ಒಳಗಾಗಿ ಸಿವಿಲ್ ನ್ಯಾಯಾಲಯದಲ್ಲಿ ವಿವಾದವನ್ನ ದಾಖಲು ಮಾಡಬೇಕಾಗುತ್ತದೆ.) ವಿವಾದವನ್ನು ರಿಜಿಸ್ಟ್ರಾರನಿಗೆ ಕಳುಹಿಸಬೇಕು. ಸೇವಾ ವಿಷಯಕ್ಕೆ ಸಂಬಂಧಪಟ್ಟ ವಿವಾದದಲ್ಲಿ 12 ತಿಂಗಳೊಳಗಾಗಿ ವಿವಾದವನ್ನು ರಿಜಿಸ್ಟ್ರಾರನಿಗೆ ಕಳುಹಿಸಬೇಕು. ವಿಳಂಬಕ್ಕೆ ಸಮರ್ಥನೀಯ ಕಾರಣಗಳನ್ನು ವಿವರಿಸಿ ವಿಳಂಬ ಉಂಟಾಗಿರುವುದನ್ನು ಮನ್ನಿಸುವಂತೆ ಪ್ರಾರ್ಥಿಸಿ ಸೌಹಾರ್ದ ಸಹಕಾರಿ/ ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕರ ಅಫಿಡವಿಟ್‌ನೊಂದಿಗೆ ಪ್ರತ್ಯೇಕ ಅರ್ಜಿಯನ್ನು ಸಹ ತಪ್ಪದೇ ಸಲ್ಲಿಸಬೇಕು.

6. ವಿವಾದಗಳನ್ನು ದಾಖಲು ಮಾಡುವ ಸಮಯದಲ್ಲಿ ಸುಸ್ತಿ ಸಾಲಗಾರನು/ ಪ್ರತಿವಾದಿಯು ತನ್ನ ಸ್ಥಿರಾಸ್ತಿಯನ್ನು ಯಾವುದೇ ಕಾರಣಗಳಿಂದಾಗಿ ಇಷ್ಟರಲ್ಲಿಯೇ ವಿಲೇವಾರಿ ಮಾಡಲಿರುವ ಸಂಗತಿ ಮನದಟ್ಟಾಗಿದ್ದಲ್ಲಿ ಐತೀರ್ಪು ಪೂರ್ವ ಜಪ್ತಿ (ಅಟ್ಯಾಚ್‌ಮೆಂಟ್ ಬಿಫೋರ್ ಜಡ್ಜ್‌ಮೆಂಟ್) ಆದೇಶ ಕೋರಿ ದಾವಾ ಪಂಚಾಯತ್ ನ್ಯಾಯಾಲಯಕ್ಕೆ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಪ್ರಕರಣ 44ರ (ಕನಾಟಕ ಸಹಕಾರ ಸಂಘಗಳ ಕಾಯ್ದೆ, 1959ರಡಿಯಲ್ಲಿ ನೋಂದಾಯಿಸಲಾದ ಸಹಕಾರ ಸಂಘಗಳು/ ಬ್ಯಾಂಕುಗಳು ಸದರಿ ಕಾಯ್ದೆಯ ಕಲಂ 103ರ) ಪ್ರಕಾರ ಇತ್ಯರ್ಥಪಡಿಸಲು ಸೂಕ್ತ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸಬೇಕು. ಹೀಗೆ ಅರ್ಜಿ ಸಲ್ಲಿಸುವಾಗ ಸುಸ್ತಿ ಸಾಲಗಾರನು/ ಪ್ರತಿವಾದಿಯು ವಿಲೇವಾರಿ ಮಾಡಲಿರುವ ಸ್ಥಿರಾಸ್ತಿ ಕುರಿತಾದ ದಾಖಲಾತಿಗಳನ್ನು ಅರ್ಜಿಯೊಂದಿಗೆ ತಪ್ಪದೇ ಲಗತ್ತಿಸಿರಬೇಕು.

7. ವಿವಾದಗಳನ್ನು ದಾಖಲು ಮಾಡಿದ ನಂತರ ಇತ್ಯರ್ಥಕ್ಕಾಗಿ ಯಾವುದೇ ವಿವಾದ ದಾವಾ ಪಂಚಾಯ್ತಿ ನ್ಯಾಯಾಲಯದಲ್ಲಿ ಬಾಕಿ ಇರುವಾಗ ಅಕಸ್ಮಾತ್ತಾಗಿ ಸುಸ್ತಿ ಸಾಲಗಾರ/ ಜಾಮೀನುದಾರ (ಪ್ರತಿವಾದಿ) ಮೃತನಾದಲ್ಲಿ ತಕ್ಷಣ ಮರಣ ಪ್ರಮಾಣಪತ್ರ (ಕಾನೂನುಬದ್ಧ ವಾರಸುದಾರರ ಹೆಸರು, ವಿಳಾಸ, ವಂಶವೃಕ್ಷದ ಪ್ರತಿ ಇತ್ಯಾದಿಗಳನ್ನು ಸೌಹಾರ್ದ ಸಹಕಾರಿ/ ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕರ (ವಾದಿ/ ಅರ್ಜಿದಾರ) ಅಫಿಡವಿಟ್‌ನೊಂದಿಗೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಬೇಕು. ಸದರಿ ಅರ್ಜಿಯಲ್ಲಿ ಮೃತರಾದ ಪ್ರತಿವಾದಿಯ ಬದಲಾಗಿ ಅವರ ಕಾನೂನುಬದ್ಧ ವಾರಸುದಾರರನ್ನು ಪ್ರತಿವಾದಿಗಳನ್ನಾಗಿ ಪರಿಗಣಿಸುವಂತೆ ಸ್ಪಷ್ಟವಾಗಿ ಪ್ರಾರ್ಥಿಸಬೇಕು.

8. ವಿವಾದದ ಅರ್ಜಿಯಲ್ಲಿ ಸುಸ್ತಿ ಸಾಲಗಾರನ/ ಜಾಮೀನುದಾರರ (ಪ್ರತಿವಾದಿ) ಚರಾಸ್ತಿ ಮತ್ತು ಸ್ಥಿರಾಸ್ತಿಗಳ ಮಾರಾಟದಿಂದ ಸುಸ್ತಿ ಸಾಲವನ್ನು ವಸೂಲಿ ಮಾಡಿಕೊಳ್ಳಲು ಆದೇಶ ನೀಡಬೇಕೆಂದು ಸ್ಪಷ್ಟವಾಗಿ ಪ್ರಾರ್ಥಿಸಬೇಕು.

9. ವಿವಾದಗಳ ವಿಚಾರಣೆಗೆ ನಿಗದಿಪಡಿಸಿದ ದಿನಾಂಕದಂದು ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಸೌಹಾರ್ದ ಸಹಕಾರಿ/ ಬ್ಯಾಂಕಿನ ಮುಖ್ಯಕಾರ್ಯನಿರ್ವಾಹಕರು ತಪ್ಪದೇ ಸ್ವತಃ ನ್ಯಾಯಾಲಯದಲ್ಲಿ ಹಾಜರಿರಬೇಕು. ಈ ಕ್ರಮದಿಂದಾಗಿ ಯಾವುದೇ ವಿವಾದವು ವಿನಾಕಾರಣ ವಿಳಂಬಕ್ಕೆ ಅವಕಾಶವಿಲ್ಲದಂತೆ ತ್ವರಿತವಾಗಿ ಇತ್ಯರ್ಥಗೊಳ್ಳಲು ಸಹಕಾರಿಯಾಗುವುದು.

10. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರ ಕಲಂ 42ರ ಮೇರೆಗೆ ಬೇರೆ ನ್ಯಾಯಾಲಯಗಳು ವಿವಾದ ಇತ್ಯರ್ಥ ಪಡಿಸಲು ಅಧಿಕಾರ ವ್ಯಾಪ್ತಿ ಹೊಂದಿಲ್ಲ ಮತ್ತು ಈ ನ್ಯಾಯಾಲಯದ ಆದೇಶ/

ತೀರ್ಮಾನ/ ಅವಾರ್ಡ್‌ನ್ನ ಯಾವುದೇ ನ್ಯಾಯಾಲಯದಲ್ಲಿ ಯಾವುದೇ ಕಾರಣಕ್ಕಾಗಿಯೂ ಪ್ರಶ್ನಿಸತಕ್ಕದ್ದಲ್ಲ. ಅಪೀಲನ್ನು(ಮೇಲ್ಮನವಿಯನ್ನು) ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣಕ್ಕೆ ಆದೇಶದ ದಿನಾಂಕದಿಂದ 60 ದಿನಗಳೊಳಗಾಗಿ ಸಲ್ಲಿಸತಕ್ಕದ್ದು.

**ಸಂಯುಕ್ತ ಸಹಕಾರಿಗೆ ಸೌಹಾರ್ದ ಸಹಕಾರಿಗಳ ವ್ಯಾಜ್ಯಗಳ ವಿಲೇವಾರಿಗಾಗಿ ಮಂಜೂರಾಗಿರುವ ವಿಶೇಷ ನ್ಯಾಯಾಲಯದಲ್ಲಿ ದಾವಾ ದಾಖಲಾತಿಗಾಗಿ ಅನುಸರಿಸಬೇಕಿರುವ ಕ್ರಮಗಳು ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳು ದಾವಾ ದಾಖಲಾತಿಗೆ ಬರುವ ಮುನ್ನ ಈ ಎಲ್ಲಾ ದಾಖಲಾತಿಗಳನ್ನು ದಾವಾ ದಾಖಲಾತಿ ಪತ್ರದೊಡನೆ ಸಲ್ಲಿಸುವುದಕ್ಕೆ ಮಾಹಿತಿಗಾಗಿ ಪ್ರಕಟಿಸಿದೆ. (Check List for filing the Disputes)**

**ದಾವಾ ದಾಖಲಾತಿ ಕಡತದಲ್ಲಿರಬೇಕಾದ ಶಾಸನಬದ್ಧ ದಾಖಲಾತಿಗಳು**

1) ದಾವಾ ಅರ್ಜಿಯಲ್ಲಿರಬೇಕಾದ ಪ್ರಮುಖ ಅಂಶಗಳು (Dispute Application) :

- ಅರ್ಜಿದಾರರ ಹೆಸರು ಹಾಗೂ ಅವರ ಪೂರ್ಣ ವಿಳಾಸ ಮತು ವಯಸ್ಸು ದಾಖಲಿಸತಕ್ಕದ್ದು.
- ಎದುರುಗಾರರ ಹೆಸರು ಹಾಗೂ ಅವರ ಪೂರ್ಣ ವಿಳಾಸ ಮತು ವಯಸ್ಸು ದಾಖಲಿಸತಕ್ಕದ್ದು.
- ಸೌಹಾರ್ದ ಸಹಕಾರಿ ಕಾಯ್ದೆಯ ಯಾವ ಕಲಂನ ಅಡಿಯಲ್ಲಿ ದಾವಾ ದಾಖಲಾತಿ ಸಲ್ಲಿಸಿರುವುದನ್ನು ನಮೂದಿಸತಕ್ಕದ್ದು.
- ಬಾಕಿ ಇರುವ ಸಾಲದ ವಿವರ ಹಾಗೂ ಸುಸ್ತಿ ಕಂತುಗಳ ವಿವರ, ಈ ಬಗ್ಗೆ ದಾವಾ ನ್ಯಾಯಾಲಯಕ್ಕೆ ಸಲ್ಲಿಸಬೇಕಾದ ಶುಲ್ಕದ ವಿವರ ನಮೂದಿಸಿರಬೇಕು ಹಾಗೂ ಶುಲ್ಕ ಪಾವತಿಸಿರುವ ವಿಧಾನ ಅಂದರೆ ಚಲನ್/ ಡಿಡಿ/ ವಿವರಗಳನ್ನು ನಮೂದಿಸತಕ್ಕದ್ದು.
- ಯಾವ ಉದ್ದೇಶದ ಸಾಲಕ್ಕಾಗಿ ದಾವೆ ಹೂಡಿರುವುದನ್ನು ದಾವಾ ದಾಖಲಾತಿಯಲ್ಲಿ ನಮೂದಿಸತಕ್ಕದ್ದು.
- ಸಾಲವನ್ನು ವಸೂಲು ಆದೇಶದಲ್ಲಿ ಮೊತ್ತ ವಸೂಲಿ ಮಾಡಿಕೊಡಲು ನ್ಯಾಯಾಧೀಶರಲ್ಲಿ ಪ್ರಾರ್ಥಿಸುವ ಬಗ್ಗೆ ಪತ್ರ ಇರತಕ್ಕದ್ದು.
- ಪ್ರತಿ ದಾವಾ ದಾಖಲಾತಿಯ ವಿವರವನ್ನು ಕಡ್ಡಾಯವಾಗಿ ಹಸಿರು ಹಾಳೆಯಲ್ಲಿ ಒದಗಿಸತಕ್ಕದ್ದು.
- ದಾವಾ ಅರ್ಜಿಗೆ ಮುಖ್ಯಕಾರ್ಯನಿರ್ವಾಹಕರ ಅಥವಾ ಅಧಿಕಾರ ಹೊಂದಿದವರ ಸಹಿ ಹಾಗೂ ಮೊಹರಿನೊಂದಿಗೆ ಸಲ್ಲಿಸತಕ್ಕದ್ದು.
- ದಾವಾ ಅರ್ಜಿಯ ಪ್ರತಿಪುಟಕ್ಕೆ ಸಹಕಾರಿಯ ದುಂಡು ಮೊಹರು ಹಾಗೂ ಅಧಿಕಾರ ಹೊಂದಿದವರ ಸಹಿ ಇರತಕ್ಕದ್ದು.

2) ಅಧಿಕಾರ ಪತ್ರ (Official Memorandum)

- ಈ ಅಧಿಕಾರ ಪತ್ರವನ್ನು ಮುಖ್ಯವಾಗಿ ಮುಖ್ಯ ಕಾರ್ಯನಿರ್ವಾಹಕರು ಅಥವಾ ಯಾವುದೇ ಅಧಿಕಾರಿಗೆ ಅಧಿಕಾರವಿರುವ ತಮ್ಮ ಸೌಹಾರ್ದ ಸಹಕಾರಿಯ ಶಾಖೆಯ ವ್ಯವಸ್ಥಾಪಕರಿಗೆ ದಾವೆ ದಾಖಲಿಸುವಲ್ಲಿ ಯಾವುದೇ ಸಹಿ ಹಾಗೂ ಇನ್ನಿತರ ಮಾಹಿತಿಯನ್ನು ಒದಗಿಸಿಕೊಡಲು ಸಹಾಯವಾಗಲ್ಲಿಕ್ಕೆ ಮುಖ್ಯಕಾರ್ಯನಿರ್ವಾಹಕರು ನೀಡುವ ಪತ್ರ ಇದಾಗಿದೆ.

3) ಸದಸ್ಯತ್ವ ಅರ್ಜಿ ಪತ್ರ (Nominal Membership)

- ಸೌಹಾರ್ದ ಸಹಕಾರಿಯ ಸದಸ್ಯತ್ವ ಹೊಂದಿರುವ ಬಗ್ಗೆ ಕಡತದಲ್ಲಿ ಅದರ ದೃಢೀಕೃತ ಪ್ರತಿಯನ್ನು ಲಗತ್ತಿಸಬೇಕು.

4) ಸಾಲದ ಅರ್ಜಿ ಪತ್ರ (Loan Application)

- ಆ ಸೌಹಾರ್ದ ಸಹಕಾರಿಯು ನೀಡಿರುವ ಸಾಲದ ಅರ್ಜಿಯ ವಿವರದ ದೃಢೀಕೃತ ನಕಲು ಪ್ರತಿಯನ್ನು ಲಗತ್ತಿಸಬೇಕು.

5) ಜಾಮೀನುದಾರರ ಘೋಷಣೆ (Suritys Declaration)

- ತೆಗೆದುಕೊಂಡ ಸಾಲಕ್ಕೆ ಸದರಿ ಸದಸ್ಯರು ಸಾಲದ ಬಡ್ಡಿ ಮರುಪಾವತಿ ಮಾಡುವಲ್ಲಿ ಸೌಹಾರ್ದ ಸಹಕಾರಿಗೆ ವಿಳಂಬ ಮಾಡಿದರೆ ಅಥವಾ ಸಾಲದ ಅವಧಿ ಮುಗಿದರೂ, ಸಾಲ ಕಟ್ಟದಿದ್ದರೆ ಅವರ ಸಾಲ ಹಾಗೂ ಬಡ್ಡಿ ಹಣ ಜಾಮೀನುದಾರರಾದವರು ಮರು ಪಾವತಿಸುತ್ತೇವೆಂದು ಬರೆದುಕೊಟ್ಟ ಮುಚ್ಚಳಿಕೆ ಪತ್ರದ ದೃಢೀಕೃತ ನಕಲು ಪ್ರತಿಯನ್ನು ಕಡತಕ್ಕೆ ಲಗತ್ತಿಸಬೇಕು.

6) ಸಾಲ ಮಂಜೂರಾತಿ ಪತ್ರ (Loan Sanction Letter)

- ಸೌಹಾರ್ದ ಸಹಕಾರಿಯವರು ಸಾಲ ಮಂಜೂರಾತಿ ಮಾಡಿರುವ ದೃಢೀಕರಣ ಪ್ರತಿಯನ್ನು ಕಡತಕ್ಕೆ ಲಗತ್ತಿಸಿರಬೇಕು.

7) ಬ್ಯಾಂಕಿಗೆ ಹಣ ತುಂಬಿರುವ ಬಗ್ಗೆ ಚಲನ್‌ನಿನ ಮೂಲ ಪ್ರತಿಯನ್ನು ಕಡತಕ್ಕೆ ಲಗತ್ತಿಸಬೇಕು.

- ನ್ಯಾಯಾಲಯಕ್ಕೆ ಅಗತ್ಯ ಮೊತ್ತ ಭರಿಸಿದ ಹಣದ ಚಲನ್‌ನಿನ ಮೂಲ ಪ್ರತಿಯನ್ನು ಕಡತಕ್ಕೆ ಲಗತ್ತಿಸುವುದು.

8) ಕರಾರು ಪತ್ರ ಸೌಹಾರ್ದ ಸಹಕಾರಿಗಳದ್ದು (Pro-Note's)

- ಸಾಲ ಮಂಜೂರಾತಿ ಮಾಡುವ ಸಂದರ್ಭದಲ್ಲಿ ಸಾಲಗಾರರಿಗೆ ಸೌಹಾರ್ದ ಸಹಕಾರಿಯು ನಿಗದಿ ಪಡಿಸಿದ ಬಡ್ಡಿ ದರಕ್ಕೆ ಹಾಗೂ ಸಾಲದ ಮೊತ್ತದ ಒಪ್ಪಿಗೆಯ ಕರಾರು ಪತ್ರದ ದೃಢೀಕೃತ ನಕಲು ಪ್ರತಿಯನ್ನು ಲಗತ್ತಿಸತಕ್ಕದ್ದು.

9) ಸ್ಥಿರಾಸ್ತಿ ಅಢಾವೆಯಾದ ಪ್ರಕರಣಗಳಲ್ಲಿರಬೇಕಾದ ಪತ್ರಗಳು (Equitable Mortgage by Deposit of Title Deed)

- ಈ ಪತ್ರದೊಂದಿಗೆ ಉಪನೋಂದಣಾಧಿಕಾರಿಯಿಂದ ನೋಂದಣಿ ಯಾದ ಆಸ್ತಿ ವಿವರದ ದೃಢೀಕೃತ ಪತ್ರ.
- Form No : 15 ಲಗತ್ತಿಸತಕ್ಕದ್ದು. (ಸಾಲಗಾರನು ಸಹಕಾರಿಗೆ ಈಡು ಮಾಡಿದ ಸ್ಥಿರಾಸ್ತಿ ವರ್ಗಾವಣೆ ಆದ ಪತ್ರದ ದೃಢೀಕೃತ ನಕಲು ಪತ್ರ.

10) ಸಾಲ ಕೊಡಲು ಭದ್ರತೆಗಾಗಿ ತೆಗೆದುಕೊಳ್ಳುವ ಪತ್ರ (Letter of Gurantee)

- ಆಸ್ತಿಗೆ ಸಂಬಂಧಿಸಿದ ಸಾಲಕ್ಕೆ ಸಂಬಂಧಪಟ್ಟ ಆಸ್ತಿಯ ದೃಢೀಕೃತ ನಕಲು ದಾಖಲಾತಿಗಳನ್ನು ಲಗತ್ತಿಸುವುದು.
- ನೌಕರರ ಸಾಲಕ್ಕೆ ಸಂಬಂಧಿಸಿದಂತೆ ವೇತನ ಪ್ರಮಾಣ ಪತ್ರದ ದೃಢೀಕೃತ ನಕಲು ಪ್ರತಿಯನ್ನು ಲಗತ್ತಿಸುವುದು.

11) ಸಾಲದ ಕರಾರು ಸಾಲ ಒಪ್ಪಿದ ಪತ್ರ (Loan Agreement form statement Account)

- ಸೌಹಾರ್ದ ಸಹಕಾರಿಯು ನೀಡಿದ ಸಾಲ ಮಂಜೂರಾತಿ ನೀಡಿದ ಖಾತೆಯ ವಿವರದ ದೃಢೀಕೃತ ನಕಲು ಪ್ರತಿಯನ್ನು ಲಗತ್ತಿಸತಕ್ಕದ್ದು.

12) ಅಂತಿಮ ನೋಟಿಸ್ (Final Notice)

- ಸೌಹಾರ್ದ ಸಹಕಾರಿಯವರು ಸಾಲಗಾರರಿಗೆ ಸಾಲವನ್ನು ತುಂಬಲು ಗಡುವು ನೀಡುವ ಅಂತಿಮ ನೋಟೀಸಿನ ದೃಢೀಕೃತ ನಕಲು ಪ್ರತಿಯನ್ನು ಲಗತ್ತಿಸತಕ್ಕದ್ದಾಗಿದೆ.

13) ಮೇಲೆ ವಿವರಿಸಲಾದ ಈ ಎಲ್ಲಾ ದಾಖಲಾತಿಗಳ ಪ್ರತಿಗಳನ್ನು ಸೌಹಾರ್ದ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರ ಅಥವಾ ಅವರಿಂದ ಅಧಿಕಾರ ಹೊಂದಿದವರ ದೃಢೀಕರಣ ಸಹಿಯೊಂದಿಗೆ ನ್ಯಾಯಾಲಯಕ್ಕೆ ಸಲ್ಲಿಸುವುದು ಹಾಗೂ ಎದುರುಗಾರರು ಎಷ್ಟು ಇರುತ್ತಾರೋ ಅಷ್ಟು ದಾವಾ ದಾಖಲಾತಿಯ ನಕಲು ಪ್ರತಿಗಳನ್ನು ಲಗತ್ತಿಸತಕ್ಕದ್ದು.

14) ಸಹಕಾರಿಯಿಂದ ಸಾಲ ಪಡೆದ ಸದಸ್ಯರ ಸಾಲದ ಖಾತೆಯ ದೃಢೀಕೃತ ಪ್ರತಿ ಲಗತ್ತಿಸತಕ್ಕದ್ದು.

# ಮಂಕುತಿಮ್ಮನ ಕಗ್ಗದಲ್ಲಿ ಸಹಕಾರ ಕ್ಷೇತ್ರದ ಹಿರಿಮೆ



ಶ್ರೀ ಎಂ.ಬಸಪ್ಪ, ಸಹಕಾರ ಸಂಘಗಳ ಉಪನಿಬಂಧಕರು (ನಿವೃತ್ತ), ಬೆಂಗಳೂರು.

## ಪ್ರಕೃತಿಯ ಪಂಚ ಮಹಾಭೂತಗಳಂತೆ ವರ್ತಿಸು : ಆಂತರಿಕ ಸಂಬಂಧಗಳನ್ನು ಬೆಳೆಸು

ಜಗನ್ನಿಯಾಮಕನ ಅದ್ವಿತೀಯ ಕಾರ್ಖಾನೆ ಈ ಜೀವ ಜಗತ್ತು. ತನ್ನ ಸೃಷ್ಟಿ ಕೌಶಲದಿಂದ ವೈವಿಧ್ಯಮಯ ಜೀವ ರಾಶಿಗಳನ್ನು ಸೃಷ್ಟಿಸಿದ ದೇವರು ಮನುಜರಾದ ನಮ್ಮನ್ನೆಲ್ಲಾ ಸಹೋದರರೆಂಬಂತೆ ಬದುಕಿ ಸಮಾಜದ ಸ್ವಾಸ್ಥ್ಯವನ್ನು ಕಾಯ್ದುಕೊಂಡು ಮುಂದಿನ ಪೀಳಿಗೆಗೆ ಉತ್ತಮ ಸಮಾಜವನ್ನು ಕೊಡುಗೆಯಾಗಿ ಕೊಡಲು ಶಾಸ್ತ್ರಗಳ ಮೂಲಕ ನಿರ್ದೇಶನ ನೀಡಿರುತ್ತಾನೆ. "ಡಿವಿಜಿ"ಯವರ ಚಿಂತನೆಯ ಹರವು ಸಮಗ್ರವಾಗಿದ್ದು, ಸರ್ವರ ಅಭಿವೃದ್ಧಿಯನ್ನು ಸಹಕಾರ ಮನೋಭಾವದಿಂದ ಆಶಿಸುವಂತಹದ್ದಾಗಿದೆ. ತತ್ಕಾರಣ ಜೀವಿಗಳಾದ ನಮ್ಮ ಬಾಳಿನ ಉತ್ತಮ ದಾರಿಯನ್ನು ಕ್ರಮಿಸಲು ಉದಾಹರಣಾರ್ಥವಾಗಿ ಪ್ರಕೃತಿಯಲ್ಲಿ ಅಡಕವಾಗಿರುವ ಸಹಕಾರ ಮನೋಭಾವವನ್ನು ಈ ಕೆಳಗಿನ ಪದ್ಯ ಹಾಗೂ ವಿವರಣೆಯಲ್ಲಿ ಸ್ಪಷ್ಟೀಕರಿಸಲಾಗಿದೆ.

ನಾವು ಪ್ರಕೃತಿಯ ಕಡೆಗೆ ವಿಹಂಗಮ ನೋಟವನ್ನು ಹರಿಸಿ ತದೇಕಚಿತ್ತರಾಗಿ ವೀಕ್ಷಿಸಿದಲ್ಲಿ ರಾತ್ರಿಯ ವಿಶಾಲವಾದ ನಭದಲ್ಲಿ ಜಗಮಗಿಸುವ ನಕ್ಷತ್ರಗಳ ಸುಂದರ ದೃಶ್ಯ, ಜುಳುಜುಳು ಹರಿಯುತ್ತಿರುವ ನದಿಗಳು ಕಾಣಬರುತ್ತವೆ. ಸೂರ್ಯನು ನಿರಂತರವಾಗಿ ಬೆಳಕನ್ನು ನೀಡಿ ಸಸ್ಯ, ಪ್ರಾಣಿ ಹಾಗೂ ನರನಿಗೆ ಆರೋಗ್ಯ ಶಕ್ತಿಗಳನ್ನು ನೀಡುತ್ತಿದ್ದಾನೆ. ಕಾಲಕಾಲಕ್ಕೆ ಸರಿಯಾಗಿ ಮಳೆಯು ಸುರಿದು ಧರೆಯನ್ನು ತಂಪಾಗಿಸಿ ಬೆಳೆ ನೀಡಿ ಜನ, ಸಸ್ಯ, ಪ್ರಾಣಿಗಳಿಗೆ ಶಕ್ತ್ಯಾರೋಗ್ಯಗಳನ್ನು ನೀಡುತ್ತಿದ್ದಾನೆ. ನದಿಗಳು ಹರಿಯುವ ಸುಂದರ ದೃಶ್ಯ, ಸಸ್ಯಗಳು, ಗಿಡಬಳ್ಳಿಗಳು, ಸುಂದರ ಸುಗಂಧ ಹೂಗಳನ್ನು ಬಿಟ್ಟು ಜನಸಮುದಾಯದ ಆರೋಗ್ಯವನ್ನು ವರ್ಧಿಸಿವೆ.

ಸಾಗರಗಳು ಉನ್ನತೋನ್ನತ ಶಿಖರಗಳು ಸ್ಥಿರವಾಗಿ ನಿಂತಿವೆ. ಇವುಗಳೇ ಅಲ್ಲದೇ ಇನ್ನು ಬಹುವಿಧದಲ್ಲಿ ಪ್ರಕೃತಿ ಮಾತೆಯು ತ್ಯಾಗಮಯಿಯಾಗಿ ಸೇವೆ ಗೈಯುತ್ತಿದ್ದರೂ ಯಾರಿಂದಲೂ ಪ್ರಶಂಸೆಯನ್ನಾಗಲೀ ಹೆಗ್ಗಳಿಕೆಯನ್ನಾಗಲೀ ಬಯಸುತ್ತಿಲ್ಲ, ತಮ್ಮ ಸೇವೆಯನ್ನು ಸ್ತುತಿ ಮಾಡುತ್ತಿಲ್ಲವೆಂದು ಎಂದೂ ಗೊಣಗಲಿಲ್ಲ, ತಮಗೆ ಭಗವಂತನು ಹಂಚಿ ಹಾಕಿದ ಕರ್ತವ್ಯವನ್ನು ಏಕಮನಸ್ಸಿನಿಂದ ನಿಸ್ವಾರ್ಥತೆಯಿಂದ ಕರ್ತವ್ಯ ನಿರ್ವಹಿಸಿ ಸಂತುಷ್ಟತೆಯನ್ನು ಕಂಡಿವೆ.

ಭಗವಂತನು ತನ್ನ ಸೃಷ್ಟಿಯಲ್ಲಿ ಪೂರ್ಣ ವಿಕಾಸಿತ ಹಾಗೂ ಶ್ರೇಷ್ಠ ಮಟ್ಟದ ಜೀವಿಯಾದ ಮಾನವನಿಗೆ ಜನ್ಮ ನೀಡಿ ಆತನನ್ನು ಸೃಷ್ಟಿ ಜಗತ್ತಿನ ಶಿಖರಪ್ರಾಯನನ್ನಾಗಿ ಸೃಷ್ಟಿಸಿದ್ದಾನೆ. ಸೃಷ್ಟಿಯ ಕಳಸ ಪ್ರಾಯ ಮಾನವ ಎಂಬುದು ಸರ್ವವಿಧಿತ. ಪ್ರಕೃತಿಯಲ್ಲಿನ ಅಂಶಗಳಾದ ಸೂರ್ಯ, ಆಕಾಶ, ಭೂಮಿ, ಗಾಳಿ ಇವುಗಳ ಅವಿರತ ಕಾರ್ಯಚರಣೆಯಿಂದ ಜಗದ ಜನರ ಸುಖಬಾಳ್ವೆ ಏರ್ಪಟ್ಟಿದೆಯೆಂದು ಈ ಕೆಳಗಿನ ಪದ್ಯದಲ್ಲಿ ಚಿತ್ರೀಕೃತವಾಗಿ ವಿವರಿಸಲ್ಪಟ್ಟಿದೆ.

**"ತರಣಿ ಕಿರಣದ ನಂಟು ಗಗನ ಸಲಿಲದ ನಂಟು**
**ಧರಣಿ ಚಲನೆಯ ನಂಟು ಮರುತನೊಳ್ನಂಟು**
**ಪರಿಪರಿಯ ನಂಟುಗಳಿನೊಂದು ಗಂಟೀ ವಿಶ್ವ**
**ಕಿರಿದು ಪಿರಿದೊಂದುಂಟು ಮಂಕುತಿಮ್ಮ"**

ಈ ಪದ್ಯದಲ್ಲಿ ಜಗತ್ತಿಗೂ ಮನುಷ್ಯನಿಗೂ ಇರುವ ನಂಟಿನ ಸಂಬಂಧವು ವಿವರಿಸಲ್ಪಟ್ಟಿದೆ. ಸೂರ್ಯನಿಗೂ ರಶ್ಮಿಗಳಿಗೂ ನಂಟು, ಆಕಾಶಕ್ಕೂ ಮೋಡದಿಂದ ಬರುವ ನೀರಿಗೂ ನಂಟು, ಭೂಮಿಯ ಪಥ ಚಲನೆಯ ನಂಟು, ಗಾಳಿಗೆ ಬೀಸುವ ಕಾರ್ಯ ಹೀಗೆ ಬಗೆಬಗೆಯ ವಿಧವಿಧದ ನಂಟುಗಳು. ಈ ಒಂದರೊಂದರ ಸಹಕಾರದಿಂದ ಜಗದ ಯಶಸ್ವಿ ನಿರ್ವಹಣೆ ಸಾಧ್ಯವಾಗಿದೆ. ಈ ಅಂಶದಿಂದ ನಾವು ಕಲಿಯಬೇಕಾದ ಪಾಠವೆಂದರೆ ನಾವುಗಳೆಲ್ಲರೂ ಸಹ ಬಂಧುಗಳಂತೆ ವರ್ತಿಸಿ ಸಂಪದಭಿವೃದ್ಧಿಗಳನ್ನು ಪಡೆಯೋಣ ಹಾಗೂ ಸಹಕಾರದಿಂದ ಬದುಕೋಣ ಸಹಕಾರ ಕ್ಷೇತ್ರದಲ್ಲಿ ಆಂತರಿಕ ಸಂಬಂಧಗಳ ನಿರ್ವಹಣೆಗೆ ಆದ್ಯತೆ ನೀಡೋಣ ಎಂಬುದು ಈ ಪದ್ಯದ ಸಂದೇಶವಾಗಿದೆ.

ಮಾನವನ ಜೀವನದ ಪಾವನತೆ ಸಹಕಾರದಿಂದ, ಒಂದಾಗಿ ಬಾಳಿ ಸಮಗ್ರ ಅಭಿವೃದ್ಧಿಯತ್ತ ಸಾಗುವುದರಲ್ಲಿ ಅಡಕವಾಗಿದೆ. ಆದಕಾರಣ ಡಿವಿಜಿಯವರ ಕರೆಯಿದಾಗಿದೆ "ವಸುದೈವ ಕುಟುಂಬಂ", ಜಗತ್ತೇ ಒಂದು ಸಂಸಾರ ಆ ಬೃಹತ್ ಸಂಸಾರದ ಸದಸ್ಯರು ನಾವೆಂದು ಭಾವಿಸಿ, ಉತ್ತಮ ಹಾಗೂ ಕ್ರಿಯಾಶೀಲರಾಗಿ ಬದುಕನ್ನು ನಿರ್ವಹಿಸಬೇಕೆಂದು ಅವರ ಆಶೋತ್ತರವಾಗಿದೆ. ಇದನ್ನರಸಿ ಪ್ರಕೃತಿಯ ಪಂಚಭೂತಗಳಾದ ಅಗ್ನಿ, ಆಕಾಶ, ಭೂಮಿ, ವರುಣ, ವಾಯುಗಳಂತೆ ನಿಸ್ವಾರ್ಥವಾಗಿ ಯಜ್ಞ ಭಾವದಿಂದ ಕಾರ್ಯ ಪ್ರವೃತ್ತರಾಗೋಣವೆಂಬುದು ಈ ಪದ್ಯದಲ್ಲಿ ಅಡಕವಾಗಿರುವ ಅಂಶವಾಗಿದೆ.



# Reserve Bank of India News – July 2016

**K. Vittal Shetty,** kohimavittal@hotmail.com. Mobile : 9845699904

The third bi-monthly monetary policy statement will be announced on August 9, 2016

The fourth bi-monthly monetary policy statement on October 4, 2016, fifth bi-monthly monetary policy statement on December 6, 2016; and the sixth bi-monthly monetary policy statement on February 7, 2017.

| Policy Rates with effect from 05 April 2016. | % |
|---|---|
| POLICY REPO RATE | 6.50% |
| REVERSE REPO RATE | 6. |
| MARGINAL STANDING FACILITY RATE | 7.00% |
| BANK RATE | 7.00% |
| Reserve Ratios | % |
| Cash Reserve Ratio | 4.00% |
| Statutory Reserve Ratio Effective July 15,.2016 | 21.00% |

Date : Jul 21, 2016 - Scheduled Bank's Statement of Position in India as on Friday, July 08, 2016

| (Amount in Billions of □) | | | | | | | |
|---|---|---|---|---|---|---|---|
| | | SCHEDULED COMMERCIAL BANKS (Including RRBs) | | | ALL SCHEDULED BANKS | | |
| | | 10-Jul-15 | 24-Jun-2016 * | 08-Jul-2016 * | 10-Jul-15 | 24-Jun-2016 * | 08-Jul-2016 * |
| I | a) Deposits | 88301.12 | 95955.32 | 96714.37 | 90668.89 | 98559.56 | 99340.22 |
| | i) Demand | 7762.65 | 8939.48 | 8661.58 | 7965.08 | 9151.66 | 8886.2 |
| | ii) Time | 80538.47 | 87015.86 | 88052.81 | 82703.81 | 89407.92 | 90454.05 |
| II | INVESTMENTS | 26378.93 | 27594.34 | 27960.7 | 27106.73 | 28372.72 | 28728.75 |
| III | BANK CREDIT | 66419.56 | 72559.54 | 72922.92 | 68433.72 | 74776.94 | 75134.26 |

## I. IMPORTANT NEWS



**Jul 04, 2016 :** Shri N. S. Vishwanathan takes over as RBI Deputy Governor

**Jul 18, 2016 :** In the foreseeable future, we will bring formal financial services to every Indian who wants them: RBI Governor "In the foreseeable future, we will bring formal financial services to every Indian who wants them. Financial inclusion will be an important element in ensuring access and equity - the necessary building blocks for sustainable growth of our country." Dr. Raghuram G. Rajan said this today while speaking at the National Seminar on Equity, Access and Inclusion organised by National Institute of Rural Development and Panchayat Raj in Hyderabad.

Since the size of transactions by the poor, or by micro farmers or enterprises is small, fixed costs in transacting are relatively high. If the time and cost involved in filling up a form and documentation for a client, for instance, is the same for a loan of say 10,000 and 10 lakh, a banker who is conscious of the bottom line would naturally focus on the large client.

A moneylender does not suffer any of these impediments. Since there are few more readily available alternatives than the moneylender in underserved areas, he has so many in his clutches.

**Jul 27, 201 :** RBI penalises 13 Banks for violating KYC Norms

**Jul 28, 2016 :** RBI Imposes Monetary Penalty on UCO Bank

**Jul 29, 2016 :** Issue of 100 banknotes without inset letter, ascending size of numerals in the number panels, bleed lines, and enlarged identification mark

**Jul 29, 2016 :** Issue of 10 banknotes without inset letter, ascending size of numerals in number panels

Cancellation,Directions,Extensions,Penalties and Withdrawl on Urban Co-operative Banks.

**Jul 01, 2016 :** RBI extends Directions issued to Shri Sai Urban Co-operative Bank Ltd., Mukhed Dist. Nanded, Maharashtra for a further period of three months from the close of business as on June 30, 2016 to September 30, 2016,

**Jul 01, 2016 :** RBI imposes Monetary Penalty of 5.00 lakh (Rupees Five Lakh only) on Shri Anand Nagari Sahakari Bank Ltd., Chandrapur (Maharashtra) for violation of various norms and RBI instructions.

**Jul 04, 2016 :** Cancellation of licence of Jijamata Mahila Sahakari Bank Limited,Satara, Maharashtra to carry on banking business. Reserve Bank of India has, vide its order dated June 30, 2016, cancelled the licence of Jijamata Mahila Sahakari Bank Limited, Satara, Maharashtra to carry on banking business As such, the bank is forthwith precluded from transacting the business of 'banking' including

Swabhimani Sahakari, Monthly, Posting Day 8th.
Posted at Bangalore PSO, Mysore Road, Bangalore 560026
Registered No. RNP/BGW/1744/2014-16. RNI No. KARBIL - 2004/18001. Pages 28



acceptance / repayment of deposits.

**Jul 05, 2016 :** RBI extends Directions issued to the Brahmawart Commercial Co-operative Bank Ltd., Kanpur, Uttar Pradesh till January 06, 2017

**Jul 11, 2016 :** RBI imposes penalty of 10.00 lakh (Rupees Ten lakh only) on The Prathamik Shikshak Sahakari Bank Limited Kolhapur, for violation of operational instructions relating to declaration and payment of dividend for the financial year 2013-14 without prior permission.

**Jul 12, 2016 :** RBI imposes penalty 1.00 lakh (Rupees one Lakh only) on Shri Anand Co-operative Bank Ltd, Pune, for violations of the Instructions / Guidelines of the Reserve Bank of India relating to group borrower limit

**Jul 13, 2016 :** RBI extends Directions issued to the Amanath Co-operative Bank Ltd., Bengaluru

**Jul 13, 2016 :** RBI extends Directions on The Suri Friends' Union Co-operative Bank Ltd., Suri, West Bengal.

**Jul 14, 2016 :** RBI imposes penalty of 1.00 lakh (Rupees one Lakh only) on Shri Laxmi Co-operative Bank Ltd., Pune, for violations by submitting false compliance to RBI Inspection Report 2012-2013.

**Jul 14, 2016 :** RBI imposes penalty 1.00 lakh (Rupees one lakh only) on The Yashwant Co-operative Bank Limited, Phaltan, Maharashtra, for violation of directions/instructions/ guidelines issued relating to individual unsecured advances exposure limit, group borrower limit and submission of compliance to RBI.

**Jul 15, 2016 :** The Bodeli Urban Co-operative Bank Ltd., Bodeli, Dist. Chhota Udepur (Gujarat) – Penalised.RBI has imposed a monetary penalty of 1.00 lakh (Rupees one Lakh) for violations of RBI guidelines for ceiling on unsecured advances, credit sanction, KYC/AML guidelines regarding issuance of at-par cheques against cash and allotment of Unique Customer Identification Codes (UCICs) to its customers.

**Jul 18, 2016 :** RBI imposes penalty 1.00 lakh (Rupees One Lakh only) on Baidyabati-Sheoraphuli Co-operative Bank Ltd., Dist - Hooghly, West Bengalfor violation of extant guideline on limit of Non-SLR investment, individual and group exposure ceilings for lending operations and Know Your Customer (KYC) related instructions.

Jul 20, 2016:- RBI imposes penalty of 1.00 lakh (Rupees One Lakh only) on Sanmitra Sahakari Bank Maryadit, Mumbai, for violations of the instructions / guidelines relating to single borrower exposure limit, unsecured individual borrower limit and Know Your Customer (KYC)/Anti-Money Laundering (AML).

**Jul 22, 2016 :** RBI issues Directions on Shree Ganesh Sahakari Bank Ltd., Nashik, Maharashtra - Relaxation in payment of deposit.In terms of the existing directions a sum not exceeding 1,000/- of the total balance in every savings bank or current account or any other deposit account by whatever name called was allowed to be withdrawn by a depositor.RBI has modified the directive as under:

"A sum not exceeding 50,000/- (Rupees fifty thousand only) in every savings bank or current account or term deposit account or any other deposit account (by whatever name called), may be allowed to be withdrawn by depositor, provided that wherever such depositor is having liability to the bank in any manner, i.e. either a borrower or surety, including loans against the bank deposits, the amount may be adjusted first to the relevant borrowal account/s. The amount required to pay the depositors should be kept by the bank separately in an escrow account and/or in earmarked securities which will be utilized by the bank only to pay to the depositors as per the revised directions."

Jul 22, 2016:- RBI imposes penalty 5.00 lakh (Rupees Five Lakh only) on Sardar Bhiladwala Pardi People's Co-operative Bank Ltd., Killa Pardi, Dist. Valsad (Scheduled UCB) (Gujarat), for violation of RBI guidelines pertaining to loans beyond the ceiling of 1.00 lakh to nominal members.

**Jul 26, 2016 :** RBI cancels Licence of Pioneer Urban Co-operative Bank Ltd., Lucknow

**Jul 31, 2016 :** RBI issue Directions to CKP Co-operative Bank Ltd, Mumbai, Maharashtra.

**Source : www.rbi.org.in**

ಕೇಂದ್ರ ಕಛೇರಿ : ದೂರವಾಣಿ ಸಂಖ್ಯೆಗಳು : 080–23378375–80, 23474408, 23573291
ಬೆಂಗಳೂರು ವಿಭಾಗೀಯ ಕಛೇರಿ : ನಂ. 141, 1ನೇ ಮೈನ್, 1ನೇ ಕ್ರಾಸ್, ಡಾ.ರಾಜ್‌ಕುಮಾರ ರಸ್ತೆ, 1–ಕೆ ಬ್ಲಾಕ್, ರಾಜಾಜಿನಗರ, ಬೆಂಗಳೂರು–560010. ದೂ : 080 23525546
ಮೈಸೂರು ವಿಭಾಗೀಯ ಕಛೇರಿ : ನಂ. 200, ಶಂಕರ ಮಠ ಮುಖ್ಯರಸ್ತೆ, ಕಿಲ್ಲೇ ಮೊಹಲ್ಲಾ, ಮೈಸೂರು. ದೂ: 0821 2332299
ಬೆಳಗಾವಿ ವಿಭಾಗೀಯ ಕಛೇರಿ : ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ : 0831–2401551
ಕಲಬುರಗಿ ವಿಭಾಗೀಯ ಕಛೇರಿಯ : ನಂ. 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ – 585102. ದೂ: 08472–270222.
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯ : ನಂ.246, 17 & 18ನೇ ಕ್ರಾಸ್ ಮಧ್ಯ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560055. ದೂ : 080–23449933/34.

Edited, Printed and Published by Sharangouda G. Patil – Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010